
ರಂಜನೆ ಬೋಧನೆ ಪ್ರಚೋದನೆ


ಗೌರಿ ಲಂಕೇಶ್

ಜುಲೈ 30, 2008 ರೂ. 12/-



ಒಕ್ಕಣ್ಣ ಬಾಬಾ ಕುರುಡು ಭಕ್ತರು

ಮಾಯಾವತಿ ಪ್ರಧಾನಿ?




MP ಬಜಾರ್!

ಯಡ್ಡಿ ಬಜೆಟ್: ಭರವಸೆ ಉಚಿತ-ದ್ರೋಹ ಖಚಿತ!



ಮೈಸೂರು: ನಾಮಧಾರಿ ಗೌಡರ ಮೇಲೆ ನಾಯಕರ ದಾಳಿ!

ಶಿವಮೊಗ್ಗ: ತಲೆ ಕತ್ತರಿಸಿ ವೇಣಿಗೆ ಕೊರಳೊಡ್ಡಿದವರು!




ಕೊಳ್ಳೇಗಾಲ: ಸತ್ಯಭಾಮ ಎಂಬ ಸರ್ವಾಧಿಕಾರಿಣಿ!



ಮೊಗ್ಗರಳಿ ಹೂವಾಗಿ

ಬದುಕಿನ ತಿರುವುಗಳು ಹೀಗೂ ಇರುತ್ತವೆ



ಮೊನ್ನೆ ಯಾವುದೋ ಕೆಲಸಕ್ಕೆಂದು ಬ್ಯಾಂಕಿಗೆ ಹೋಗಿದ್ದಾಗ, ಅಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರೆಲ್ಲ ಗುಂಪುಗೂಡಿ ಲಕಲಕ ಎಂದು ಏನೇನನ್ನೋ ಮಾತನಾಡುತ್ತಿದ್ದರು. ನನಗೂ ಬೇರೇನು ಕೆಲಸ ಇಲ್ಲದ್ದರಿಂದ ಸ್ವಲ್ಪ ಹೊತ್ತು ಕಾಯಲು ನಿರ್ಧರಿಸಿದೆ. ಆದರೆ ಅವರಲ್ಲೊಬ್ಬರು ನನ್ನನ್ನು ಗಮನಿಸಿ ನಾನಿದ್ದಲ್ಲಿಗೆ ಬಂದು "ಸಾರಿ ನಮ್ಮ ಹಳೇ ಕೊಲೀಗ್ ಬಂದಿದ್ದಾಳೆ. ಅವಳೊಂದಿಗೆ ಮಾತನಾಡುತ್ತಿದ್ದೆವು" ಎಂದು ಹೇಳಿ ನನ್ನ ಕೈಲಿದ್ದ ಚೆಕ್ ಅನ್ನು ಸ್ವೀಕರಿಸಿದರು.

ಅದೇ ಹೊತ್ತಿಗೆ ಆ ಗುಂಪೂ ಚದುರಲಾರಂಭಿಸಿತು. ಅವರ ಮಧ್ಯದಿಂದ ಸುಂದರವಾದ ರೇಷ್ಮೆ ಸೀರೆ ಉಟ್ಟಿದ್ದ, ಕಿವಿ ಮತ್ತು ಕೈಗಳಲ್ಲಿ ಹೊಳೆಯುತ್ತಿದ್ದ ವಜ್ರದ ಆಭರಣಗಳನ್ನು ತೊಟ್ಟಿದ್ದ ಮಹಿಳೆಯೊಬ್ಬರು ಪ್ರತ್ಯೇಕಗೊಂಡು "ಬಾಯ್, ಮುಂದಿನ ತಿಂಗಳು ಮತ್ತೆ ಬರ್ತೇನೆ" ಎಂದು ಹೇಳುತ್ತಾ ನಾನಿದ್ದ ಕಡೆ ನಡೆದು ಬರಲಾರಂಭಿಸಿದರು. ಆಕೆಯ ಮುಖವನ್ನು ಕಂಡಕೂಡಲೇ ನಾನೆಲ್ಲೋ ಅವರನ್ನು ನೋಡಿದಂತಿದೆಯಲ್ಲಾ ಎನಿಸಿತು. ಆಕೆಯೂ ಕೆಲಕ್ಷಣ ನನ್ನತ್ತ ನೋಡಿದರು. ಅದೇ ಹೊತ್ತಿಗೆ ನನ್ನ ಮುಂದಿದ್ದ ಬ್ಯಾಂಕ್‌ನವರು ನನಗೆ ಟೋಕನ್ ನೀಡಿದ್ದರಿಂದ ಅದನ್ನು ಪಡೆದು ನನ್ನ ಸರದಿಗಾಗಿ ಕಾಯಲು ಹತ್ತಿರವೇ ಇದ್ದ ಕುರ್ಚಿಯಲ್ಲಿ ಕುಳಿತೆ. ಆ ಮಹಿಳೆಯನ್ನು ಎಲ್ಲಿ ನೋಡಿದ್ದೇನೆ ಎಂದು ನೆನಪಿಸಿಕೊಳ್ಳಲು ಪ್ರಯತ್ನಿಸುತ್ತಿರುವಾಗಲೇ ಆಕೆ ನನ್ನ ಮುಂದೆ ಬಂದು ನಿಂತು "ನೀನು ವಿಮಲಾರವರ ಮಗಳು ಶಾರದೆ ಅಲ್ಲವೇ?" ಎಂದು ಕೇಳಿದರು. "ಹೌದು. ನಾನು ಕೂಡ ನಿಮ್ಮನ್ನು ಎಲ್ಲಿ ಭೇಟಿ ಆಗಿದ್ದೆ ಅಂತ ನೆನಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ" ಅಂದೆ.

"ನೀವು ಮಲ್ಲೇಶ್ವರಂನಲ್ಲಿ ವಾಸಿಸುತ್ತಿದ್ದಾಗ ನಿಮ್ಮ ಮನೆಯ ರಸ್ತೆಯಲ್ಲೇ ನಮ್ಮ ಮನೆ ಇತ್ತು, ನನ್ನ ತಮ್ಮ ಪ್ರಸಾದ್ ಮತ್ತು ತಂಗಿ ಪ್ರಕೃತಿ ನಿನ್ನ ವಯಸ್ಸಿನವರೇ ಆಗಿದ್ದರು. ಆಗ ನೀನಿನ್ನೂ ಹೈಸ್ಕೂಲಿನಲ್ಲಿದ್ದೆ. ನಮ್ಮ ಮನೆಗೆ ಹಲವು ಬಾರಿ ಬಂದಿದ್ದೆ" ಎಂದರು ಆಕೆ.

"ಅಯ್ಯೋ, ನೀವು ಪಾರ್ವತಿಯವರಲ್ಲವಾ? ಈಗ ಗುರುತು ಸಿಕ್ಕಿತು. ಹೇಗಿದ್ದೀರಿ?" ಎಂದೆ. "ಚೆನ್ನಾಗಿದ್ದೀನಿ. ಅಪ್ಪ ಅಮ್ಮ ಹೇಗಿದ್ದಾರೆ? ಅವರನ್ನೆಲ್ಲ ಕೇಳಿದೆ ಅಂತ ಹೇಳು" ಅಂದರು ಪಾರ್ವತಿ. ಅಷ್ಟೊತ್ತಿಗೆ ನನ್ನ ಟೋಕನ್ ನಂಬರ್ ಬಂದಿದ್ದರಿಂದ "ಒಂದೇ ಒಂದು ಸೆಕೆಂಡ್" ಎಂದು ಹೇಳಿ ಕ್ಯಾಷ್‌ಕೌಂಟರ್ ಕಡೆಗೆ ಹೋದೆ. ಆಗ ನನ್ನ ಮನಸ್ಸಿನಲ್ಲಿ ಹಲವಾರು ಪ್ರಶ್ನೆಗಳು ಎದ್ದೇಳಲಾರಂಭಿಸಿದ್ದವು. ನನಗೆ ನೆನಪಿದ್ದಂತೆ ಆಗ ಪಾರ್ವತಿಯವರ ಕುಟುಂಬ ಅಷ್ಟೇನೂ ಶ್ರೀಮಂತರಾಗಿರಲಿಲ್ಲ, ಅಷ್ಟೇ ಅಲ್ಲ; ವರದಕ್ಷಿಣೆಯನ್ನೂ ಕೊಡಲಾರದಂತಹ ಪರಿಸ್ಥಿತಿಯಲ್ಲಿದ್ದ ಪಾರ್ವತಿಯವರ ತಂದೆತಾಯಿ ಆಕೆಯನ್ನು ಹತ್ತಿರದ ಸಂಬಂಧಿಯೊಬ್ಬರಿಗೆ ಕೊಟ್ಟು ಮದುವೆ ಮಾಡಿದ್ದರು. ಮದುವೆಯಾದ ಹಲವೇ ತಿಂಗಳಲ್ಲಿ ಪಾರ್ವತಿಯ ಗಂಡ ತೀರಿಕೊಂಡರೆಂದೂ, ಆಕೆ ಅನೇಕ ಕಷ್ಟಗಳನ್ನು ಎದುರಿಸುತ್ತಿದ್ದಾರೆಂದೂ ಕೇಳಿಬಂದಿತ್ತು, ಆನಂತರ ನಾವು ಕೂಡ ಮಲ್ಲೇಶ್ವರಂ ಮನೆಯನ್ನು ತೊರೆದಿದ್ದರಿಂದ ಅವರ ಸಂಸಾರದೊಂದಿಗಿನ ಸಂಪರ್ಕ ಕಡಿದುಹೋಗಿತ್ತು, ಆದರೆ ಈಗ ನೋಡಿದರೆ ಪಾರ್ವತಿ ಹಿಂದೊಮ್ಮೆ ಇದೇ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರೆಂದೂ, ಈಗ ಆಕೆ ಐಶ್ವರ್ಯದ ಸುಪ್ಪತ್ತಿಗೆಯಲ್ಲಿದ್ದಾರೆಂದೂ ಸ್ಪಷ್ಟವಾಗುತ್ತಿದೆ. ಇದೆಲ್ಲ ಸಾಧ್ಯವಾಗಿದ್ದು ಹೇಗೆ ಎಂದು ಯೋಚಿಸುತ್ತಲೇ ಪಾರ್ವತಿ ಇದ್ದಲ್ಲಿಗೆ ಹಿಂದಿರುಗಿದೆ.

ಇಬ್ಬರೂ ಬ್ಯಾಂಕಿನಿಂದ ಹೊರಬಂದಾಗ ತಮ್ಮ ಐಷಾರಾಮಿ BMW ಕಾರ್ ಹತ್ತಲು ಪಾರ್ವತಿ ಸಜ್ಜಾದರು. ಅಂತಹ ದುಬಾರಿ ಕಾರ್ ಕಂಡು ನನಗೆ ಅಚ್ಚರಿಯಾಯಿತಾದರೂ ಅದನ್ನು ತೋರ್ಪಡಿಸದೆ ಖಾಲಿ ಆಟೋಗಾಗಿ ಅತ್ತಿತ್ತ ನೋಡಿದೆ.

"ಶಾರದೆ, ನಿನ್ನನ್ನು ಎಲ್ಲಾದರೂ ಡ್ರಾಪ್ ಮಾಡಲಾ? ಯಾವ ಕಡೆ ಹೋಗ್ತಿದ್ದೀ?" ಎಂದು ಪಾರ್ವತಿ ಕೇಳಿದರು.

"ಇಲ್ಲ, ಪರವಾಗಿಲ್ಲ, ಫ್ರೆಂಡ್ ಒಬ್ಬರನ್ನು ಭೇಟಿ ಆಗಲು ಕೋರಮಂಗಲದತ್ತ ಹೋಗ್ತಿದ್ದೇನೆ" ಎಂದೆ.

"ನನ್ನ ಮನೆ ಇರೋದೂ ಕೋರಮಂಗಲದಲ್ಲೇ ಬಾ, ನಿನ್ನನ್ನ ಡ್ರಾಪ್ ಮಾಡ್ತೇನೆ" ಎಂದು ನನ್ನನ್ನು ತಮ್ಮ ಕಾರಿಗೆ ಹತ್ತಿಸಿಕೊಂಡರು ಪಾರ್ವತಿ.


ಎಸಿಯಿಂದ ತಂಪಾಗಿದ್ದ ಕಾರ್ ಅನ್ನು ಹತ್ತಿ ಅಗಲವಾಗಿ ಸೋಂಪಾಗಿದ್ದ ಸೀಟಿನ ಮೇಲೆ ಕುಳಿತ ನಾನು ಕಾರಿನ ಸುತ್ತಲೂ ಕಣ್ಣು ಹಾಯಿಸಿದೆ. ನನ್ನ ಮನಸ್ಸಿನಲ್ಲಿದ್ದುದ್ದನ್ನು ಕ್ಷಣಾರ್ಧದಲ್ಲಿ ಅರ್ಥಮಾಡಿಕೊಂಡ ಪಾರ್ವತಿ "ನಿನಗೆ ನನ್ನ ಬಗ್ಗೆ ತುಂಬಾ ಕುತೂಹಲ ಆಗ್ತಿದೆ ಅಂತ ನನಗೆ ಗೊತ್ತು, ಅದಕ್ಕೂ ಮುಂಚೆ ನೀನು ಏನು ಓದಿದ್ದೀಯಾ? ಏನು ಮಾಡ್ತಿದ್ದೀಯಾ ಅಂತ ಹೇಳು" ಎಂದು ಪ್ರಶ್ನಿಸಿದರು.

"ಇಲ್ಲೇ ಲಾ ಮುಗಿಸಿದ ಮೇಲೆ ಎರಡು ವರ್ಷ ಲಾ ಪ್ರಾಕ್ಟೀಸ್ ಮಾಡಿದೆ. ಆಮೇಲೆ ಅಮೆರಿಕಕ್ಕೆ ಹೋಗಿ ಮ್ಯಾನೇಜ್‌ಮೆಂಟ್‌ನಲ್ಲಿ ಪಿಎಚ್‌ಡಿ ಮಾಡಿದೆ. ಮುಂದೇನು ಅಂತ ನಿರ್ಧರಿಸುವ ಮುನ್ನ ಓದು, ಪರೀಕ್ಷೆ, ಕೆಲಸದ ಒತ್ತಡ ಯಾವುದೂ ಇಲ್ಲದೆ ಸ್ವಲ್ಪ ಸಮಯ ಕಳೆಯೋಣ ಅನ್ನಿಸಿತು. ಇನ್ನೊಂದೆರಡು ತಿಂಗಳಲ್ಲಿ ನನ್ನ ಉಳಿತಾಯ ಮುಗಿಯುತ್ತದೆ. ಅಷ್ಟೊತ್ತಿಗೆ ಯಾವುದೋ ಒಂದು ಕೆಲಸ ಹುಡುಕಿಕೊಳ್ಳಬೇಕು" ಎಂದು ನಕ್ಕೆ ನಾನು ನನ್ನ ಆರಾಮ್ ಜೀವನದ ಬಗ್ಗೆ ವಿವರಿಸುತ್ತಾ.

"ಪರವಾಗಿಲ್ಲ, ನಮ್ಮ ವಿಮಲಾರ ಮಗಳು ರಸ್ತೆಯಲ್ಲಿ ಆಟೋಗಾಗಿ ಕಾಯುತ್ತಿದ್ದುದ್ದನ್ನು ನೋಡಿ ನನಗೂ ಸ್ವಲ್ಪ ಗಾಬರಿಯಾಗಿತ್ತು. ಈಗ ನಿನ್ನಷ್ಟು ಕ್ವಾಲಿಫಿಕೇಷನ್ ಹೊಂದಿರುವವರಿಗೆ ಲಕ್ಷಾಂತರ ರೂಪಾಯಿ ಸಂಬಳ ಕೊಡುತ್ತಾರೆ". ಎಂದರು ಪಾರ್ವತಿ.

ಹೊರಗಡೆಯ ಧೂಳು, ಸದ್ದು ಮತ್ತು ಶೆಖೆ ತಾಕದೆ ತಂಪಾದ ಪ್ರತ್ಯೇಕ ಗ್ರಹದಂತೆ ನಾವಿದ್ದ BMW ಕಾರ್ ಸಾಗಿತ್ತು, ನಾನು ಪಾರ್ವತಿಯವರತ್ತ ನೋಡಿದೆ. ಅದನ್ನು ಅರ್ಥ ಮಾಡಿಕೊಂಡ ಅವರು "ಹೂ, ಈಗ ನನ್ನ ಬಗ್ಗೆ. ನಾನು ಡಿಗ್ರಿ ಮುಗಿಸುತ್ತಿದ್ದಂತೆ ನಮ್ಮ ಸಂಬಂಧಿಕರೊಬ್ಬರೊಂದಿಗೆ ನನ್ನ ಅಪ್ಪ ಅಮ್ಮ ನನ್ನ ಮದುವೆ ಮಾಡಿಸಿದರು. ಆತ ಒಳ್ಳೆಯವರೇ ಆಗಿದ್ದರು. ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ನಮ್ಮಿಬ್ಬರ ಮದುವೆಯಾಗಿ ಒಂದು ವರ್ಷವಾಗುವುದರೊಳಗೇ ಅವರು ಕ್ಯಾನ್ಸರ್‌ನಿಂದ ಮರಣ ಹೊಂದಿದರು. ಆಮೇಲೆ ಅವರಿಗಿದ್ದ ಚಿಕ್ಕ ಆಸ್ತಿಪಾಸ್ತಿಗಾಗಿ ಅವರ ತಂದೆ ತಾಯಿ ನನ್ನೊಂದಿಗೆ ಜಗಳವಾಡಲು ಪ್ರಾರಂಭಿಸಿದರು. ಹೇಗಿದ್ದರೂ ನಾನು ಡಿಗ್ರಿ ಮುಗಿಸಿದ್ದರಿಂದ ನನ್ನ ಮನೆಯವರು ಕೆಲಸ ಮಾಡುತ್ತಿದ್ದ ಬ್ಯಾಂಕ್ ನನಗೆ ಅನುಕಂಪದ ಆಧಾರದ ಮೇಲೆ ಕೆಲಸ ನೀಡಲು ಮುಂದಾಯಿತು. ಕೆಲಸವೊಂದಿದ್ದರೆ ಯಾರ ಹಂಗೂ ಇಲ್ಲದೆ ನಾನು ಬದುಕಬಲ್ಲೆ ಎಂಬ ಧೈರ್ಯದ ಮೇಲೆ ನಾನು ಇದನ್ನೇ ಆಯ್ಕೆ ಮಾಡಿಕೊಂಡು ಇನ್ನು ಮುಂದೆ ನನ್ನ ಗಂಡನ ಆಸ್ತಿಯ ಮೇಲೆ ನಾನು ಯಾವ ಹಕ್ಕನ್ನೂ ಸಾಧಿಸುವುದಿಲ್ಲ ಎಂಬ ಪತ್ರವನ್ನು ನನ್ನ ಮಾವ-ಅತ್ತೆಗೆ ಬರೆದುಕೊಟ್ಟೆ.

ನನಗೆ ಕೆಲಸವೇನೋ ಸಿಕ್ಕಿತು. ಪ್ರತಿ ತಿಂಗಳು ಬರುವ ಸಂಬಳವೂ ನೆಮ್ಮದಿ ನೀಡಿತು. ಆದರೆ ಏಕಾಂಗಿತನ ನನ್ನನ್ನು ಕಾಡಲಾರಂಭಿಸಿತು. ಅದನ್ನು ಅರ್ಥ ಮಾಡಿಕೊಂಡ ನನ್ನ ಕೆಲ ಪುರುಷ ಸಹೋದ್ಯೋಗಿಗಳು, ಸಂಬಂಧಿಗಳು, ಇತರರು ನನ್ನನ್ನು ದುರ್ಬಳಕೆ ಮಾಡಿಕೊಳ್ಳಲು ನೋಡಿದರು. ಎಲ್ಲರೂ ನನ್ನ ಬಗ್ಗೆ ಅನುಕಂಪ ತೋರಿಸುವುದೇನು, ಹಿತೈಷಿಗಳಂತೆ ವರ್ತಿಸುವುದೇನು, ನನ್ನ ಗುಣಗಾನ ಮಾಡುವುದೇನು? ಆದರೆ ಮದುವೆ ಎನ್ನುತ್ತಿದ್ದಂತೆ "ನಿನಗಾಗಿ ನನ್ನ ಹೆಂಡತಿಯನ್ನು ಬಿಡಬಲ್ಲೆ ಆದರೆ ನನ್ನ ಮಕ್ಕಳನ್ನು ಹೇಗೆ ಬಿಟ್ಟುಬರಲಿ?" ಎಂಬ ತಕರಾರು; "ನನ್ನ ತಂದೆತಾಯಿಗೆ ವಯಸ್ಸಾಗಿದೆ. ಅವರಿಗೆ ನೋವುಂಟು ಮಾಡಲಾರೆ" ಎಂಬ ತರ್ಕ; ಜಾತಿ, ವರ್ಗ, ಇತರೆ ಭೇದಭಾವ ಇಂತಹದ್ದೇ ಹಲವಾರು ವಿಷಯಗಳನ್ನು ಅಡ್ಡಿಯಾಗಿ ತರುತ್ತಿದ್ದರು. ನನ್ನ ಜೀವನ ಹೀಗೆ ಏಕಾಂತದಲ್ಲಿ ಮುಗಿಯುತ್ತದೆ ಎಂದು ನಾನು ಭಾವಿಸಿದ್ದಾಗ ನನಗೆ ಗೊತ್ತಿಲ್ಲದಂತೆ ನಮ್ಮ ಬ್ಯಾಂಕಿಗೆ ಬರುತ್ತಿದ್ದ ಉದ್ಯಮಿಯೊಬ್ಬರ ಗಮನವನ್ನು ನಾನು ಸೆಳೆದಿದ್ದೆ. ಅವರಿಗೆ ನನಗಿಂತ ಹದಿನೈದು ವರ್ಷ ಹೆಚ್ಚು ವಯಸ್ಸು. ಅವರ ಹೆಂಡತಿ ರಸ್ತೆ ಅಪಘಾತದಲ್ಲಿ ಮರಣಹೊಂದಿದ್ದು ತಮ್ಮ ಇಬ್ಬರ ಮಕ್ಕಳ ಜವಾಬ್ದಾರಿಯನ್ನು ಅವರೇ ವಹಿಸಿದ್ದರು. ಒಂದು ದಿನ ಬ್ಯಾಂಕಿಗೆ ಬಂದ ಅವರು ನನ್ನನ್ನು ಪ್ರತ್ಯೇಕವಾಗಿ ಭೇಟಿ ಆಗಲು ಇಚ್ಛಿಸಿದರು. ಅವರ ಉದ್ದೇಶದ ಬಗ್ಗೆ ನನಗೆ ಹಿಂಜರಿಕೆ ಇತ್ತು, ಆದರೆ ಅವರನ್ನು ಹೋಟೆಲ್ ಒಂದರಲ್ಲಿ ಕಾಫಿಗೆ ಭೇಟಿ ಆದಾಗ ಅವರ ಸಭ್ಯವರ್ತನೆ ನನಗೆ ಇಷ್ಟವಾಯಿತು. ನಮ್ಮಿಬ್ಬರ ವಯಸ್ಸಿನ ನಡುವೆ ಅಜಗಜಾಂತರ ವ್ಯತ್ಯಾಸವಿದ್ದರೂ ನಮ್ಮಿಬ್ಬರ ಜೀವನದಲ್ಲಿನ ಏಕಾಂಗಿತನ ಮತ್ತು ಸಂಗಾತಿಗಾಗಿ ಬಯಕೆ ನಮ್ಮನ್ನು ಹತ್ತಿರ ತಂದವು. ನಮ್ಮ ಬ್ಯಾಂಕಿನಲ್ಲಿನ ಅವರ ಖಾತೆಯನ್ನು ಗಮನಿಸಿ ಅವರು ಸಾಕಷ್ಟು ಶ್ರೀಮಂತರು, ಆದ್ದರಿಂದ ನನ್ನ ಭವಿಷ್ಯಕ್ಕೆ ಯಾವ ಸಮಸ್ಯೆಯೂ ಇಲ್ಲ ಎಂದು ಗೊತ್ತಾಯಿತು. ಅವರು ಮದುವೆಯ ಪ್ರಸ್ತಾಪವನ್ನು ನನ್ನ ಮುಂದಿಟ್ಟಾಗ ನಾನು ಒಪ್ಪಿಕೊಂಡೆ. ಮೊದಮೊದಲು ಅವರ ಇಬ್ಬರು ಮಕ್ಕಳು ನನ್ನ ಬಗ್ಗೆ ಗುಮಾನಿ ಹೊಂದಿದ್ದರು. ಆದರೆ ಒಂದು ವರ್ಷದಲ್ಲೇ ಅವರು ನನ್ನನ್ನು ಅಮ್ಮ ಎಂದು ಕರೆಯಲು ಪ್ರಾರಂಭಿಸಿದರು. ನನ್ನ ಮನೆಯವರು ಬಿಸಿನೆಸ್‌ನಲ್ಲಿ ತುಂಬಾ ಯಶಸ್ಸು ಗಳಿಸಿ ಕೋಟ್ಯಂತರ ರೂಪಾಯಿ ಲಾಭ ಮಾಡಿದರು. ನನ್ನನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾರೆ, ಅಕ್ಕರೆಯ ಹೊಳೆಯನ್ನೇ ಹರಿಸುತ್ತಾರೆ. ಇದಕ್ಕಿಂತ ನನಗೆ ಇನ್ನೇನು ಬೇಕು. ನನ್ನಷ್ಟು ಅದೃಷ್ಟವಂತೆ ಇನ್ನೊಬ್ಬರಿಲ್ಲ ಅನ್ನಿಸುತ್ತೆ."



ಪಾರ್ವತಿ ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಅದೂ, ಇದೂ ಮಾತಾಡುತ್ತಲೇ ಕೋರಮಂಗಲ ಬಂದೇಬಿಟ್ಟಿತು. ಅವರಿಗೆ ಥ್ಯಾಂಕ್ಸ್ ಹೇಳಿ ಕಾರಿನಿಂದ ಇಳಿದೆ. BMW ಕಾರ್ ಜುಮ್ ಅಂತ ಮುಂದೆ ಸಾಗಿತು. ಫೋರಮ್‌ನಲ್ಲಿನ ಪಿವಿಆರ್ ಥಿಯೇಟರ್ ಮುಂದೆ ನನಗಾಗಿ ಕಬೀರ್ ಕಾದಿದ್ದ. ಸಿನಿಮಾ ಶುರುವಾಗುವುದಕ್ಕೆ ಇನ್ನೂ ಇಪ್ಪತ್ತು ನಿಮಿಷಗಳಿದ್ದವು.

ಇಬ್ಬರೂ ಕಾಫಿ ಹೀರುತ್ತಾ ಮಾತಿಗಿಳಿದೆವು. ಪಾರ್ವತಿಯ ಕತೆ ಕೇಳಿ "ಜೀವನದಲ್ಲಿ ಸಾವು, ನೋವು, ಸುಖ-ದುಃಖ ಎಲ್ಲವೂ ಬರುತ್ತವೆ. ಆದರೆ ಕಷ್ಟಕಾಲ ಬಂದಾಗ ಧೃತಿಗೆಡಬಾರದು, ಮುಂದೊಂದು ದಿನ ಒಳ್ಳೆಯದು ಆಗೇ ಆಗುತ್ತೆ ಎಂಬ ನಂಬಿಕೆ ಇರಬೇಕು. ಅದಕ್ಕೆ ಪಾರ್ವತಿ ಜೀವನವೇ ಒಂದು ಉದಾಹರಣೆ ಅನ್ನಿಸುತ್ತೆ" ಎಂದ ಕಬೀರ್.

■ ಶಾರದೆ

Quote - Unquote

"ಬಿಜೆಪಿ ಎಂಬ ಪಕ್ಷ ಸಂಪೂರ್ಣ ಅಧಿಕಾರ ಲಾಲಸಿಗರ, ಕಪ್ಪು ಹಣದವರ, ಚಾರಿತ್ರ್ಯಹೀನರ ತೆಕ್ಕೆಯಲ್ಲಿ ಉಸಿರುಗಟ್ಟುತ್ತಾ ಏಗುತ್ತಿದೆ... ಅಧಿಕಾರದ ಆತಂಕ, ದಾಹಗಳಿಂದಾಗಿ ಕೆಲವೇ ಕೆಲವು ಮಂದಿ ಬಿಜೆಪಿಯನ್ನು ವಾಮಮಾರ್ಗಿಗಳ ಮಗ್ಗುಲಿಗೆ ತಳ್ಳಿದ್ದಾರೆ. ಸಂತೆಯಲ್ಲಿ ಚೌಕಾಸಿ ವ್ಯಾಪಾರ ನಡೆದ ರೀತಿಯಲ್ಲಿ ಶಾಸಕರ ವ್ಯಾಪಾರವನ್ನು ಬಿಜೆಪಿಯೇ ನಡೆಸುವ ಮಟ್ಟಕ್ಕೆ ತಲುಪಿದೆ. ಕೆಲವು ನಾಯಕರ ವ್ಯಕ್ತಿಗತ ಜೀವನಶೈಲಿ ಗಬ್ಬುನಾತ ಹೊರಡಿಸುತ್ತಿದೆ.... ರಾಜ್ಯಕ್ಕೆ ರಾಜ್ಯವೇ ಶೇಮ್ ಶೇಮ್ ಎನ್ನುತ್ತಿದೆ.

-ಉರಿಮಜಲು ರಾಮಭಟ್, ಕರಾವಳಿ ಪ್ರದೇಶದಲ್ಲಿ ಮತ್ತು ಬಿಜೆಪಿಯನ್ನು ಬೆಳೆಸಿದ ನಾಯಕ.



"ನೀನೇ ನನ್ನ ರಾಜ, ನೀನೇ ನನ್ನ ಪ್ರಿಯಕರ, ನೀನೇ ನನ್ನ ಉನ್ಮತ್ತೋತ್ಸವ, ನೀನೇ ನನ್ನ ದಡ್ಡತನ...."


ಕಾರ್ಲಾ ಬ್ರುನಿ, ಫ್ರಾನ್ಸಿನ ಅಧ್ಯಕ್ಷ ನಿಕೊಲಾಸ್ ಸರ್ಕೋಜಿಯ ಪತ್ನಿ, ತನ್ನ ಗಂಡನಿಗೆ ಅರ್ಪಿಸಿರುವ ಹಾಡೊಂದರಲ್ಲಿ.

"ಕಳೆದ ಒಂದು ವರ್ಷದಿಂದ ತಾವು ಪಕ್ಷದ ಸಿದ್ಧಾಂತಕ್ಕೆ ಬದ್ಧರಾಗಿ ನೈತಿಕ ಹೋರಾಟ ನಡೆಸುತ್ತಿರುವುದಾಗಿ ಸಿಪಿಎಂ ನಾಯಕ ಪ್ರಕಾಶ್ ಕಾರಟ್ ಹೇಳುತ್ತಿದ್ದರು. ಆದರೆ ಈಗ ಅವರು ತಮ್ಮ ಸಿದ್ಧಾಂತಗಳನ್ನು ಗಾಳಿಗೆ ತೂರಿ ತಮ್ಮ ನಿಜವಾದ ಬಣ್ಣವನ್ನು ಬಹಿರಂಗಪಡಿಸಿದ್ದಾರೆ. ಯುಪಿಎ ಸರ್ಕಾರವನ್ನು ಉರುಳಿಸಲು ತಮಗೆ ನೆರವು ನೀಡಿದರೆ ಮುಂದೆ ತೃತೀಯರಂಗದ ಪ್ರಧಾನಮಂತ್ರಿ ಸ್ಥಾನದ ಆಮಿಷವನ್ನು ಬಿಎಸ್‌ಪಿಯ ನಾಯಕಿ ಮಾಯಾವತಿಗೆ ನೀಡಿದ್ದಾರೆ"

-ಪ್ರೇಮ್ ಶಂಕರ್ ಝಾ ತಮ್ಮ ಅಂಕಣದಲ್ಲಿ



"ಅಣು ಒಪ್ಪಂದಕ್ಕೆ ವಿರೋಧ ವ್ಯಕ್ತಪಡಿಸಿದ್ದಕ್ಕೆ ಇವತ್ತು ಸಿಪಿಎಂ ಪಕ್ಷ ಕೋಮುವಾದಿ ಶಕ್ತಿಗಳೊಂದಿಗೆ ಕೈಜೋಡಿಸುತ್ತಿದೆ ಎಂಬ ಘೋರ ಆರೋಪ ಕೇಳಿಬರುತ್ತಿದೆ. ಆದರೆ ಕಾಂಗ್ರೆಸ್ ಪಕ್ಷದ ನೆನಪಿನ ಶಕ್ತಿ ಅದಕ್ಕೆ ತುಂಬ ಅನುಕೂಲಕರವಾಗಿರುವಂತಿದೆ. ಏಕೆಂದರೆ ಕಳೆದ ಬಾರಿ ಸಂಸತ್ತಿನಲ್ಲಿ ಸರಕಾರವೊಂದನ್ನು ಉರುಳಿಸಿದಾಗ ಕಾಂಗ್ರೆಸ್ ಮತ್ತು ಬಿಜೆಪಿ ಜೊತೆಯಾಗಿ ತಮ್ಮ ಮತಗಳನ್ನು ಚಲಾಯಿಸಿ ವಿ.ಪಿ. ಸಿಂಗ್ ನೇತೃತ್ವದ ಸರ್ಕಾರವನ್ನು ಅಂತ್ಯಗೊಳಿಸಿದ್ದವು. ಆಗ ಕಾಂಗ್ರೆಸ್ ಪಕ್ಷವಾಗಲಿ, ಅಂದು ಅದರ ನಾಯಕರಾಗಿದ್ದ ರಾಜೀವ್‌ಗಾಂಧಿಯಾಗಲಿ ಕೋಮುವಾದಿಗಳಾಗಿದ್ದರೇನು?



ಅಂದಹಾಗೆ, ವಿ.ಪಿ. ಸಿಂಗ್ ಸರ್ಕಾರದ ಆಡಳಿತಾವಧಿಯಲ್ಲಿ ಮಾರ್ಕ್ಸಿಸ್ಟರು ಮತ್ತು ಬಿಜೆಪಿಗಳು ಅವರನ್ನು ಬೆಂಬಲಿಸಿದ್ದವು. ಪ್ರತಿವಾರ ನಡೆಯುತ್ತಿದ್ದ ಸಭೆಗಳಿಂದ ಹರಿಕಿಶನ್‌ಸಿಂಗ್ ಸುರ್ಜಿತ್ ಮತ್ತು ಎಲ್.ಕೆ. ಅಡ್ವಾಣಿ ನಗುನಗುತ್ತಾ ಹೊರಬರುತ್ತಿದ್ದರು. ಅಂದರೆ ಸುರ್ಜಿತ್ ಸಿಂಗ್ ಕೋಮುವಾದಿ ಆಗಿದ್ದರು ಎಂದಾ ಅರ್ಥ? ಬಿಜೆಪಿಗಿಂತ ವಿಭಿನ್ನ ಕಾರಣಗಳಿಗೆ ಅಣುಒಪ್ಪಂದವನ್ನು ವಿರೋಧಿಸಿರುವ ಪ್ರಕಾಶ್ ಕಾರಟ್ ಕೋಮುವಾದಿಯಾಗಿದ್ದಾರೆ ಎಂದು ಆರೋಪಿಸುವುದೆಷ್ಟು ಸರಿ? ಇಂತಹ ಕುತಂತ್ರಗಳನ್ನು ನಂಬುವಷ್ಟು ಮೂರ್ಖರಲ್ಲ ಭಾರತೀಯ ಮತದಾರರು."

-ಎಂ.ಜೆ. ಅಕ್ಬರ್ ತಮ್ಮ ಅಂಕಣದಲ್ಲಿ

"ಹಾಲಿನ ಕೊರತೆಯಿಂದ ನರಳುತ್ತಿದ್ದ ಪೂರ್ವ ದೆಹಲಿಯ ನಮ್ಮ ವರದಿಗಾರ ತಿಳಿಸಿರುವುದೇನೆಂದರೆ ಇವತ್ತಿನಿಂದ ಆತನಿಗೆ 'ರಿಲಯನ್ಸ್ ಹಾಲು' ಸರಬರಾಜಾಗುತ್ತಿದೆಯಂತೆ. 'ಡೈರಿ ಪ್ಯೂರ್' ಹೆಸರಿನ ಈ ಕೆನೆಯುಕ್ತ ಹಾಲಿನ ಬೆಲೆ ಅರ್ಧ ಲೀಟರ್‌ಗೆ ಕೇವಲ 13 ರೂಪಾಯಿಗಳಾಗಿದ್ದು ಅದನ್ನು ಮುಂಬೈಯಲ್ಲಿ ಕೇಂದ್ರ ಕಚೇರಿ ಹೊಂದಿರುವ ರಿಲಯನ್ಸ್ ಡೈರಿ ಫುಡ್ಸ್ ಕಂಪನಿ ತಯಾರಿಸಿ ಆತ ನಿದ್ರಿಸುತ್ತಿದ್ದಾಗ ಆತನ ಮನೆಯ ಬಾಗಿಲ ಮುಂದೆ ಇಡಲಾಗಿತ್ತಂತೆ.

ನಮ್ಮ ವರದಿಗಾರ ಇವತ್ತು ಕಳುಹಿಸಿರುವ 'ಅಣಕ' ವರದಿ ಹೀಗಿದೆ:



"ಟೆಕ್ಸ್‌ಟೈಲ್ಸ್, ಪೆಟ್ರೋಲ್, ಪೆಟ್ರೋಕೆಮಿಕಲ್ಸ್ ಪ್ಲಾಸ್ಟಿಕ್, ವಿದ್ಯುತ್, ತರಕಾರಿ, ಔಷಧಿ, ಮೊಬೈಲ್ ಫೋನು, ಚಪ್ಪಲಿ, ಅಕ್ಕಿ-ಬೇಳೆ, ಪುಸ್ತಕ, ಕನ್ನಡಕ, ಕಸಪೊರಿಕೆಗಳನ್ನು ಇಲ್ಲಿಯವರೆಗೂ ಮಾರಾಟ ಮಾಡಿರುವ ಮುಖೇಶ್ ಮತ್ತು ಅನಿಲ್ ಅಂಬಾನಿಯ ಸಾಮ್ರಾಜ್ಯ ಈಗ ನನಗೆ ಹಾಲನ್ನೂ ದಯಪಾಲಿಸಿದೆ.

ಇಲ್ಲಿಯವರೆಗೂ ಧೀರೂಭಾಯ್ ಅಂಬಾನಿಯ ಪುತ್ರರು ಎರಡು ಕ್ಷೇತ್ರಗಳನ್ನಷ್ಟೇ ಪ್ರವೇಶಿಸಿಲ್ಲ. ಅವುಗಳೆಂದರೆ ಹಜಾಮ ಅಂಗಡಿ ಮತ್ತು ಆಟೋರಿಕ್ಷಾಗಳು. ಆಕಸ್ಮಾತ್ ಭಾರತ ಸರ್ಕಾರ ವೈಶ್ಯಾವೃತ್ತಿಯನ್ನೂ ಅಧಿಕೃತಗೊಳಿಸಿದರೆ ಅದಕ್ಕೆ ಬಿಡ್ ಮಾಡುವವರಲ್ಲಿ ರಿಲಯನ್ಸ್ ಕಂಪನಿ ಮುಂದಾಳತ್ವ ಹೊಂದಿರುತ್ತದೆ ಎಂಬುದರ ಬಗ್ಗೆ ಯಾವ ಅನುಮಾನವೂ ಇಲ್ಲ. ಅದಾದ ನಂತರ ನಾವು ಚುನಾವಣಾ ಪ್ರಕ್ರಿಯೆಯನ್ನೇ ನಿಲ್ಲಿಸಿ ಭಾರತ ಸರ್ಕಾರಕ್ಕೆ ರಿಲಯನ್ಸ್‌ನವರನ್ನೇ ಬಿಡ್ ಮಾಡಲು ಬಿಡುವುದೊಳಿತು.

ಹಿಂದೊಮ್ಮೆ ಗುಜರಾತಿನ ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ ಎಂಬ ಬನಿಯಾ ನಮ್ಮ ದೇಶಕ್ಕೆ ಸೆಲ್ಫ್ ರಿಲಯನ್ಸ್ ಬೇಕು ಎಂದಿದ್ದರು. ಆದರೆ ಈಗ ಅದೇ ಗುಜರಾತಿನ ಅಂಬಾನಿ ಎಂಬ ಬನಿಯಾಗಳು ನಮ್ಮೆಲ್ಲರಿಗೂ ಸರಳವಾದ ಮತ್ತು ಸ್ಪಷ್ಟವಾದ ರಿಲಯನ್ಸ್ ಅನ್ನು ನೀಡುತ್ತಿದ್ದಾರೆ."

-'ಚುರುಮುರಿ' ಎಂಬ ಬ್ಲಾಗ್ ಸ್ಪಾಟ್‌ನಲ್ಲಿ ಪ್ರಕಟವಾಗಿರುವ ಅಣಕ.

ಹೆಡೆಯೊಂದಿಗೆ ಸ್ನೇಹ, ಬಾಲದೊಂದಿಗೆ ದ್ವೇಷ




ಕಂಡಹಾಗೆ

■ ಗೌರಿ ಲಂಕೇಶ್

ಕಾಮ್ರೇಡ್ ಪ್ರಕಾಶ್ ಕಾರಟ್ ಅವರಿಗೆ,

ನಮಸ್ಕಾರ. ಇತ್ತೀಚೆಗೆ ಮುಖ್ಯವಾಹಿನಿಯ ಇಂಗ್ಲಿಷ್ ಪತ್ರಿಕೆಗಳು ತಮ್ಮ ವಿರುದ್ಧ ಮಾಡಿರುವ ಟೀಕಾ ಪ್ರಹಾರದಿಂದ ನೀವು ಕಿಂಚಿತ್ತೂ ವಿಚಲಿತರಾಗಿಲ್ಲ ಎಂದು ನಿಮ್ಮ ಟಿವಿ ಸಂದರ್ಶನಗಳನ್ನು ನೋಡಿದಾಗ ಗೊತ್ತಾಯಿತು. ಬಿಡಿ, ಆ ಪತ್ರಿಕೆಗಳನ್ನು ನಿರ್ಲಕ್ಷಿಸುವುದೇ ವಾಸಿ. ಏಕೆಂದರೆ ಅವು ಭಾರತದ ಪತ್ರಿಕೆಗಳಾಗಿ ಉಳಿದಿಲ್ಲ, ಅವು ಸಂಪೂರ್ಣವಾಗಿ ಅಮೆರಿಕದ ಗುಲಾಮಿ ಪತ್ರಿಕೆಗಳಾಗಿ ಪರಿವರ್ತನೆಗೊಂಡಿವೆ. ಅದರಲ್ಲೂ ಟೈಮ್ಸ್ ಆಫ್ ಇಂಡಿಯಾ ಎಂಬ ಇಂಗ್ಲಿಷ್ ಪತ್ರಿಕೆ ಇತ್ತೀಚೆಗೆ ಭಾರತೀಯರ ಫೋಟೋಗಳನ್ನೂ ಪ್ರಕಟಿಸದೆ, ಬಿಳಿ ಚರ್ಮದ ಹುಡುಗ-ಹುಡುಗಿಯರ ಫೋಟೋಗಳನ್ನು ಮುದ್ರಿಸಲಾರಂಭಿಸಿದೆ.



ಟೈಮ್ಸ್ ಸೇರಿದಂತೆ ಇತರೆ ಇಂಗ್ಲಿಷ್ ಪತ್ರಿಕೆಗಳು ಎಡಪಂಥೀಯ ಪಕ್ಷಗಳನ್ನು ಲೇವಡಿ ಮಾಡುತ್ತಾ, ತಮ್ಮನ್ನು ಭಾರತದ ರಾಜಕೀಯದ ಪ್ರಜ್ಞೆಯೇ ಇಲ್ಲದ ನಾಯಕ ಎಂಬಂತೆ ಬಿಂಬಿಸುತ್ತಾ, ಅಮೆರಿಕಾದೊಂದಿಗಿನ ಒಪ್ಪಂದಕ್ಕೆ ಸಮ್ಮತಿ ಸೂಚಿಸದೆ ನಿಮ್ಮ ಪಕ್ಷಕ್ಕೆ ಮಾತ್ರವಲ್ಲ, ಇಡೀ ದೇಶಕ್ಕೆ ದ್ರೋಹ ಬಗೆದಿದ್ದೀರಿ ಎಂದೆಲ್ಲಾ ಅರಚಾಡಿವೆ. ಅದಕ್ಕೆ ತಕ್ಕಂತೆ ಹಲವು ರಾಜಕೀಯ ಪಕ್ಷಗಳೂ ತಮ್ಮ ವಿರುದ್ಧ ಕಿಡಿಕಾರಿವೆ.





ನಂದಿಗ್ರಾಮ ಮತ್ತು ಸಿಂಗೂರಿನ ಕೆಲ ದೃಶ್ಯಗಳು

ಆದರೆ ನೀವು ನಿಮ್ಮ ಪಕ್ಷದ ತತ್ವ ಮತ್ತು ಸಿದ್ಧಾಂತಕ್ಕೆ ಬದ್ಧರಾಗಿಯೇ ಉಳಿದಿದ್ದೀರಿ. ಆ ಕಾರಣಕ್ಕಾಗಿ ಕೇಂದ್ರ ಸರ್ಕಾರ ಉರುಳಿದರೂ ಪರವಾಗಿಲ್ಲ, ನೀವು ಎಂದೂ ನಿಮ್ಮ ನಂಬಿಕೆಗೆ ವಿರುದ್ಧವಾಗಿ ವರ್ತಿಸುವುದಿಲ್ಲ ಎಂಬುದನ್ನು ಸಾಬೀತುಪಡಿಸಿದ್ದೀರಿ. ಅದು ಅಭಿನಂದನಾರ್ಹ.

ಹಾಗೆಯೇ ದೇಶದ ರಕ್ಷಣಾ ಸುರಕ್ಷತೆಗೂ, ಇಂಧನ ಸವಲತ್ತಿನ ಸುರಕ್ಷತೆಗೂ, ಭಾರತದ ಆರ್ಥಿಕ ವ್ಯವಸ್ಥೆಗೂ ಮಾರಕವಾಗಿರುವ ಅಣು ಒಪ್ಪಂದವನ್ನು ಸಕಾರಾತ್ಮಕ ಕಾರಣಗಳಾಗಿಯೇ ವಿರೋಧಿಸಿದ್ದೀರಿ. ಅದು ಕೂಡ ಪ್ರಶಂಸನೀಯವೇ.

ಅದರಲ್ಲೂ ಇವತ್ತು ಎಲ್ಲಾ ರಾಜಕೀಯ ಪಕ್ಷಗಳು ಮತ್ತು ನಾಯಕರು ತತ್ವ, ಸಿದ್ಧಾಂತ ಎಂದೆಲ್ಲ ಬೊಗಳೆ ಬಿಡುತ್ತಾ, ರಾಷ್ಟ್ರಪ್ರೇಮವನ್ನು ಜಪಿಸುತ್ತಲೇ ದೇಶದ್ರೋಹಿ ಕೆಲಸಗಳನ್ನು ಮಾಡುತ್ತಿರುವಾಗ ನೀವು ತತ್ವ ಮತ್ತು ಸಿದ್ಧಾಂತ ಮಾತ್ರವಲ್ಲ ದೇಶದ ಒಳಿತಿಗಾಗಿ ಇಂತಹ ದೃಢ ನಿರ್ಧಾರವನ್ನು ಕೈಗೊಂಡಿದ್ದೀರಿ. ಇದು ನಿಜವಾಗಿಯೂ ಅಪರೂಪದ ಕ್ರಿಯೆಯೇ ಹೌದು.

ಆದರೆ ವಿಪರ್ಯಾಸ ಎಂತಹದ್ದು ನೋಡಿ. ಇವತ್ತು ಯುಪಿಎ ಸರ್ಕಾರ ವಿರುದ್ಧದ ತಮ್ಮ ನಿಲುವಿನಿಂದಾಗಿ ತಮ್ಮೊಂದಿಗೆ ಗುರುತಿಸಿಕೊಳ್ಳುತ್ತಿರುವವರು ಯಾರು? ಅವರೆಲ್ಲಾ ಎಂಥವರು ಎಂದು ನೋಡಿದರೆ ಆಘಾತವಾಗುತ್ತದೆ.

ಅಧಿಕಾರಕ್ಕಾಗಿ ಯಾವ ಪಕ್ಷದೊಂದಿಗೂ ಕೈಜೋಡಿಸಲು ಹಿಂಜರಿಯದ, ಎಲ್ಲಾ ಸಿದ್ಧಾಂತಗಳನ್ನು ತಿರುಚಬಲ್ಲ, ಅಕ್ರಮವಾಗಿ ಕೋಟಿಕೋಟಿ ರೂಪಾಯಿಗಳನ್ನು ಸಂಗ್ರಹಿಸಿರುವ, ನೂರಾರು ಎಕರೆ ಭೂಮಿಯನ್ನು ಕಬಳಿಸಿರುವ, ಹಲವಾರು ಭ್ರಷ್ಟಾಚಾರದ ಆರೋಪಗಳನ್ನು ಹೊತ್ತಿರುವ ಮಾಯಾವತಿ ತಮ್ಮೊಂದಿಗೆ ಸಮ್ಮತಿ ಸೂಚಿಸಿ ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ಉರುಳಿಸಲು ಸಜ್ಜಾಗಿದ್ದಾರೆ.

ಹಾಗೆಯೇ ಲೆಕ್ಕಕ್ಕೆ ಮಾತ್ರ ಇದ್ದು ಆಟಕ್ಕಿಲ್ಲದಂತಹ ಪರಿಸ್ಥಿತಿಯಲ್ಲಿರುವ ಅಜಿತ್‌ಸಿಂಗ್‌ರವರ ರಾಷ್ಟ್ರೀಯ ಲೋಕದಳ ಪಕ್ಷ ಕೂಡ. ಆತನಿಗೂ ಈಗ ಅಗತ್ಯವಾಗಿರುವುದು ಹೇಗಾದರೂ ಮಾಡಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದು. ಹೇಗಿದ್ದರೂ ಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಮಣ್ಣು ಮುಕ್ಕಲಿದೆ ಎಂದು ಹಲವು ಸಮೀಕ್ಷೆಗಳು ಹೇಳುತ್ತಿರುವುದರಿಂದ ಅಜಿತ್ ಸಿಂಗ್ ಸೇರಿದಂತೆ ಇತರೆ ಪುಡಿ ಪಕ್ಷಗಳಿಗೆ ಕಾಂಗ್ರೆಸ್ ನಂಟು ತೊರೆದರೆ ಸಾಕು ಎಂಬಂತಹ ಪರಿಸ್ಥಿತಿ ಎದುರಾಗಿದೆ. ಯಾಕೆಂದರೆ ಕಾಂಗ್ರೆಸ್ ಎಂಬ 'ಲೋಪ' ಇಲ್ಲದಿದ್ದರೆ ಬರುವ ಚುನಾವಣೆಯಲ್ಲಿ ಗೆದ್ದು ಬರುವುದು ಸುಲಭ ಎಂಬ ಲೆಕ್ಕಾಚಾರ ಅವರದ್ದು.

ಇನ್ನು ಪದ್ಮನಾಭನಗರದ ಮಹಾ ಮಾಂತ್ರಿಕ ದೇವೇಗೌಡರದ್ದೂ ಅಂತಹದ್ದೇ ಲೆಕ್ಕಾಚಾರ. ಅಧಿಕಾರಕ್ಕಾಗಿ ಕಾಂಗ್ರೆಸ್‌ನೊಂದಿಗೂ ಕುಣಿಯಬಲ್ಲ, ಚೆಡ್ಡಿಗಳೊಂದಿಗೂ ಡ್ಯುಯೆಟ್ ಹಾಡಬಲ್ಲ ಅವರ ಜೆಡಿಎಸ್ ಪಕ್ಷಕ್ಕೆ ಈಗ ಧರ್ಮಸಂಕಟ. ಇತ್ತೀಚೆಗೆ ಕರ್ನಾಟಕದಲ್ಲಿ ನಡೆದ ಚುನಾವಣೆಯಲ್ಲಿ ಅವರ ಪಕ್ಷ ಸಂಪೂರ್ಣವಾಗಿ ಮಣ್ಣು ಮುಕ್ಕದಿದ್ದದ್ದು ಅವರ ಅದೃಷ್ಟ. ಅಂತಹ ಪರಿಸ್ಥಿತಿಯಲ್ಲಿ ಲೋಕಸಭೆ ಚುನಾವಣೆಯನ್ನು ಎದುರಿಸಬೇಕು, ಅದರಲ್ಲಿ ಅವರ ಪಕ್ಷ ಸೀಟುಗಳನ್ನಾದರೂ ಗೆದ್ದು ರಾಷ್ಟ್ರಮಟ್ಟದಲ್ಲೂ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕು. ಆ ನಿಟ್ಟಿನಲ್ಲಿ ಯಾವ ಒಕ್ಕೂಟ ಸರಿಹೊಂದುತ್ತದೋ ಅದರೊಂದಿಗೆ ಅವರ ಮತ.

ಯಾವ ತತ್ವ ಸಿದ್ಧಾಂತ ಇಲ್ಲದವರು, ಅಧಿಕಾರಕ್ಕಾಗಿ ಯಾವ ಬೇಲಿಯನ್ನಾದರೂ ಹಾರಬಲ್ಲವರು ಇವತ್ತು ತತ್ವ, ಸಿದ್ಧಾಂತ ಎಂದೇ ನಂಬಿರುವ, ಅದಕ್ಕೆಂದು ಎಲ್ಲಾ ಅಧಿಕಾರವನ್ನು ತ್ಯಾಗ ಮಾಡಲು ಸಿದ್ಧರಿರುವ ನಿಮ್ಮ ಪಕ್ಷ ನಿಂತಿರುವುದು ಹಾಸ್ಯಾಸ್ಪದವಾಗಿಯೂ, ಒಂದು ವಿಕೃತ ನಾಟಕದಂತೆಯೂ ಕಾಣಿಸುತ್ತಿದೆ.

ಹೋಗಲಿ, ಬೇರೆ ಎಲ್ಲವನ್ನೂ ಬದಿಗಿಟ್ಟು ಈ ಅಣು ಒಪ್ಪಂದದ ಬಗ್ಗೆ ನಿಮ್ಮ ನಿಲುವು ಸರಿಯಾಗಿದೆ ಎಂಬ ಏಕೈಕ ಕಾರಣಕ್ಕಾದರೂ ಅವರು ನಿಮ್ಮೊಂದಿಗಿದ್ದಾರೆಯೇ ಎಂದು ನೋಡಿದರೂ ಅಚ್ಚರಿಯಾಗುತ್ತದೆ. ಏಕೆಂದರೆ ಅವರ್‍ಯಾರಿಗೂ ಈ ಒಪ್ಪಂದದ ಬಗ್ಗೆ ಸ್ಪಷ್ಟ ನಿಲುವುಗಳಾಗಲಿ, ಅಭಿಪ್ರಾಯವಾಗಲಿ, ಕನಿಷ್ಠ ತಿಳುವಳಿಕೆಯೂ ಇರುವಂತಿಲ್ಲ. ಅಷ್ಟೇ ಅಲ್ಲ, ನಾಳೆ ಮಾಯಾವತಿ ನೇತೃತ್ವದಲ್ಲಿ ಕೇಂದ್ರದಲ್ಲಿ ಹೊಸ ಸರ್ಕಾರ ಸ್ಥಾಪನೆಯಾದರೆ ಅವರೆಲ್ಲಾ ಯಾವ ಅಣು ಒಪ್ಪಂದವನ್ನು ನೀವು ವಿರೋಧಿಸಿದರೋ ಅದೇ ಒಪ್ಪಂದಕ್ಕೆ ಸಹಿ ಹಾಕಲು ಮುಂದಾದರೂ ಅಚ್ಚರಿ ಇಲ್ಲ.

ಇದು ನಿಮ್ಮ ದುರಂತ ಮಾತ್ರವಲ್ಲ, ಭಾರತದ ರಾಜಕೀಯ ಎಂಬ ಟ್ರಾಜಿ-ಕಾಮಿಡಿ ಕೂಡ ಹೌದು.


ಇದೆಲ್ಲಕ್ಕಿಂತ ಇನ್ನೊಂದು ದೊಡ್ಡ ವಿಪರ್ಯಾಸವೊಂದಿದೆ. ಅದು ನಿಮ್ಮ ಪಕ್ಷದಲ್ಲೇ ಇರುವ ಇಬ್ಬಂದಿತನ. ಇವತ್ತು ಅಮೆರಿಕಾದೊಂದಿಗಿನ ಅಣು ಒಪ್ಪಂದವನ್ನೇ ಕಾರಣವಾಗಿಸಿಕೊಂಡು ಕೇಂದ್ರ ಸರ್ಕಾರವನ್ನು ಉರುಳಿಸಲು ಸಜ್ಜಾಗಿದ್ದೀರಿ. ಆದರೆ ಇದೇ ಒಪ್ಪಂದಕ್ಕೆ ಮುನ್ಸೂಚನೆಗಳಾಗಿದ್ದ ಇತರೆ ಅಮೆರಿಕಾ-ಭಾರತ ನಡುವಿನ ಒಪ್ಪಂದಗಳನ್ನು ನಿಮ್ಮ ಪಕ್ಷ ಹಿಂದೆಲ್ಲಾ ವಿರೋಧಿಸಲಿಲ್ಲ ಯಾಕೆ? ರಕ್ಷಣಾ ವಲಯದಲ್ಲಾಗಲಿ, ಆರ್ಥಿಕ ಕ್ಷೇತ್ರದಲ್ಲಾಗಲಿ ಅಮೆರಿಕಾವನ್ನು ಅವಲಂಬಿಸಿರುವಂತಹ ಇತರೆ ಒಪ್ಪಂದಗಳನ್ನು ಭಾರತ ಮಾಡಿಕೊಂಡಾಗ ಅದನ್ನು ಇಷ್ಟೊಂದು ಗಟ್ಟಿಯಾಗಿ ವಿರೋಧಿಸಲಿಲ್ಲ ಯಾಕೆ? ಅವುಗಳನ್ನು ಈ ಹಂತಕ್ಕೆ ತೆಗೆದುಕೊಂಡು ಹೋಗಲಿಲ್ಲ ಯಾಕೆ?

ತೊಂಭತ್ತರ ದಶಕದಲ್ಲಿ ಹೊಸ ಆರ್ಥಿಕ ನೀತಿ ಜಾರಿಗೊಂಡಾಗ ಈ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದಿಂದಾಗಲಿರುವ ಅಪಾಯಗಳ ಬಗ್ಗೆ ಎಚ್ಚರಿಸಿದ್ದು ರಾಜ್ಯ ರೈತ ಸಂಘದ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು. ಆದರೆ ಆ ಹಂತದಲ್ಲಿ ನಿಮ್ಮ ಸಿಪಿಎಂ ಪಕ್ಷ ಸೇರಿದಂತೆ ಇತರೆ ಎಡಪಂಥೀಯ ಪಕ್ಷಗಳು ಹಾಗು ಚಿಂತಕರು ಜನ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು ಎಂಬುದು ನಿಜ.

ಆದರೆ ಆನಂತರ ಆದ ಬೆಳವಣಿಗೆಗಳೇನು? ಪಶ್ಚಿಮ ಬಂಗಾಳದಲ್ಲಿ ನಿಮ್ಮ ಪಕ್ಷದ ಜ್ಯೋತಿ ಬಸು ಸರ್ಕಾರವೂ ಇದೇ ಆರ್ಥಿಕ ನೀತಿಯನ್ನು ಅನುಸರಿಸಲಾರಂಭಿಸಿತು. ಎಷ್ಟರ ಮಟ್ಟಿಗೆ ಎಂದರೆ ಜ್ಯೋತಿ ಬಸು ಈ ದೇಶದ ಪ್ರಧಾನಿಯಾಗುವ ಸಾಧ್ಯತೆ ಕಂಡುಬಂದಾಗ ಅಮೆರಿಕ ಸೇರಿದಂತೆ ಹಲವಾರು ಬಂಡವಾಳಶಾಹಿಗಳು ಅದನ್ನು ಸ್ವಾಗತಿಸಿದ್ದರು!

ಇದೆಲ್ಲ ಕೊನೆಗೆ ಯಾವ ಹಂತಕ್ಕೆ ಹೋಯಿತು ಎಂದರೆ ರೈತ ಮತ್ತು ಕಾರ್ಮಿಕರ ಪಕ್ಷ ಎಂದೇ ಖ್ಯಾತಿ ಗಳಿಸಿದ್ದ ಸಿಪಿಎಂನ ಹೊಸ ಸ್ನೇಹಿತರಾದವರು, ಆಪ್ತ ಸಲಹೆಗಾರರಾದವರು ಇನ್‌ಫೋಸಿಸ್‌ನ ನಾರಾಯಣಮೂರ್ತಿ, ರತನ್ ಟಾಟಾ, ಅಂಬಾನಿ ಸಹೋದರರಂತಹವರು.

ಇದೆಲ್ಲಕ್ಕೆ ಪ್ರತಿರೋಧ ಬಂದಿದ್ದು ನಿಮ್ಮಿಂದಲ್ಲ, ನಿಮ್ಮ ಪಕ್ಷದ ಇತರೆ ನಾಯಕರಿಂದಲ್ಲಾ, ನಿಮ್ಮನ್ನು ಸದಾ ಟೀಕಿಸುವ ವಿರೋಧ ಪಕ್ಷದಿಂದಲೂ ಅಲ್ಲ. ಬದಲಾಗಿ ನಿಮ್ಮನ್ನೇ ನಂಬಿದ್ದ, ನಿಮ್ಮ ಪಕ್ಷಕ್ಕೆ ಮತ ಚಲಾಯಿಸಿದ್ದ ಸಿಂಗೂರ್ ಮತ್ತು ನಂದಿಗ್ರಾಮದ ಸಾಮಾನ್ಯ ರೈತರಿಂದ; ತಮ್ಮ ಬದುಕು ಮತ್ತು ಭೂಮಿಯನ್ನು ಕಳೆದುಕೊಳ್ಳುತ್ತೇವೆ ಎಂದು ಭಯಭೀತರಾದ ಸಾರ್ವಜನಿಕರಿಂದ; ಇನ್ನೂ ಜನ ಪರವಾಗಿ ಚಿಂತಿಸುವ ಬಂಗಾಳಿ ಬುದ್ಧಿಜೀವಿಗಳಿಂದ.



ಅವರೆಲ್ಲರಿಗೆ ನಿಮ್ಮ ಪಕ್ಷದ ಸರ್ಕಾರ ನೀಡಿದ ಕೊಡುಗೆ ಏನು? ಪೊಲೀಸರಿಂದ ಗುಂಡಿನೇಟು, ಪಕ್ಷದ ರೌಡಿಗಳಿಂದ ಗೂಂಡಾಗಿರಿ, ಪ್ರತಿರೋಧ ವ್ಯಕ್ತಪಡಿಸಿದವರ ಮೇಲೆ ಸಾಮೂಹಿಕ ಅತ್ಯಾಚಾರ, ಕೊಲೆ, ರಕ್ತಪಾತ... ಪ್ರಕಾಶ್ ಕಾರಟ್‌ರವರೆ, ಆಗೆಲ್ಲ ನಿಮ್ಮ ತತ್ವ ಮತ್ತು ಸಿದ್ಧಾಂತ ನಿದ್ದೆ ಮಾಡುತ್ತಿತ್ತು ಯಾಕೆ? ನಿಮ್ಮ ಪಕ್ಷ ಸ್ಮಶಾನ ಮೌನ ವಹಿಸಿತ್ತು ಯಾಕೆ?

ನಿಮ್ಮ ಪಕ್ಷ, ನಿಮ್ಮ ಸರ್ಕಾರ ಸಾಮಾನ್ಯ ಜನರ ಮೇಲೆ ಇಂತಹ ದೌರ್ಜನ್ಯ ನಡೆಸುತ್ತಿದ್ದಾಗ ಬಾಯಿ ಮುಚ್ಚಿಕೊಂಡಿದ್ದ ನೀವು, ಆಂಧ್ರದಲ್ಲಿ ಭೂಮಿಗಾಗಿ ಹೋರಾಟ ಮಾಡುತ್ತಿದ್ದ ನಿಮ್ಮ ಪಕ್ಷದ ಸದಸ್ಯರ ಮೇಲೆಯೇ ಆ ರಾಜ್ಯದ ಪೊಲೀಸರು ಗುಂಡು ಹಾರಿಸಿ ಕೊಂದಾಗಲೂ ತುಟಿ ಪಿಟಕ್ ಎನ್ನದೆ ಸುಮ್ಮನಿದ್ದಿರಿ.

ಯಾಕೆ ಗೊತ್ತಾ?

ನಿಮ್ಮ ಪಕ್ಷದ ಆರ್ಥಿಕ ನೀತಿಗೂ, ಕಾಂಗ್ರೆಸ್ ಪಕ್ಷದ ಆರ್ಥಿಕ ಸಿದ್ಧಾಂತಕ್ಕೂ ಯಾವುದೇ ವ್ಯತ್ಯಾಸ ಇಲ್ಲದಂತಾಗಿದ್ದರಿಂದ.

ಆಗೆಲ್ಲ ನೀವು ಮೌನವಾಗಿದ್ದು, ಕಾಂಗ್ರೆಸ್‌ನಂತೆಯೇ ನಿಮ್ಮ ಪಕ್ಷ ವರ್ತಿಸಿದ್ದರ ಫಲವೇ ಕಾಂಗ್ರೆಸ್ ಅಣು ಒಪ್ಪಂದಕ್ಕೆ ಮುಂದಾಗಿದ್ದು.

ಹಾವಿನ ಹೆಡೆಯೊಂದಿಗೆ ಸ್ನೇಹ, ಬಾಲದೊಂದಿಗೆ ದ್ವೇಷ ಹೇಗಾಗುತ್ತೆ ಕಾಮ್ರೇಡ್ ಕಾರಟ್‌ರವರೇ?

* * * * *

ಶಿರಡಿ ಸಾಯಿಬಾಬಾ ಕಣ್ಣುಬಿಟ್ಟ ಎಂದು ನಂಬಿದ ಸಾವಿರಾರು ಜನ ಸಾಲು ನಿಂತಿದ್ದನ್ನು ನೋಡಿ ಈ ದೇಶಕ್ಕೆ ಸಮೂಹ ಸನ್ನಿ ಹಿಡಿದಿದೆ ಎನ್ನಿಸಿತು.

ಇದಕ್ಕೆ ಸಿಂಪಲ್ ಕಾರಣವೂ ಇತ್ತು.

ಅದೇನೆಂದರೆ ಈಗ ಕಣ್ಣು ಬಿಡಲು ಶಿರಡಿ ಸಾಯಿಬಾಬಾ ಎಂದೂ ಕಣ್ಣುಮುಚ್ಚಿರಲಿಲ್ಲ ಎಂಬ ವಾಸ್ತವ. ನೀವು ಯಾವುದೇ ಶಿರಡಿ ಸಾಯಿಬಾಬಾ ಫೋಟೋ ನೋಡಿದರೂ ಅದರಲ್ಲಿ ಅವರು ಕಣ್ಣುತೆರೆದೇ ಇದ್ದಾರೆ. ಶಿರಡಿಯಲ್ಲಿರುವ ಅವರ ದೇವಸ್ಥಾನದಲ್ಲಿನ ವಿಗ್ರಹದಲ್ಲೂ ಕಣ್ಣು ತೆರೆದಿದ್ದಾರೆ. ಅವರ ಎಲ್ಲಾ ಪ್ರತಿಮೆಗಳಲ್ಲೂ ಕಣ್ಣುಬಿಟ್ಟೇ ಇದ್ದಾರೆ.

ಆದರೂ ಅದ್ಯಾರೋ ಖದೀಮನೊಬ್ಬ ಸಾಯಿಬಾಬಾರ ಒಂದು ಕಣ್ಣನ್ನು ಪ್ಲಾಸ್ಟರ್ ಆಫ್ ಪ್ಯಾರಿಸಿನಿಂದ ಮುಚ್ಚಿ, ಇನ್ನೊಂದರ ಗುಡ್ಡೆಗೆ ಕಪ್ಪುಬಣ್ಣ ಹಚ್ಚಿದ್ದನ್ನೇ "ಸಾಯಿಬಾಬಾ ಕಣ್ಣು ಬಿಟ್ಟಿದ್ದಾರೆ" ಎಂದು ಜನ ನಂಬುತ್ತಾರೆಂದರೆ ಇವರಿಗೆ ಹುಚ್ಚು ಹಿಡಿದಿದೆ ಎಂದೇ ಹೇಳಬೇಕಲ್ಲವೆ.



ನನಗೆ ಗೊತ್ತಿರುವಂತೆ ತಪಸ್ಸಿನಲ್ಲಿ ಮಗ್ನರಾಗಿರುವ ಗೌತಮ ಬುದ್ಧರ ಪ್ರತಿಮೆ ಮತ್ತು ಶಿಲುಬೆ ಮೇಲಿರುವ ಏಸು ಕ್ರಿಸ್ತರ ಹೊರತಾಗಿ ಇತರೆ ಎಲ್ಲಾ ದೇವರ, ಸಂತರ ಪ್ರತಿಮೆಗಳಲ್ಲಿ ಅವರೆಲ್ಲ ಕಣ್ಣು ತೆರೆದೇ ಇರುತ್ತಾರೆ. ಅದರಲ್ಲೂ ತಮ್ಮ ಭಕ್ತರಿಗೆ ಆಶೀರ್ವಾದ ನೀಡುತ್ತಿರುವ ಪ್ರತಿಮೆಗಳಲ್ಲಂತೂ ಕಣ್ಣುಗಳು ತೆರೆದೇ ಇರುತ್ತವೆ.

ಹಾಗಿರುವಾಗ ಸಾಯಿಬಾಬಾ ಕಣ್ಣುಬಿಟ್ಟಿದ್ದಾರೆ ಎಂದು ಯಾರೋ ಗಲ್ಲು ಎಬ್ಬಿಸುತ್ತಾನೆಂದರೆ ಅದನ್ನು ನಂಬುವ ಜನಕ್ಕೆ ಏನನ್ನಬೇಕು? ■



ನ್ಯೂಕ್ಲಿಯರ್ ಡೀಲ್‌ನೊಳಗೊಂದು

ಅಂಬಾನಿಗಳ ಡೀಲ್!

ಬರೀ ಹೊರನೋಟಕ್ಕೆ ಅಂತ ಗಮನಿಸಿದರೆ ಭಾರತ-ಅಮೆರಿಕಾ ಅಣುಒಪ್ಪಂದ 'ದೇಶ ರಕ್ಷಣೆ-ಸಾರ್ವಭೌಮತೆಯ ವಿಚಾರ'ವಾಗಷ್ಟೇ ಕಾಣುತ್ತದೆ. ಕಮ್ಯುನಿಸ್ಟರು ಕಾಂಗ್ರೆಸ್‌ಗೆ ಕೊಟ್ಟಿದ್ದ ಬೆಂಬಲ ಹಿಂಪಡೆದದ್ದು, ಅದೇ ವೇಳೆಗೆ ಸಮಾಜವಾದಿ ಪಾರ್ಟಿ ಕಾಂಗ್ರೆಸ್‌ಗೆ ಬೆಂಬಲಿಸಲಿದೆ ಎಂಬ ಸುದ್ದಿಗಳು ದೆಹಲಿ ರಾಜಕೀಯಕ್ಕೆ ಬಿಸಿ ಏರಿಸುತ್ತಿದೆ.

ಆದರೆ ಇದರಲ್ಲಿ ಅಂಬಾನಿಗಳ ಲಾಭ-ನಷ್ಟದ ವಿಚಾರಗಳೂ ಬೆಸೆದುಕೊಂಡಿವೆ ಅಂದರೆ ನಿಮಗೆ ಆಶ್ಚರ್ಯವಾಗಬಹುದು.

ಕಳೆದ ವಾರ ಸಮಾಜವಾದಿ ಪಾರ್ಟಿಯ ಸೆಕ್ರೆಟರಿ ಅಮರ್‌ಸಿಂಗ್ "ನಾವು ಕಾಂಗ್ರೆಸ್‌ಗೆ ಬೆಂಬಲ ನೀಡಲು ಸಿದ್ಧ, ಆದರೆ ಸರ್ಕಾರ ಮುಖೇಶ್ ಅಂಬಾನಿಯ ಜಾಮ್‌ನಗರ್ ರಿಫೈನರಿಗೆ ಕೊಟ್ಟಿರುವ **export oriented unit** ಮಾನ್ಯತೆ ರದ್ದು ಮಾಡಬೇಕು ಹಾಗೂ ಖಾಸಗಿ ಆಯಿಲ್ ರಿಫೈನರಿ ಕಂಪನಿಗಳಿಗೆ **windfall tax** (ತೈಲಬೆಲೆ ಏರಿಳಿಕೆ ಆಧರಿಸಿ ತೆರಿಗೆ ವಿಧಿಸುವ ವಿಧಾನ) ಹೇರಬೇಕು" ಎಂದು ಶರತ್ತು ಹಾಕಿದ. ಹಾಗಾದಲ್ಲಿ ಮುಖೇಶ್ ಅಂಬಾನಿಗೆ ಸಾವಿರಾರು ಕೋಟಿ ನಷ್ಟವಾಗುವುದು ಗ್ಯಾರಂಟಿ.

ಇದಕ್ಕೆ ಕಾರಣ ಇಷ್ಟೆ.

ಕಿರಿಯ ಅನಿಲ್ ಅಂಬಾನಿ ಸಮಾಜವಾದಿ ಪಾರ್ಟಿಯ ಬೆಂಬಲಿಗ, ಜೊತೆಗೆ ಉತ್ತರ ಪ್ರದೇಶದಲ್ಲಿ ಮುಲಾಯಂ ಮುಖ್ಯಮಂತ್ರಿಯಾಗಿದ್ದಾಗ ಸಾವಿರಾರು ಕೋಟಿ ಬೆಲೆಯ ಪ್ರಾಜೆಕ್ಟುಗಳಿಗೆ ಒಪ್ಪಿಗೆ ಪಡೆದುಕೊಂಡಿರುವಾತ. ಆ ಉಪಕಾರಕ್ಕೆ ಮುಲಾಯಂ ತಕ್ಕ ಪ್ರತಿಫಲ ಪಡೆದಿರುವುದೂ ನಿಜ.

ಈ ಅನಿಲ್‌ಗೆ ಅಣ್ಣ ಮುಖೇಶನ ತಲೆ ಕಂಡರಾಗುವುದಿಲ್ಲ, ಹಾಗಾಗಿ ಕಾಂಗ್ರೆಸ್‌ಗೆ ಎಸ್‌ಪಿಯ ಬೆಂಬಲ ಬೇಕೇಬೇಕೆಂದಾದಲ್ಲಿ ಆ ಅವಕಾಶ ಬಳಸಿಕೊಂಡು ಮುಖೇಶನಿಗೆ ಲಾತ ಕೊಡಿಸಲು ಹೊರಟಿದ್ದಾನೆ. ಜೊತೆಗೆ ಈ ಅಣುಒಪ್ಪಂದ ಜಾರಿಗೆ ಬಂದರೆ ಭಾರತದಲ್ಲಿ ಇನ್ನು ಮುಂದೆ ಖಾಸಗಿ ಕಂಪನಿಗಳೂ ಅಣುವಿದ್ಯುತ್ ಘಟಕ ಸ್ಥಾಪಿಸುವ ಅವಕಾಶ ಸಿಗಲಿದೆ. ಅನಿಲ್ ಅಂಬಾನಿಗೆ ತನ್ನ ಮಾಲೀಕತ್ವದ ರಿಲಯೆನ್ಸ್ ಎನರ್ಜಿ ಲಿ. ಮೂಲಕ ಕೆಲ ಅವಕಾಶ ಬಾಚಿಕೊಂಡು ದುಡ್ಡು ಮಾಡುವ ಒಳಾಸೆ ಇದೆ.

ಆದರೆ ಎಸ್‌ಪಿಯ ಅಮರ್‌ಸಿಂಗ್‌ನನ್ನು ಮುಖೇಶ್ ವಿರುದ್ಧ ಛೂ ಬಿಡುತ್ತಿರುವುದೇಕೆ ಗೊತ್ತೆ?

ಅನಿಲ್‌ನ ರಿಯಲನ್ಸ್ ಕಮ್ಯುನಿಕೇಷನ್ ಮೊಬೈಲ್ ಕಂಪನಿಯು ದಕ್ಷಿಣ ಆಫ್ರಿಕಾದ **MTM** ಜೊತೆ ವಿಲೀನಗೊಳ್ಳಲು ಹೊರಟಾಗ ಅದಕ್ಕೆ ಮುಖೇಶ್ ಅಡೆತಡೆ ಉಂಟು ಮಾಡಿ ಈಗ ಆ ಬೃಹತ್ ಡೀಲ್ ಪೆಂಡಿಂಗ್‌ನಲ್ಲಿದೆ. ಆ ಸಿಟ್ಟಿಗೆ ಈಗ ಅನಿಲ್ ಸಮಾಜವಾದಿ ಪಾರ್ಟಿ ಮೂಲಕ ಕಾಂಗ್ರೆಸ್‌ಗೆ ಧಮಕಿ ಹಾಕಿಸಿ ಅಣ್ಣ ಮುಖೇಶನ ಉಸಿರುಗಟ್ಟಿಸಲು ಹೊರಟಿದ್ದಾನೆ.

ಅಮರ್‌ಸಿಂಗ್‌ನ ಈ ಶರತ್ತು ಕೇಳಿದ ಮರುದಿನವೇ ಮುಖೇಶ್ ದೆಹಲಿಗೆ ಓಡಿಹೋಗಿ ಪ್ರಧಾನಿ ಮನಮೋಹನ್ ಸಿಂಗ್ ಹಾಗೂ ಸೋನಿಯಾರನ್ನು ಕಂಡು ಅಧಿಕಾರ ಉಳಿಸಿಕೊಳ್ಳಲು ತನ್ನ ವ್ಯವಹಾರದ ಮೇಲೆ ಗದೆ ಬೀಸದಂತೆ ಗೋಗರೆದು ಬಂದಿದ್ದಾನೆ.

ಈ ಅಣ್ಣ ತಮ್ಮಂದಿರು 2005 ರಲ್ಲಿ ಆಸ್ತಿ ಭಾಗ ಮಾಡಿಕೊಂಡ ಮೇಲೆ ಪೆಟ್ರೋ ಕೆಮಿಕಲ್ಸ್, ಮೊಬೈಲ್, ರೇಡಿಯೋ, ಸಿನಿಮಾದಿಂದ ಹಿಡಿದು ತರಕಾರಿ, ಚಪ್ಪಲಿ ಮಾರಾಟದವರೆಗೂ ಇಳಿದು ತಮ್ಮ ವ್ಯವಹಾರಗಳನ್ನು ಲಕ್ಷಾಂತರ ಕೋಟಿಗೆ ಬೆಳೆಸಿಕೊಂಡು ಕೊಬ್ಬಿ ಹೋಗಿದ್ದಾರೆ. ಅವರಪ್ಪ ಧೀರೂಬಾಯಿ ಅಂಬಾನಿ ಕೂಡ ಇದೇ ರೀತಿ ಸರ್ಕಾರಗಳಿಗೆ ದುಡ್ಡು ತಿನ್ನಿಸಿ, ಬೆದರಿಸಿ, ಲಾಬಿ ಮಾಡಿ ಮಾಡಿಯೇ ಭಾರಿ ಉದ್ಯಮಿಯಾಗಿ ಬೆಳೆದಿದ್ದ.


ಈಗ ಮಕ್ಕಳ ಸರದಿ.

ಅಣುಒಪ್ಪಂದ ಹಾಗೂ ಯುಪಿಎ ಸರ್ಕಾರದ ಅಳಿವುಉಳಿವಿನ ಬಗ್ಗೆ ಕಾಂಗ್ರೆಸ್, ಬಿಜೆಪಿ, ಕಮ್ಯುನಿಸ್ಟರಿಗೆ ತಮ್ಮದೇ ಆದ ನಿಲುವುಗಳಿವೆ, ಸಮರ್ಥನೆ, ಪ್ರತಿರೋಧಗಳಿವೆ. ಈ ಸರ್ಕಾರ ಉಳಿದೀತೆ ಇಲ್ಲಾ ಹೋಗುವುದೇ ಎಂದು ದೇಶದ ಜನ ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ಆದರೆ ಉರಿವ ಮನೆಯ ಜಂತಿ ಎಣಿಸುವವರಂತೆ ಈ ಅಂಬಾನಿಗಳು ಅಣು ಒಪ್ಪಂದದ ಡೀಲ್‌ನೊಳಗೇನೇ ತಮ್ಮ ಲಾಭ-ನಷ್ಟದ ಡೀಲ್‌ಗಳನ್ನಷ್ಟೇ ಲೆಕ್ಕ ಹಾಕುತ್ತಿದ್ದಾರೆ.

ರಾಜಕೀಯದೊಳಗೆ ವ್ಯಾಪಾರ ಬೆಸೆದುಕೊಂಡರೆ ಕೊನೆಗೆ ಗೆಲ್ಲುವುದು ವ್ಯಾಪಾರಿ ಹಿತಾಸಕ್ತಿಗಳೇ ವಿನಃ ಶುದ್ಧ ರಾಜಕಾರಣವಲ್ಲ.

ಈ ಅಂಬಾನಿ ಬ್ರದರ್ಸ್‌ಗೆ ಅವಕಾಶ ಸಿಕ್ಕರೆ ನಮ್ಮ ಸಂಸತ್ ಭವನದ ಸಮೇತ ಇಡೀ ದೇಶವನ್ನೇ ಬೇಕಿದ್ದರೆ ಬಿಕರಿ ಗಿಟ್ಟಿಬಿಡುತ್ತಾರೆ ಅಲ್ಲವೆ! ■

ಬಿಜೆಪಿಗಳ ಖರೀದಿ ರಾಜಕೀಯ



ಜಸ್ವಂತ್ ಸಿಂಗ್

ಕರ್ನಾಟಕದಲ್ಲಿ ಬಿಜೆಪಿಯ ಗಣಿ ರೆಡ್ಡಿಗಳು ನಡೆಸುತ್ತಿದ್ದ 'ಆಪರೇಷನ್ ಕಮಲ'ದ ಆರ್ಭಟ ಸದ್ಯಕ್ಕೆ ಕಡಿಮೆಯಾಗಿದೆ. ಅನ್ಯಪಕ್ಷಗಳ ಶಾಸಕ ನಾಯಕರನ್ನೂ ದುಡ್ಡು ಕೊಟ್ಟು ಖರೀದಿಸುವ ಈ ಹಲ್ಕ ಕೆಲಸವನ್ನು ಅದೇನೂ ಒಂದು ಪವಿತ್ರ ಕೆಲಸವೆಂಬಂತೆ ರಾಜ್ಯ ಬಿಜೆಪಿಗಳು ನಿರ್ಲಜ್ಜಿತವಾಗಿ ಬಹಿರಂಗವಾಗೇ ಮಾಡಿದ್ದಾರೆ.

ಈಗ ಅದೇ ತರಹದ ಕೆಲಸಕ್ಕೆ ಬಿಜೆಪಿಗಳ ಕೇಂದ್ರ ನಾಯಕರೂ ಚಾಲೂ ನೀಡಿದ್ದಾರೆ. ಸಮಾಜವಾದಿ ಪಾರ್ಟಿಯ ನಾಯಕ ಅಮರ್ ಸಿಂಗ್ ಮೊನ್ನೆ ಬಿಜೆಪಿಗಳ ಈ ಕೆಳದರ್ಜೆ ರಾಜಕೀಯವನ್ನು ಬಯಲು ಮಾಡಿದ್ದಾರೆ.

ಮುಲಾಯಂ ಏನಾದರೂ ಒಪ್ಪಿಕೊಂಡರೆ ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಬೀಳಿಸಿ ಬಿಜೆಪಿ ಬೆಂಬಲದಿಂದ ಮುಲಾಯಂರನ್ನೇ ಪ್ರಧಾನಿ ಮಾಡುವುದಾಗಿ ಬಿಜೆಪಿ ಆಮಿಷವೊಡ್ಡಿತ್ತಂತೆ.

ಅಂದರೆ ಇಲ್ಲಿ ಈಗ ಬಿಜೆಪಿಗೆ ಅಂತ ಒಪ್ಪಂದ ಮತ್ತದರ ಪರಿಣಾಮಗಳು ದೇಶದ ಸಾರ್ವಭೌಮತೆಯ ವಿಚಾರಗಳೆಲ್ಲಾ ಗೌಣ ಎಂದಾಯಿತು. ಅವರದೇನಿದ್ದರೂ ಅಧಿಕಾರದ ಲಾಭದ ರಾಜಕೀಯ ಲೆಕ್ಕಾಚಾರ ಮಾತ್ರ.

ಅಮರ್‌ಸಿಂಗ್‌ನ ಹೇಳಿಕೆಯನ್ನು ಬಿಜೆಪಿ ಮೊದಲು ನಿರಾಕರಿಸಿತಾದರೂ ಕೊನೆಗೆ ಜಸ್ವಂತ್ ಸಿಂಗ್ "ಹೌದು ನಿಜ ನಾನೇ ಪಕ್ಷದ ಪರವಾಗಿ ಮಾತಾಡಿದ್ದೆ" ಎಂದು ಬಿಟ್ಟರು. ಈ ಅಮರ್ ಸಿಂಗ್ ಎಂತಾ ಕಿಲಾಡಿಯೆಂದರೆ ಬಿಜೆಪಿಯ ಜಸ್ವಂತ್ ಸಿಂಗ್ ಭೇಟಿ ಹಾಗೂ ಆಮಿಷಗಳ ಮಾತುಕತೆಯ ವಿವರಗಳನ್ನೆಲ್ಲಾ ದಾಖಲು ಮಾಡಿಟ್ಟುಕೊಂಡಿದ್ದಾನಂತೆ. ಹಾಗಾಗಿ ಜಸ್ವಂತ್ ಸಿಂಗ್ ಬೇರೆ ದಾರಿ ಕಾಣದೆ ತಾನು ಈ ಚಿಲ್ಲರೆ ಕೆಲಸ ಮಾಡಲು ಹೋಗಿದ್ದೆ ಎಂದು ಒಪ್ಪಿಕೊಂಡಿದ್ದಾರೆ.


ಹಾಗೆ ಹೇಳಬೇಕೆಂದರೆ ಬಿಜೆಪಿಗಳಿಗೆ ಇಂಥ ಚಿಲ್ಲರೆ ಕೆಲಸಗಳು ಹೊಸದೇನಲ್ಲ. ಪ್ರತಿಭಾ ಪಾಟೀಲ್ ರಾಷ್ಟ್ರಪತಿ ಚುನಾವಣೆಗೆ ನಿಂತಿದ್ದಾಗಲೂ ಮುಲಾಯಂಗೆ ಪ್ರಧಾನಿ ಹುದ್ದೆಯ ಆಮಿಷ ತೋರಿಸಿ ತಮ್ಮ ಕ್ಯಾಂಡಿಡೇಟ್ ಗೆಲುವಿಗೆ ಸಹಕರಿಸುವಂತೆ ಗಾಳ ಹಾಕಿ ವಿಫಲರಾಗಿದ್ದರು. ಅದನ್ನೂ ಈಗ ಅಮರ್ ಸಿಂಗ್ ಬಯಲು ಮಾಡಿದ್ದಾರೆ.

ಜುಲೈ 22ರ ವಿಶ್ವಾಸಮತಯಾಚನೆ ನಡೆಯುವಾಗ ಹೇಗಾದರೂ ಮಾಡಿ ಕಾಂಗ್ರೆಸ್‌ಗೆ ಸೋಲುಂಟು ಮಾಡಲು ಬಿಜೆಪಿಗಳು ಹಲವು ಹತ್ತು ಸರ್ಕಸ್ ನಡೆಸುತ್ತಿದ್ದಾರೆ.

ಸರ್ಕಾರದ ವಿರುದ್ಧ ಓಟು ಹಾಕುವುದಾದರೆ ದುಡ್ಡು ಅಥವಾ ಸರ್ಕಾರದ ಪರ ಓಟು ಹಾಕದೆ ನಿಷ್ಕ್ರಿಯವಾಗಿ ದೂರ ಉಳಿದರೂ ದುಡ್ಡು!

ಇದು ಬಿಜೆಪಿಗಳು ನಡೆಸುತ್ತಿರುವ ಪವಿತ್ರ ರಾಜಕೀಯ. ಇವರ ಮುಖಕ್ಕೆ **A Party with a difference** ಎನ್ನುವ ಹಣೆಪಟ್ಟಿ ಬೇರೆ.

ಪುಟ್ಟ ಸಲಹೆ



ಅಣುಒಪ್ಪಂದದಿಂದ ದೇಶ ಹಾಳಾಗಬಹುದು, ಉದ್ಧಾರ ಆಗಬಹುದು. ಅದರ ಚಿಂತೆ ಇಲ್ಲ. ಸೋನಿಯಾಜೀ ನಿಮಗೆ ಯುಪಿಎ ಸರ್ಕಾರ ಉಳೀಬೇಕು ಅಷ್ಟೇ ಅಲ್ವ. ಜನಪ್ರತಿನಿಧಿಗಳನ್ನ ಸೆಳೆಯುವುದರಲ್ಲಿ ನಿಷ್ಣಾತರಾದ ಕೆಲವರು ಕರ್ನಾಟಕದಲ್ಲಿದ್ದಾರೆ ಎಂಬುದನ್ನು ತಿಳಿಸಲು ಹೆಮ್ಮೆ ಎನಿಸುತ್ತಿದೆ. ನೀವು ಅವರನ್ನು ಸಂಪರ್ಕಿಸಬಹುದು. ಅವರ ವಿಳಾಸ ಇಂತಿವೆ.


ಮಾನ್ಯ ಶ್ರೀರಾಮುಲು ಅವರು
ಆರೋಗ್ಯ ಸಚಿವರು
ಕರ್ನಾಟಕ ಸರ್ಕಾರ

ಮಾನ್ಯ ಜನಾರ್ದನ ರೆಡ್ಡಿಯವರು
ಪ್ರವಾಸೋದ್ಯಮ ಸಚಿವರು
ಕರ್ನಾಟಕ ಸರ್ಕಾರ

ಅರೆ, ಇವರು ಭಾರತೀಯ ಜನತಾ ಪಕ್ಷದ ಶಾಸಕರಲ್ವೆ ಎನ್ನುವ ಚಿಂತೆ ಬೇಡ. ದೇಶದ ಗಣಿಗಾರಿಕೆ ನೀಡಿದರೆ ಅವರು ಎಂತಹದ್ದಕ್ಕೂ ರೆಡಿ!

ವಿ.ಸೂ.: ಸಹಾಯಕ್ಕಾಗಿ ತಮ್ಮ ಪಕ್ಷದ ಮುಖ್ಯಮಂತ್ರಿಯಾದ ರಾಜಶೇಖರ ರೆಡ್ಡಿ ಅವರನ್ನು ಸಂಪರ್ಕಿಸಬಹುದು!

ಯಾರ ಹೆಸರು?



ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಏನು ಹೆಸರು?

ಈ ಪ್ರಶ್ನೆ ಕೇಳಿದರೆ ಸಾಕು. ಉದ್ದನೆಯ ಸಾಲು ಬರುತ್ತೆ.

ಕೆಂಪೇಗೌಡ, ಬಸವ, ಅಂಬೇಡ್ಕರ್, ಕುವೆಂಪು ಹೀಗೆ.

ಯಾವ ವ್ಯಕ್ತಿಯ ಹೆಸರೂ ಬೇಡ ಅನ್ನುವವರಿಗೂ ಕಡಿಮೆ ಇಲ್ಲ.

ಹಾಗಾದರೆ ಈಗಿನ ಹಾಗೆ 'ಬೆಂಗಳೂರು....' ಅಂತ ಇರಲಿ ಅಂದರೆ 'ಬೇಡ ಬೇಡ Bangalore International Airport ಅಂತ ಇರಲಿ. ಐಟಿಬಿಟಿಯಿಂದಾಗಿ ವಿದೇಶಿಯರಿಗೆ ಬೆಂಗಳೂರಿಗಿಂತ ಬ್ಯಾಂಗಳೂರೇ ಪರಿಚಯ' ಅನ್ನುವವರೂ ಇದ್ದಾರೆ.

ಕೊನೆಗೆ ಎಲ್ಲಿಗೆ ಬಂದು ನಿಲ್ಲಬಹುದು?

'H.D. Devegowda International Airport'.

ಆಶ್ಚರ್ಯ ಆಯಿತಾ?

ಹರಿಬರೀನಲ್ಲಿ ಲಕ್ನೋ ವಿಮಾನ ನಿಲ್ದಾಣಕ್ಕೆ 'ಚೌಧರಿ ಚರಣ್ ಸಿಂಗ್' ಹೆಸರಿಡಲಾಗುತ್ತಿದೆ.

ಯಾಕೆ ಈ ದಿಢೀರ್ ನಿರ್ಧಾರ?

ರಾಷ್ಟ್ರೀಯ ಜನತಾದಳದ ಬೆಂಬಲ ಸರ್ಕಾರಕ್ಕೆ ಬೇಕಾಗಿದೆ; ಅಜಿತ್ ಸಿಂಗ್‌ಗೆ ಬೆಣ್ಣೆ ಹಚ್ಚಲು ಈ ತರಾತುರಿ!

ಚರಣ್‌ಸಿಂಗ್ ಮಾಜಿ ಪ್ರಧಾನಿ. ದೇವೇಗೌಡರೂ ಡಿಟ್ಟೋ. ಅವರು ರೈತ ನಾಯಕ. ಇವರೂ ಡಿಟ್ಟೋ. ಅವರ ಮಗ ಅಜಿತ್‌ಸಿಂಗ್ ಹಾಲಿ ಸಂಸದ. ಇವರ ಮಗ ಎಚ್.ಡಿ. ಕುಮಾರಸ್ವಾಮಿ ಮಾಜಿ ಸಂಸದ; ಮಾಜಿ ಮುಖ್ಯಮಂತ್ರಿ ಭಾವಿ ಆದರೂ ಆಶ್ಚರ್ಯ ಇಲ್ಲ.

ಕೇಂದ್ರದಲ್ಲಿ ಇಂತಹದ್ದೇ ಪರಿಸ್ಥಿತಿ ಉದ್ಭವಿಸುವ ಲಕ್ಷಣಗಳು ಬಹಳ ಇವೆ.

ಒಂದು ತೊಡಕು. ಅವರು ದಿವಂಗತ. ಇವರು ಆಗಿಲ್ಲ! (ಹರದನಹಳ್ಳಿ ದೇವೇಗೌಡರು ನೂರ್ಕಾಲ ಬಾಳಲಿ). ಇವರ ಮರಣಾನಂತರ ದೇವೇಗೌಡರ ಹೆಸರು ಇಟ್ಟೇ ಇಡುತ್ತಾರೆ ಎಂಬ ನಂಬಿಕೆ ನನಗಿದೆ. ನಿಮಗೆ?

■ ಎಚ್.ಎಲ್. ಕೇಶವಮೂರ್ತಿ

ದಾವಣಗೆರೆ: ಹರಪನಹಳ್ಳಿಯಲ್ಲಿ ಅಂದಾನಪ್ಪನೆಂಬ ಹಲ್ಕಟ್ ಬಿ.ಇ.ಓ.

ಅಂದಾನಪ್ಪ ವಡಗೆರೆ ಎಂಬ ಹಲ್ಕಟ್ ಬಿಇಓ ವಿರುದ್ಧ ನಡೆದಷ್ಟು ಪ್ರತಿಭಟನೆಗಳು ಪ್ರಾಯಶಃ ಹರಪನಹಳ್ಳಿಗೆ ಬಂದುಹೋದ ಯಾವೊಬ್ಬ ಅಧಿಕಾರಿಯ ವಿರುದ್ಧವೂ ನಡೆದಿರಲಿಕ್ಕಿಲ್ಲ. ಜೊತೆಗೆ ಇವನಷ್ಟು ನೀಚವಾಗಿ ಯಾವ ಅಧಿಕಾರಿಯೂ ವರ್ತಿಸಿರಲಿಕ್ಕಿಲ್ಲ. ಇವನು ತನ್ನ ಹುದ್ದೆಯ ಪ್ರಭಾವವನ್ನು ಬಳಸಿಕೊಂಡು ಶಿಕ್ಷಕರನ್ನು ಇನ್ನಿಲ್ಲದಂತೆ ಸುಲಿಯುತ್ತಿರುವುದಲ್ಲದೆ ತನ್ನ ತಮ್ಮನಿಗೆ ಎಲ್‌ಐಸಿ ಏಜೆನ್ಸಿಯನ್ನು ಕೊಡಿಸಿ, ಇವನ ಹತ್ತಿರವೇ ಪಾಲಿಸಿ ತೆಗೆದುಕೊಳ್ಳಬೇಕೆಂದು ಶಿಕ್ಷಕರನ್ನು ಪೀಡಿಸುತ್ತಾನೆ. ದಿನಬಳಕೆಯ ವಸ್ತುಗಳನ್ನು ಅತೀ ಕಡಿಮೆ ಬೆಲೆಗೆ ಕೊಡುತ್ತೇನೆನ್ನುವ ಇನ್‌ಫ್ಲೆಕ್ಸ್ ಎಂಬ ಮೋಸಗಾರ ಕಂಪೆನಿಯೊಂದಿಗೆ ಈ ಬಿಇಓ ಶಾಮೀಲಾಗಿ ಪ್ರತಿ ಶಿಕ್ಷಕ 4000 ರೂ.ಗಳನ್ನು ಕಟ್ಟಿ ಈ ಕಂಪೆನಿಯ ಸದಸ್ಯರಾಗಬೇಕೆಂದು ಶಿಕ್ಷಕರನ್ನು ಪೀಡಿಸುತ್ತಾನೆ. ತನ್ನ ಸರ್ಕಾರಿ ಹುದ್ದೆಯಲ್ಲದೆ ಈ ಎರಡು ಖಾಸಗಿ ಲಾಭದಾಯಕ ಹುದ್ದೆಗಳಿಗೂ ಸಮಾನ ಸಮಯವನ್ನು ಕೊಟ್ಟು ಕಮಾಯಿ ಸುತ್ತಿರುವ ಈ ಅಂದಾನಪ್ಪ 'ತ್ರಿಬಲ್ ಡೀಲರ್' ಎಂಬ ಕುಖ್ಯಾತಿ ಗೊಳಗಾಗಿದ್ದಾನೆ.



ಅಂದಾನಪ್ಪ

ಹರಪನಹಳ್ಳಿ ತಾಲ್ಲೂಕಿನಲ್ಲಿ 150 ಕಿರಿಯ ಪ್ರಾಥಮಿಕ ಶಾಲೆಗಳು, 148 ಹಿರಿಯ ಪ್ರಾಥಮಿಕ ಶಾಲೆಗಳಿದ್ದು ಒಟ್ಟು 1250 ಮಂದಿ ಶಿಕ್ಷಕರಿದ್ದಾರೆ. ಇವರಲ್ಲಿ ಶೇಕಡಾ 90 ರಷ್ಟು ಮಂದಿ ಶಿಕ್ಷಕರು ಪ್ರತಿನಿತ್ಯ ಬಿಇಓ ಅಂದಾನಪ್ಪನಿಗೆ ಹಿಡಿಶಾಪ ಹಾಕಿ ಬದುಕುತ್ತಿದ್ದಾರೆ. ಈ ಕಿರಾತಕ ಅಂದಾನಪ್ಪ ಎಂತಹವನೆಂದರೆ ಸಣ್ಣಪುಟ್ಟ ಕಾರಣಗಳ ನೆಪವೊಡ್ಡಿ ಮುಖ್ಯವಾಗಿ ಶ್ರೀಮಂತ ಹಿನ್ನೆಲೆಯುಳ್ಳ ಶಿಕ್ಷಕರನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ಆರ್ಥಿಕವಾಗಿ ಸುಲಿಯಲಾರಂಭಿಸುತ್ತಾನೆ. ಇವನ ಸುಲಿಗೆಗೆ ಬಗ್ಗದೇ ಇರುವ ಶಿಕ್ಷಕರ ಮೇಲೆ ಎಲ್ಲಾ ರೀತಿಯ ಕುತಂತ್ರಗಳನ್ನು ಬಳಸಿ ಅಮಾನತು ಮುಂತಾದ ಅಸ್ತ್ರಗಳನ್ನು ಇವನು ಬಳಸುತ್ತಾನೆ. ಆರ್ಥಿಕವಾಗಿ ಹಿಂದುಳಿದ ಶಿಕ್ಷಕರನ್ನು ಮತ್ತು ಕೆಳಜಾತಿಯಿಂದ ಬಂದ ಶಿಕ್ಷಕರನ್ನು ಈ ಅದ್ವಾನಪ್ಪ ಗುಲಾಮಗಿರಿಗಿಂತ ಕಡೆಯಾಗಿ ಕಾಣುತ್ತಾನೆ. ಇವನು ತನ್ನ ದೌರ್ಜನ್ಯದ ಮೂಲಕವೇ ಶಿಕ್ಷಕರ ಸಂಘವನ್ನು ದನಿ ಎತ್ತದಂತೆ ಮಾಡಿದ್ದಾನೆ.

ಶಿಕ್ಷಕರ ಪೀಡಕ ಬಿಇಓ

ಬಿಇಓ ಅಂದಾನಪ್ಪ ಬಹಳಷ್ಟು ಮಂದಿ ಶಿಕ್ಷಕರ ಸೇವಾ ಪುಸ್ತಕದಲ್ಲಿ ಕಪ್ಪು ಗೆರೆಗಳನ್ನು ಮೂಡಿಸಿದ್ದಾನೆ. ಇವುಗಳಲ್ಲಿ ಕೆಲವನ್ನಷ್ಟೇ ಉದಾಹರಿಸಿದರೆ ಇವನ ಕಂತ್ರಿ ಬುದ್ಧಿ ಅರ್ಥವಾಗುತ್ತದೆ. ಪಿ.ಇ. ಟೀಚರ್ ಬಸವರಾಜ ಎಂಬಾತ ಖಾಸಗಿ ಪ್ರೌಢಶಾಲೆಯಿಂದ ಸರ್ಕಾರಿ ಶಾಲೆಗೆ ನೇಮಕಗೊಂಡಿದ್ದರು. ಹೀಗೆ ನೇಮಕಗೊಳ್ಳುವಾಗ ಕೆಲವು ತಾಂತ್ರಿಕ ಗೊಂದಲಗಳಾಗಿದ್ದವು. ಇವುಗಳನ್ನು ಅಂದಾನಪ್ಪನೆ ಸರಿಪಡಿಸಬಹುದಿತ್ತು, ಆದರೆ ಕಮಾಯಿ ವಸೂಲಿಯ ಒತ್ತಡವನ್ನುಂಟುಮಾಡುವ ಉದ್ದೇಶದಿಂದಲೇ ಅಂದಾನಪ್ಪ ಕಳೆದ 9 ತಿಂಗಳಿನಿಂದಲೂ ಪಿ.ಇ. ಟೀಚರ್ ಬಸವರಾಜುವಿಗೆ ಸಂಬಳವನ್ನೇ ನೀಡಿಲ್ಲ.

ಕಣಿವಿಹಳ್ಳಿ ಹೆಚ್.ಎಂ. ಕೊಟ್ರಪ್ಪ ಆರ್ಥಿಕವಾಗಿ ಸ್ಥಿತಿವಂತ ಶಿಕ್ಷಕ. ಈತನ ಶಾಲೆಯ ಕಾಮಗಾರಿ ಕೆಲಸಗಳಲ್ಲಿ ಅವ್ಯವಹಾರಗಳಾಗಿವೆ ಎಂದು ಸುಳ್ಳು ಆರೋಪಗಳನ್ನು ಶಿಕ್ಷಕ ಕೊಟ್ರಪ್ಪನ ಮೇಲೆ ಹೊರಿಸಿದ ಬಿಇಓ ಅಂದಾನಪ್ಪ ಕೊಟ್ರಪ್ಪನಿಂದ ಹಣ ಕೀಳಲು ಪ್ರಯತ್ನಿಸಿದ. ಆದರೆ ಅಂದಾನಪ್ಪನ ಈ ಕೀಳು ಕುತಂತ್ರಗಳಿಗೆ ಕೊಟ್ರಪ್ಪ 'ಕ್ಯಾರೇ' ಎನ್ನದಿದ್ದಾಗ ಅಂದಾನಪ್ಪ ಈ ಶಿಕ್ಷಕನಿಗೆ ಅಮಾನತ್ತು ಎಂಬ ಅಸ್ತ್ರ ಪ್ರಯೋಗಿಸಿದ್ದಾನೆ. ಆದರೆ ಕೊಟ್ರಪ್ಪ ಬಿಇಓ ಅಂದಾನಪ್ಪನ ವರ್ತನೆಯ ವಿರುದ್ಧ ಕೆಎಟಿಯಲ್ಲಿ ದೂರು (ಸಂಖ್ಯೆ 4019,2035) ಸಲ್ಲಿಸಿದ್ದಾರೆ.

ಡ್ರಾಯಿಂಗ್ ಅಥಾರಿಟಿ ಎನ್ನುವುದು ಆಯಾ ಕಚೇರಿಯಲ್ಲಿನ ಸಂಬಂಧಪಟ್ಟ ಗುಮಾಸ್ತನ ಜವಾಬ್ದಾರಿಯಾಗಿರುತ್ತದೆ. ಆದರೆ ಈ ತಲೆಹಿಟ್ಟ ಅಂದಾನಪ್ಪ ಡ್ರಾಯಿಂಗ್ ಅಥಾರಿಟಿಯನ್ನು ತನ್ನ ಸ್ವಾರ್ಥಕ್ಕಾಗಿ ತಾನೇ ನಿರ್ವಹಿಸಿದ್ದಾನೆ. ಬಿಇಓ ಅಂದಾನಪ್ಪನ ಈ ವರ್ತನೆಯನ್ನು ಕಚೇರಿಯ ಪ್ರಥಮ ದರ್ಜೆಯ ಗುಮಾಸ್ತ ಎನ್ [illegible] ಪ್ರಶ್ನಿಸಿದ್ದಕ್ಕೆ ಒಂದೇ ಕಾರಣಕ್ಕೆ ಈತನನ್ನು ಅಮಾನತುಗೊಳಿಸಲಾಗಿದೆ! ಚನ್ನವೀರನಾಯ್ಕ, ಬಿಇಓ ಅಂದಾನಪ್ಪನ ವಿರುದ್ಧ ಪತ್ರಿಕೆಗಳಿಗೆ ಹೇಳಿಕೆ ನೀಡಿ ಬಹಿರಂಗವಾಗಿ ಪ್ರತಿಭಟಿಸಿದ್ದಾರೆ.

ಬೀದಿಗಿಳಿದ ಇನ್ನೊಬ್ಬ ಶಿಕ್ಷಕ

ಎಲ್ಲಾ ಶಿಕ್ಷಕರಿಗೂ ತೊಂದರೆ ಕೊಟ್ಟರೀತಿ ಯಲ್ಲಿಯೇ ಶಿಕ್ಷಕ ವಿರೂಪಾಕ್ಷಪ್ಪನಿಗೆ ತೊಂದರೆ ಕೊಡಲು ಮುಂದಾದ ಈ ಅಂದಾನಪ್ಪ 'ಜೆಂಡರ್ ತರಬೇತಿ'ಯಲ್ಲಿ ವಿರೂಪಾಕ್ಷಪ್ಪನ ಹೆಸರು ಸೇರಿಸಿದ್ದಾನೆ. ಆದರೆ ಈ ತರಬೇತಿಯನ್ನು ಈಗಾಗಲೇ ವಿರೂಪಾಕ್ಷಪ್ಪ ಮುಗಿಸಿದ್ದರು. ಇದನ್ನು ಬಿಇಓಗೆ ಮನವರಿಕೆ ಮಾಡಲು ಪರಿಪರಿಯಾಗಿ ಪ್ರಯತ್ನಿಸಿದ್ದರೂ ಬಿಇಓ ಅಂದಾನಪ್ಪನಿಗೆ ಇವ್ಯಾವೂ ನಾಟಲಿಲ್ಲ. ಶಾಲೆಯಲ್ಲಿ ಪಾಠಗಳು ಹಿಂದುಳಿದಿದ್ದರಿಂದ, ಪುನಃ ತರಬೇತಿಗೆ ಹಾಜರಾಗದೆ ವಿರೂಪಾಕ್ಷಪ್ಪ ನೇರವಾಗಿ ಶಾಲೆಗೆ ಹೋಗಿ ಪಾಠ ಮಾಡಿದ್ದಾರೆ. ಇದನ್ನೇ ನೆಪವಾಗಿಟ್ಟುಕೊಂಡು ವಿರೂಪಾಕ್ಷಪ್ಪನನ್ನು ಬಿಇಓ ಅಂದಾನಪ್ಪ ಅಮಾನತುಗೊಳಿಸಿದ್ದ. ಆಗಸ್ಟ್ 6, 2007ರಂದು ಅಮಾನತುಗೊಂಡ ವಿರೂಪಾಕ್ಷಪ್ಪ ಸೆಪ್ಟೆಂಬರ್ 7ರಂದು ಅಂದರೆ ಒಂದೇ ತಿಂಗಳಿಗೆ ಅಮಾನತು ರಿವೋಕ್ ಮಾಡಿಸಿಕೊಂಡು ಕೆಲಸಕ್ಕೆ ಹಾಜರಾಗಿದ್ದು ಬಿಇಓ ಅಂದಾನಪ್ಪನಿಗೆ ಸಹಿಸಲಸಾಧ್ಯವಾಗಿ "ಎಲ್ರೂ ಸೇರಿ ಅವನಿಗೆ (ವಿರೂಪಾಕ್ಷಪ್ಪನಿಗೆ) ಒದ್ದು ಬಿಡ್ರಿ" ಎಂದು ಬಹಿರಂಗವಾಗಿಯೇ ಹೇಳಿದ್ದಾನೆ. ಈ ವಿಷಯವನ್ನು ತಿಳಿದುಕೊಂಡ ವಿರೂಪಾಕ್ಷಪ್ಪ ಈ ಬಗ್ಗೆ ಪ್ರಶ್ನಿಸಿದಾಗ ಬಿಇಓ ಅಂದಾನಪ್ಪ "ಹೌದು ಅಂದಿದ್ದೆ ಏನ್ ಮಾಡ ಕೊಂತೀಯಾ" ಎಂದು ಮುಂತಾಗಿ ಅಹಂಕಾರದಿಂದ ದಬಾಯಿಸಿದ್ದಾನೆ.

ಪ್ರತಿಭಟನೆ

ಅವಮಾನಕ್ಕೊಳಗಾದ ಶಿಕ್ಷಕ ವಿರೂಪಾಕ್ಷಪ್ಪ 31-12-2007 ಮತ್ತು 01-01-2008 ಈ ಎರಡೂ ದಿನಗಳ ಕಾಲ ಆಮರಣಾಂತ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದಾಗ ದಲಿತ ಹಾಗೂ ಪ್ರಗತಿಪರ ಸಂಘಟನೆಗಳು ವಿರೂಪಾಕ್ಷಪ್ಪನ ಜೊತೆ ಸೇರಿ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ಮಾಡಿದವು. 2ನೇ ದಿನ ಸಂಜೆಯ ಹೊತ್ತಿಗೆ ವಿರೂಪಾಕ್ಷಪ್ಪನ ಆರೋಗ್ಯದ ಪರಿಸ್ಥಿತಿ ಹದಗೆಟ್ಟು ಹೋಗಿ ಪರಿಸ್ಥಿತಿ ಕಾವೇರಿದ್ದರಿಂದ ಸ್ವತಃ ಅಂದಾನಪ್ಪನೇ ವಿರೂಪಾಕ್ಷಪ್ಪನ ಹತ್ತಿರ ಬಂದು ಬಹಿರಂಗವಾಗಿ ಕ್ಷಮೆಯಾಚಿಸಿದ.

ಈ ಘಟನೆಯ ನಂತರ ಅಂದಾನಪ್ಪ ಸರಿಯಾಗಬಹುದೆಂದುಕೊಂಡವರ ನಿರೀಕ್ಷೆ ಸುಳ್ಳಾಗಿದೆ. ವಿರೂಪಾಕ್ಷಪ್ಪನಂತೆ ಬಹಳಷ್ಟು ಶಿಕ್ಷಕರು ಬಿಇಓ ಅಂದಾನಪ್ಪನಿಂದ ಮತ್ತೆ ಬಲಿಪಶುಗಳಾಗಿದ್ದಾರೆ. ಇದರ ಅರ್ಥವೇನೆಂದರೆ ಮನವಿ ಪ್ರತಿಭಟನೆಗಳಿಗೆ ಅಂದಾನಪ್ಪ ಬದಲಾಗುವುದಿಲ್ಲ. ವಿನಾಕಾರಣ ಶಿಕ್ಷಕರಿಗೆ ಇವನು ನೀಡಿದ ಹಿಂಸೆ ಪ್ರತಿಫಲವಾಗಿ ಮೇಲಧಿಕಾರಿಗಳು ಇವನ ಮೇಲೆ ಕ್ರಮ ಜರುಗಿಸಿದರೆ ಮಾತ್ರ ಇವನು ಬದಲಾಗಬಹುದು ಎಂಬುದು.


ಜುಲೈ 8ರಂದು ದ.ಸಂ.ಸ.ಹರಪನಹಳ್ಳಿ ತಾಲ್ಲೂಕು ಘಟಕವು ಭ್ರಷ್ಟ ಬಿಇಓ ಅಂದಾನಪ್ಪನ ವಿರುದ್ಧ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿ ಬಿಇಓ ಮಾಡಿರುವ ಹೀನಕೃತ್ಯಗಳನ್ನೆಲ್ಲ ಕರಪತ್ರದಲ್ಲಿ ಪಟ್ಟಿ ಮಾಡಿ ಪ್ರತಿಭಟನೆ ನಡೆಸಿದುವು. ಇಷ್ಟೆಲ್ಲಾ ಆದರೂ ಅಂದಾನಪ್ಪ ಮಾತ್ರ ತನ್ನ ಕುರ್ಚಿ ಬಿಟ್ಟು ಅಲುಗಾಡಲಿಲ್ಲ.

ಇಲ್ಲಿನ ಗುರುಭವನ ನಿರ್ಮಾಣಕ್ಕಾಗಿ 1250 ಶಿಕ್ಷಕರಿಂದ ತಲಾ 300 ರೂ.ಗಳಂತೆ ಸಂಗ್ರಹಿಸಿದ್ದರೂ ಇಲ್ಲಿನತನಕ ಇದಕ್ಕೆ ಯಾವುದೇ ಲೆಕ್ಕ ನೀಡಿಲ್ಲ. ಅಂಗನವಾಡಿ ಶಾಲೆಗಳವರಿಗೆ ಇಂತಿಂಥ ಅಂಗಡಿಯಲ್ಲೇ ಸಾಮಾನು ಕೊಳ್ಳಬೇಕೆಂದು ಷರತ್ತು ವಿಧಿಸಿ ಕಮಾಯಿಸಿಕೊಳ್ಳುವುದರಿಂದ ಹಿಡಿದು ಸರ್ಕಾರದಿಂದ ದಿನಸಿ ಮುಂತಾದ ಸಾಮಾನುಗಳನ್ನು ಈ ಮೊದಲೇ ಬಂದಿದ್ದರೂ ಅವು ತಡವಾಗಿ ಬಂದಿವೆ ಎಂದು ತೋರಿಸಿ ಇದರಲ್ಲೂ ಅಂದಾನಪ್ಪ ಕಮಾಯಿಸುತ್ತಿದ್ದಾನೆ. ಇವನ ಭ್ರಷ್ಟಾಚಾರಗಳ ಎಲ್ಲಾ ವಿವರಗಳನ್ನು ಇಲ್ಲಿ ನೀಡಲಾಗುವುದಿಲ್ಲವಾದ್ದರಿಂದ ಮೇಲ್ನೋಟಕ್ಕೆ ಕಾಣುತ್ತಿರುವ ಹಲ್ಕಟ್ ಬಿಇಓ ಅಂದಾನಪ್ಪನ ಅಕ್ರಮಗಳ ಕುರಿತು ತನಿಖೆ ನಡೆಸಿ ಇವನನ್ನು ಅಂದರ್ ಕಳಿಸಿದರೆ ಹರಪನಹಳ್ಳಿ ತಾಲ್ಲೂಕಿನ ಶೈಕ್ಷಣಿಕ ಪ್ರಗತಿ ಸಾಧ್ಯವಾಗಬಹುದೇನೋ?

ಚಂದ್ರಶೇಖರ ತೋರಣಘಟ್ಟ.

ಯಡ್ಡಿಗೆ ಶಾಕ್ ಕೊಟ್ಟ ಈಶ್ವರಪ್ಪ

ತನ್ನ ರಾಜಕೀಯ ಕಡು ವೈರಿ, ಹಳೆಯ ಗೆಳೆಯ ಈಶ್ವರಪ್ಪರನ್ನು ವಿದ್ಯುತ್ ತಂತಿಯ ಸುಳಿಯಲ್ಲಿ ಸಿಕ್ಕಿಸಿ, ತಾನೊಬ್ಬನೇ 'ಹೀರೊ' ಆಗಲು ಹೊರಟಿದ್ದ ಮುಖ್ಯಮಂತ್ರಿ ಯಡ್ಡಿಗೆ ಈಶ್ವರಪ್ಪ 'ಶಾಕ್' ಹೊಡೆಸಿದ್ದಾರೆ.



ಪಕ್ಷದ ಪ್ರಣಾಳಿಕೆಯಲ್ಲಿ ಪ್ರಕಟಿಸಿದಂತೆ ಉಚಿತ ವಿದ್ಯುತ್ ಕೊಡಲಾಗುವುದಿಲ್ಲ ಎಂಬುದು ಚುನಾವಣೆಗೂ ಮುಂಚೆಯೇ ಯಡ್ಡಿಗೆ ಚೆನ್ನಾಗಿ ಗೊತ್ತಿತ್ತು. ಆದರೂ ಸುಳ್ಳು ಪ್ರಚಾರ ಮಾಡಿ ಅಧಿಕಾರ ಗಿಟ್ಟಿಸಿಕೊಂಡಿದ್ದರು. ಅಧಿಕಾರ ಹಿಡಿದ ಮೇಲೆ ಜನ ಸುಮ್ಮನಿರುತ್ತಾರೆಯೇ? ಅದಕ್ಕೆ ಈ ಖಾತೆಯನ್ನೇ ತಮ್ಮ ವೈರಿ ಈಶ್ವರಪ್ಪರ ಹೆಗಲಿಗೆ ಹೊರಿಸಿ, ತಾವು ನಿಶ್ಚಿಂತೆಯಿಂದ ಇರುವ ಮಸಲತ್ತು ನಡೆಸಿದ್ದರು. ಉಚಿತ ವಿದ್ಯುತ್ ನೀಡಿದರೆ ಅದರ ಕ್ರೆಡಿಟ್ ಈಶ್ವರಪ್ಪಗೆ ಹೋಗುತ್ತದೆ ಎಂದು ಯೋಚಿಸಿದ ಯಡ್ಡಿ ಬಜೆಟ್‌ನಲ್ಲಿ ಈ ವಿಷಯವನ್ನು ಸೇರಿಸಿಯೇ ಇರಲಿಲ್ಲ.

ಈ ಬಗ್ಗೆ 'ಲಂಕೇಶ್' ವಾರ ಪತ್ರಿಕೆಯಲ್ಲಿ ಬಂದ 'ವಚನಭ್ರಷ್ಟ ಈಶ್ವರಪ್ಪ' ಎಂಬ ಸುದ್ದಿ ನೋಡಿದ ಈಶ್ವರಪ್ಪ, ಸೀದಾ ಯಡ್ಡಿ ಎದುರು ಹೋಗಿ ಧಮಕಿ ಹಾಕಿಯೇ ಬಿಟ್ಟರು. "ಮಾತು ಕೊಟ್ಟಾಗಿದೆ. ಉಳಿಸಿಕೊಳ್ಳದಿದ್ದಲ್ಲಿ ನಾನು ವಚನಭ್ರಷ್ಟನಾಗುತ್ತೇನೆ. ಏನಾದರೂ ಮಾಡಿ, ಉಚಿತ ವಿದ್ಯುತ್ ನೀಡುವ ಬಗ್ಗೆ ಬಜೆಟ್‌ನಲ್ಲಿ ಪ್ರಕಟಿಸಿ" ಎಂದು ಕೂಗಾಡಿದರು. ಒಂದು ವೇಳೆ ತನ್ನ ವರ್ಚಸ್ಸಿಗೆ ಮಸಿ ಬಳಿಯುವ ಪ್ರಯತ್ನ ಮಾಡಿದಲ್ಲಿ ರಾಜೀನಾಮೆ ಕೊಡುತ್ತೇನೆ, ಆವಾಗ ಏನಾಗುತ್ತದೆಯೋ ನೋಡೋಣ ಎಂದು ಎಚ್ಚರಿಕೆಯನ್ನೂ ನೀಡಿದರು.

ಈಶ್ವರಪ್ಪನ ಕೋಪಕ್ಕೆ ಹೆದರಿದ ಯಡ್ಡಿ ಕೊನೆಗೂ ಬಜೆಟ್‌ನಲ್ಲಿ ರೈತರಿಗೆ ಉಚಿತ ವಿದ್ಯುತ್ ಕೊಡುವ ಪ್ರಕಟಣೆ ಸೇರಿಸಿದರು. ಮೊದಲೇ ರಾಜ್ಯ ವಿದ್ಯುತ್ ಕೊರತೆಯಿಂದ ತತ್ತರಿಸಿದೆ. ಪವರ್‌ಕಟ್‌ನಿಂದ ಸಾಮಾನ್ಯ ಜನತೆ ಸಿಟ್ಟಿಗೆದ್ದಿದ್ದಾರೆ. ಈ ಸಂದರ್ಭದಲ್ಲಿ ಬಜೆಟ್‌ನಲ್ಲಿ ಉಚಿತ ವಿದ್ಯುತ್ ನೀಡುವ ವಿಷಯ ಪ್ರಕಟಿಸಿರುವುದನ್ನು ನೋಡಿ ಜನರಂತೂ ಬಿದ್ದು ಬಿದ್ದು ನಗುತ್ತಿದ್ದಾರೆ. ಆದರೆ ಯಡ್ಡಿ ಮಾತ್ರ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡವರಂತೆ ನೆಮ್ಮದಿಯಾಗಿದ್ದಾರೆ.

ಇಷ್ಟೇ ಆಗಿದ್ದರೆ ನಕ್ಕು ಸುಮ್ಮನಾಗಿ ಬಿಡಬಹುದಿತ್ತು. ಯಡ್ಡಿ-ಈಶ್ವರಪ್ಪರ ಜಗಳ ಇಷ್ಟಕ್ಕೇ ನಿಲ್ಲಲಿಲ್ಲ. 'ದಿಕ್ಕು-ದಿಸೆ' ಇಲ್ಲದ ಬಜೆಟ್ ಮಂಡಿಸಿ ಯಡ್ಡಿ ಪ್ರಚಾರ ಪಡೆಯುತ್ತಿರುವುದನ್ನು ನೋಡಿ ಈಶ್ವರಪ್ಪರ ಹೊಟ್ಟೆಯಲ್ಲಿ ಆವಲಕ್ಕಿ ಕುಟ್ಟಿದಂತಾಗಿದೆ. ಏನಾದರೂ ಮಾಡಿ 'ಉಚಿತ ವಿದ್ಯುತ್' ನೀಡುತ್ತಿರುವ ವಿಷಯದಿಂದಾದರೂ ತಾವು ಪ್ರಚಾರ ಪಡೆಯಬೇಕೆಂದು ನಿರ್ಧರಿಸಿದ ಈಶ್ವರಪ್ಪ ಎಲ್ಲ ಪ್ರಮುಖ ದಿನಪತ್ರಿಕೆಗಳಿಗೂ ಅರ್ಧ ಪುಟದಷ್ಟು ಜಾಹೀರಾತು ನೀಡಿದರು. 'ರೈತ ಬಾಂಧವರಿಗೆ ಕರ್ನಾಟಕ ಸರ್ಕಾರದ ಕೊಡುಗೆ' (ಇದರಲ್ಲಿ ತಾವು ವಚನಭ್ರಷ್ಟರಲ್ಲ ಎಂದು ಹೇಳಿಕೊಂಡಿರುವ ಈಶ್ವರಪ್ಪ, ಉಪಾಯವಾಗಿ ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಲು ನಡೆಸಿರುವ ಕುತಂತ್ರವನ್ನು ಸಮರ್ಥಿಸಿಕೊಂಡಿದ್ದಾರೆ) ಎಂಬ ಹೆಡ್ಡಿಂಗ್‌ನ ಈ ಜಾಹೀರಾತು ಕೆಲ ಪತ್ರಿಕೆಗಳಲ್ಲಿ ಮುಖಪುಟದಲ್ಲೇ ಪ್ರಕಟಗೊಂಡಿತು. ಈಗ ಯಡ್ಡಿಯಷ್ಟೇ ತಮಗೂ ಪ್ರಚಾರ ದೊರೆತಿದೆ ಎಂದು ಈಶ್ವರಪ್ಪ ಬೀಗುತ್ತಿದ್ದಾರೆ. ಯಾರದೋ ದುಡ್ಡು, ಈಶ್ವರಿಯ ಯಲ್ಲಮ್ಮನ ಜಾತ್ರೆ. ■

ಕೇಸರಿಕರಣಗೊಳ್ಳಲಿದೆ ಪಠ್ಯ

ಬಿಜೆಪಿ ಅಧಿಕಾರ ಹಿಡಿದರೆ ಏನೆಲ್ಲಾ ಮಾಡುತ್ತದೆ ಎಂದು ನಿರೀಕ್ಷಿಸಲಾಗುತ್ತಿತ್ತೋ, ಅದನ್ನೇ ಯಡ್ಡಿ ನೇತೃತ್ವದ ಸರ್ಕಾರ ಕೂಡ ಮಾಡ ಹೊರಟಿದೆ. ಮೊದಲಿಗೆ ಶಾಲಾ ಪಠ್ಯ ಕೇಸರಿಕರಣಗೊಳಿಸುವ ಸೂಚನೆಯನ್ನು ಮುಖ್ಯಮಂತ್ರಿ ಯಡ್ಡಿ ಮತ್ತು ಶಿಕ್ಷಣ ಸಚಿವ ಕಾಗೇರಿ ನೀಡಿದ್ದಾರೆ.



ವಿಶ್ವೇಶ್ವರ ಹೆಗಡೆ ಕಾಗೇರಿ


ಆರ್‌ಎಸ್‌ಎಸ್‌ನಿಂದ ಬಂದ ವಿಶ್ವೇಶ್ವರ ಹೆಗಡೆ ಕಾಗೇರಿ ಶಿಕ್ಷಣ ವ್ಯವಸ್ಥೆ ಸರಿ ಇಲ್ಲ ಎಂದು ಕಾವ್, ಕಾವ್ ಕೂಗಲಾರಂಭಿಸಿದಾಗ ಅವರ ಉದ್ದೇಶ ಸ್ಪಷ್ಟವಾಗಿತ್ತು. ಆದರೆ ಅವರ ಹಿಡನ್ ಅಜೆಂಡಾವನ್ನು ಬಹಿರಂಗಪಡಿಸಿದವರೆಂದರೆ ಕಾಗೇರಿಯ ಗುರು' ಅನಂತು. ಬೆಂಗಳೂರಿನಲ್ಲಿ ನಡೆದ ಸೋದೆ ವಾದಿರಾಜ ಮಠದ ಶ್ರೀಗಳ ಪುರ ಪ್ರವೇಶ ಕಾರ್ಯಕ್ರಮದಲ್ಲಿ ಮಾತನಾಡಿದ ಅನಂತು, ಭಾರತೀಯ ಸಂಸ್ಕೃತಿಯನ್ನು ಉಳಿಸಲು, ಬೆಳೆಸಲು ಕೇಸರೀಕರಣ ಅನಿವಾರ್ಯ ಎಂದು ಘೋಷಿಸಿಯೇ ಬಿಟ್ಟರು. ಅಲ್ಲೇ ಇದ್ದ ಕಾಗೇರಿ ಕೂಡ ಇದನ್ನು ಸಮರ್ಥಿಸಿ ಮಾತನಾಡಿ, ತಾವು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿರುವ ಸುಳಿವು ನೀಡಿದರು.

ಈಗ ಈ ಬಗ್ಗೆ ಹೋದಲ್ಲಿ-ಬಂದಲ್ಲಿ ಕಾಗೇರಿ ಕೂಗಿಕೊಳ್ಳುತ್ತಿದ್ದಾರೆ. ಪಠ್ಯ ಪರಿಷ್ಕರಿಸಲು ಸಮಿತಿ ರಚಿಸಿ, ಚೆಡ್ಡಿಗಳನ್ನು ತಂದು ಕೂರಿಸಲು ಸಿದ್ಧತೆ ನಡೆಸಿದ್ದಾರೆ.

ಇದೇನು ಮುಖ್ಯಮಂತ್ರಿ ಯಡ್ಡಿಗೆ ಗೊತ್ತಿಲ್ಲದೆ ನಡೆಯುತ್ತಿರುವ ಬೆಳವಣಿಗೆಯೇನೂ ಅಲ್ಲ. 'ನಮ್ಮ ಮಕ್ಕಳು ಇಲ್ಲಿನ ಸಂಸ್ಕೃತಿ ಸಂಪ್ರದಾಯವನ್ನು ಮರತೇ ಬಿಡುತ್ತಾರೆ. ಇದಕ್ಕೆ ಶಿಕ್ಷಣ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆಯೊಂದೇ ದಾರಿ. ಆ ನಿಟ್ಟಿನಲ್ಲಿ ಚಿಂತನೆ ನಡೆಯುತ್ತಿದೆ'ಎಂದು ಸ್ವತಃ ಯಡ್ಡಿಯೇ ಘೋಷಿಸಿದ್ದಾರೆ.

ಕೇಸರೀಕರಣ' ಶಬ್ದ ಬಳಸದೇ ಶಿಕ್ಷಣದಲ್ಲಿ ತಮ್ಮ ಅಜೆಂಡಾಗಳನ್ನು ಅಳವಡಿಸಬೇಕೆಂಬುದು ಯಡ್ಡಿಯ ನಿಲುವು. ಶಿಕ್ಷಣ ಕ್ಷೇತ್ರದಲ್ಲಿನ ಪ್ರತಿಯೊಂದು ಬೆಳವಣಿಗೆಯನ್ನೂ ಗಮನಿಸಿ, ಕೇಸರೀಕರಣದ ಪ್ರಕ್ರಿಯೆಯನ್ನು ತಡೆಯದಿದ್ದಲ್ಲಿ ಅಪಾಯ ತಪ್ಪಿದ್ದಲ್ಲ. ಸತ್ತು ಹೋಗಿರುವ ಭಾಷೆ ಸಂಸ್ಕೃತಕ್ಕೆ ವಿವಿ ಸ್ಥಾಪಿಸಲು ಹೊರಟ ಸರ್ಕಾರ, ಸಂಸ್ಕೃತವನ್ನು ಕಡ್ಡಾಯ ಭಾಷೆಯಾಗಿ ಕಲಿಯಲೇ ಬೇಕು ಎಂದು ಆದೇಶ ಹೊರಡಿಸುವ ದಿನ ದೂರವಿದ್ದಂತೆ ಕಾಣುತ್ತಿಲ್ಲ. ■

ಹೆಚ್.ಡಿ.ಕೋಟೆ: ನಾಮಧಾರಿ ಗೌಡರ ಮೇಲೆ ಶಾಸಕ ಚಿಕ್ಕಣ್ಣನ ಧಾಳಿ!



ನಾಯಕ ಜನಾಂಗದ ಚಿಕ್ಕಣ್ಣ ಶಾಸಕನಾಗಿ ಆಯ್ಕೆಯಾದ ಮೇಲಂತೂ ನಾಯಕರ ಅಟ್ಟಹಾಸಗಳಿಗೆ ಪರವಾನಿಗೆ ಸಿಕ್ಕಂತಾಗಿಬಿಟ್ಟಿತು. ಅಲ್ಲಿಂದಾಚೆಗೆ ಊರಿನಲ್ಲಿ ನಾಯಕರ ದೌರ್ಜನ್ಯಗಳಿಗೆ ಕೊನೆಯಿಲ್ಲದಂತಾಯಿತು. ದಲಿತ ಮತ್ತು ನಾಮಧಾರಿ ಗೌಡರ ಹುಲ್ಲು ಮೆದೆಗಳಿಗೆ ಬೆಂಕಿ ಹಾಕುವುದು, ಕೊಲೆ ಬೆದರಿಕೆ ಹೊಡ್ಡುವುದು ಅವರ ದಿನಚರಿಯಾಗಿಹೋಯಿತು. ಇದರ ವಿರುದ್ಧ ಪೊಲೀಸರಿಗೆ ದೂರು ಕೊಡಲಾಯಿತಾದರೂ ಶಾಸಕನೇ ನಾಯಕರ ಬೆನ್ನಿಗಿದ್ದುದರಿಂದ ಅವೆಲ್ಲ ಕಸದ ಬುಟ್ಟಿ ಸೇರಿದವು.

ಕೆ.ಬೆಳತ್ತೂರು ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆಯಿಂದ ಸುಮಾರು ಹತ್ತು-ಹನ್ನೆರಡು ಕಿ.ಮೀ. ದೂರದಲ್ಲಿರುವ ಒಂದು ಗ್ರಾಮ. ಸುಮಾರು ಆರು ನೂರು ಮನೆಗಳಿರುವ ಈ ಊರಿನಲ್ಲಿ ಎಲ್ಲಾ ಜನಾಂಗದವರು ವಾಸವಾಗಿದ್ದಾರಾದರೂ ಜನಸಂಖ್ಯೆಯಲ್ಲಿ ಹೆಚ್ಚಾಗಿರುವ ನಾಯಕರದೇ ಪ್ರಾಬಲ್ಯ. ನಾಮಧಾರಿ ಗೌಡರ ಕುಟುಂಬಗಳೂ ಇವೆಯಾದರೂ ಬಹಳ ಕಡಿಮೆ. ಇವರು ಆರ್ಥಿಕವಾಗಿ ಪ್ರಬಲವಾಗಿದ್ದಾರಾದರೂ ಜನಸಂಖ್ಯೆಯಲ್ಲಿ ಪ್ರಾಬಲ್ಯವಿರುವ ನಾಯಕರಿಂದ ಆಗಾಗ ದೌರ್ಜನ್ಯಕ್ಕೆ ಒಳಗಾಗುತ್ತಲೇ ಇರುತ್ತಾರೆ.

ಮೂರು ಕಡೆಯಿಂದ ಕಬಿನಿ ನದಿಯಿಂದ ಸುತ್ತುವರೆದಿರುವ, ಎತ್ತ ನೋಡಿದರೂ ಬತ್ತದ ಹೊಲಗಳೇ ಇರುವ ಈ ಸುಂದರ ಹಳ್ಳಿ ಅವತ್ತು ಕೂಡ (ಜುಲೈ 13ರ ಭಾನುವಾರ) ಬೇರೆ ದಿನಗಳಂತೆ ಎಲ್ಲ ಹಳ್ಳಿಗಳಂತೆ ಶಾಂತಿಯುತವಾಗಿಯೇ ಇತ್ತು. ಆದರೆ ಈ ಶಾಂತಿ ಬಹಳ ಹೊತ್ತು ಉಳಿಯಲಿಲ್ಲ. ಇದ್ದಕ್ಕಿದ್ದಂತೆ ಬೆಳಗ್ಗೆ ಹತ್ತು ಗಂಟೆ ಸುಮಾರಿಗೆ ಆ ಹಳ್ಳಿಯಲ್ಲಿ ಸಂಖ್ಯೆಯಲ್ಲಿ ಪ್ರಬಲರಾಗಿರುವ ನಾಯಕ ಜನಾಂಗದ ಸುಮಾರು ಒಂದು ಸಾವಿರ ಜನರ ಗುಂಪು ದೊಣ್ಣೆ ಬರ್ಜಿ, ಈಟಿ, ಕಲ್ಲುಗಳನ್ನು ಹಿಡಿದುಕೊಂಡು ಏಕಾಏಕಿ ಅದೇ ಹಳ್ಳಿಯ ಸಂಖ್ಯೆಯಲ್ಲಿ ಕಡಿಮೆ ಇರುವ ನಾಮಧಾರಿ ಗೌಡರ ಮನೆಗಳ ಮೇಲೆ ದಾಳಿಮಾಡಲು ಪ್ರಾರಂಭಿಸಿ ಬಿಟ್ಟಿತು.

ಕೇವಲ ಹತ್ತು-ಹದಿನೈದರಷ್ಟಿದ್ದ ಗೌಡರ ಕಡೆಯವರು ಸ್ವಲ್ಪ ಪ್ರತಿರೋಧ ತೋರಿಸಿದರಾದರೂ ದೊಡ್ಡ ಸಂಖ್ಯೆಯಲ್ಲಿದ್ದ ನಾಯಕರನ್ನು ಎದುರಿಸಲಾರದೇ ದಿಕ್ಕಾಪಾಲಾದರು. ಇದರಿಂದ ಮತ್ತಷ್ಟು ಉತ್ಸುಕರಾದ ನಾಯಕರು ಕಲ್ಲು ತೂರಾಟ ನಡೆಸುತ್ತಾ ಜನರನ್ನು ಭಯಭೀತರನ್ನಾಗಿಸುತ್ತಾ ಸಿಕ್ಕ ಸಿಕ್ಕ ಮನೆಗಳನ್ನು ಧ್ವಂಸ ಮಾಡಿಬಿಟ್ಟರು; ಈ ಗುಂಪನ್ನು ಸಮಾಧಾನ ಮಾಡಲೆತ್ನಿಸಿದ ಬಸವೇಗೌಡರ ಮೇಲೂ ಮಾರಣಾಂತಿಕ ಹಲ್ಲೆ ಮಾಡಿ ಅವರನ್ನು ಒಂದು ಕಡೆ ಕೂಡಿ ಹಾಕಿದರು; ಯಾರ ಪ್ರತಿರೋಧವೂ ಇಲ್ಲದಿದ್ದುದರಿಂದ ದಾಳಿಕೋರರು ನಾಮಧಾರಿ ಗೌಡರ ಮನೆಗಳನ್ನು ಒಂದೊಂದಾಗಿ ಲೂಟಿ ಮಾಡುತ್ತಾ ಧ್ವಂಸಗೊಳಿಸಿದರು. ಅಷ್ಟೊತ್ತಿಗೆ ಅಲ್ಲಿಗೆ ಬಂದ ಕೋಟೆ ಎಸ್‌ಐ ಅಶೋಕ್ ಕುಮಾರ್ ಒಂದು ಗುಂಪನ್ನು ನಿಯಂತ್ರಿಸುವ ನಾಟಕವಾಡುತ್ತಲೇ ದಾಳಿಕೋರರಿಗೆ ಗ್ರೀನ್ ಸಿಗ್ನಲ್ ಕೊಟ್ಟು ತನ್ನ ಕಣ್ಣೆದುರಿಗೇ ನಾಮಧಾರಿ ಗೌಡರ ಒಂದು ಅಂಗಡಿಯನ್ನು ಲೂಟಿ ಮಾಡಿಸಿಬಿಟ್ಟ! ಇದನ್ನೆಲ್ಲಾ ಎಸ್ಸೈ ಅಶೋಕ್ ನೋಡುತ್ತಾ ಮಜಾ ತೆಗೆದುಕೊಳ್ಳುತ್ತಿದ್ದ!

ಸಬ್‌ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್‌ನೇ ಸಾಥ್ ನೀಡಿದ ಮೇಲೆ ಕೇಳಬೇಕೆ? ನಾಯಕರ ಹೆಂಗಸರೂ ಕೂಡ ದಾಳಿಯಲ್ಲಿ ಪಾಲ್ಗೊಂಡುಬಿಟ್ಟರು. ಅಲ್ಲಿಗೆ ಮುಗೀತು. ನೋಡು ನೋಡುತ್ತಿದ್ದಂತೆ ಇಡೀ ನಾಮಧಾರಿ ಗೌಡರ ಒಂದೊಂದು ಮನೆಗೂ ನುಗ್ಗಿದ ನಾಯಕ ದಾಳಿಕೋರರು ಸಿಕ್ಕ ಸಿಕ್ಕ ಸಾಮಾನು-ಸರಂಜಾಮುಗಳನ್ನು, ಚಿನ್ನ-ಬೆಳ್ಳಿಗಳನ್ನು, ನಗದು ಹಣವನ್ನು ಲೂಟಿ ಹೊಡೆದರು. ಇವರ ಕ್ರೌರ್ಯ ಎಷ್ಟಿತ್ತೆಂದರೆ ಊರಿನ ಮುಖಂಡ ನಾಗರಾಜ್‌ರವರ ಮನೆಯನ್ನು ಎರಡೆರಡು ಬಾರಿ ಲೂಟಿ ಮಾಡಿದ್ದಾರೆ ಮತ್ತು ಅವರನ್ನು ಮುಗಿಸಲೇಬೇಕೆಂದು ಹುಡುಕಿಕೊಂಡು ಹೋಗಿ ಅವರು ಕೆಲಸ ಮಾಡುತ್ತಿದ್ದ ಕಬ್ಬಿನ ಗದ್ದೆಗೂ ಬೆಂಕಿ ಇಟ್ಟಿದ್ದಾರೆ. ಅದೃಷ್ಟವಶಾತ್ ಅವರು ಅಲ್ಲಿಂದ ಪಾರಾಗಿದ್ದಾರೆ.

ಕೋಟೆ ಕೊಳ್ಳೆ ಹೊಡೆದ ಮೇಲೆ...

ಯಥಾಪ್ರಕಾರ ಎಲ್ಲವೂ ಮುಗಿದ ಮೇಲೆ ಹೆಚ್ಚಿನ ಪೊಲೀಸರು ಕೆ.ಬೆಳತ್ತೂರಿಗೆ ಬಂದರು. ಅಷ್ಟೊತ್ತಿಗಾಗಲೇ ಆಗಬಾರದ್ದೆಲ್ಲವೂ ಆಗಿ ಹೋಗಿತ್ತು. ನಾಮಧಾರಿ ಗೌಡರ ಬೀದಿಗಳು ಯುದ್ಧಾ ನಂತರದ ರಣರಂಗದಂತಾಗಿತ್ತು; ಗೌಡರ ಮಹಿಳೆಯರು, ಪುರುಷರು, ವೃದ್ಧರು, ಮಕ್ಕಳೆಲ್ಲರೂ ಊರು ಬಿಟ್ಟು ದಿಕ್ಕಾಪಾಲಾಗಿ ಹೋಗಿದ್ದರು. ಪೊಲೀಸರು ಒಂದಿಷ್ಟು ಜನರನ್ನು ಅರೆಸ್ಟ್ ಮಾಡುವ ಶಾಸ್ತ್ರವನ್ನು ಮಾಡಿಮುಗಿಸಿದರು. ಅಷ್ಟೇ, ಇಡೀ ಊರು ಮೌನಕ್ಕೆ ಶರಣಾಯಿತು.

ನಂತರ ಘಟನಾ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಎಸ್ಪಿ ಘಟನೆಯ ದುರಂತವನ್ನು ಕಣ್ಣಾರೆ ಕಂಡು 'ಇದು ನಿಜಕ್ಕೂ ಭಯಾನಕ' ಎನ್ನುತ್ತಾ ನೊಂದವರಿಗೆ ಸಾಂತ್ವನ ಹೇಳಿ, ತಪ್ಪಿತಸ್ಥರ ವಿರುದ್ಧ ಉಗ್ರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಯಾಕೆ ಈ ದೌರ್ಜನ್ಯ?

ಈಗಾಗಲೇ ಹೇಳಿದಂತೆ ಈ ಊರಿನಲ್ಲಿ ಜನಸಂಖ್ಯೆಯಲ್ಲಿ ಪ್ರಬಲರಾಗಿರುವ ನಾಯಕರದ್ದೇ ದರ್ಬಾರು. ಈಗ್ಗೆ ಆರೇಳು ತಿಂಗಳ ಹಿಂದೆ ದಲಿತ ಹುಡುಗರಿಗೂ ಹಾಗೂ ನಾಯಕ ಹುಡುಗರಿಗೂ ಕ್ರಿಕೆಟ್ ಪಂದ್ಯಾವಳಿ ಏರ್ಪಟ್ಟಿತ್ತು. ಕ್ರಿಕೆಟ್‌ನಲ್ಲಿ ದಲಿತ ಹುಡುಗರೇ ಗೆದ್ದುಬಿಟ್ಟರು! ಆದರೆ, ಕೆಳಜಾತಿಯವರು ತಮ್ಮನ್ನು ಸೋಲಿಸುತ್ತಾರೆಂದರೇನು ಎಂಬ ಅಹಮ್ಮು ನಾಯಕರನ್ನು ಕೆರಳಿಸಿತು. ರೊಚ್ಚಿಗೆದ್ದ ನಾಯಕ ಹುಡುಗರು ತಮ್ಮ ಸೋಲನ್ನು ಒಪ್ಪಿಕೊಳ್ಳದೇ ಕ್ಯಾತೆ ತೆಗೆದು ದಲಿತ ಹುಡುಗರ ಮೇಲೆ ಯದ್ವಾತದ್ವಾ ಹಲ್ಲೆ ನಡೆಸಿದರು. ಅವರ ದರ್ಬಾರು ಕ್ರಿಕೆಟ್ ಆಟಕ್ಕಷ್ಟೇ ನಿಲ್ಲಲಿಲ್ಲ. ನಾಯಕ ಜನಾಂಗಧ ಮುಖಂಡರೂ ಸೇರಿಕೊಂಡು ಹಳ್ಳಿಯ ದಲಿತರೆಲ್ಲರ ಮೇಲೆ ಬಹಿಷ್ಕಾರ ಹಾಕಿದರು. ತಮ್ಮ ಹೊಲಗದ್ದೆಗಳಿಗೆ ದಲಿತರನ್ನು ಕೂಲಿಗಾಗಿ ಕರೆಯಬಾರದೆಂದು ಊರಿನ ಉಳಿದೆಲ್ಲ ಜಾತಿಗಳ ಜನರಿಗೆ ಕಟ್ಟಪ್ಪಣೆ ಮಾಡಿದರು. ತಮ್ಮ ಕಟ್ಟಪ್ಪಣೆಯನ್ನು ಮೀರುವ ಧೈರ್ಯ ಊರಿನಲ್ಲಿ ಯಾರಿಗೂ ಇಲ್ಲ ಎಂದುಕೊಂಡಿದ್ದರು. ಆದರೆ, ನಾಮಧಾರಿಗೌಡರ ಕುಟುಂಬಗಳು ಊರಿನಲ್ಲಿ ಶಾಂತಿ ಕಾಪಾಡುವ ದೃಷ್ಟಿಯಿಂದ ಅವರ ಬಹಿಷ್ಕಾರಕ್ಕೆ ಸೊಪ್ಪು ಹಾಕಲಿಲ್ಲ. ಇದು ಅಸಲಿಗೆ ನಾಯಕರ ಪ್ರತಿಷ್ಠೆಗೆ ಹೊಡೆದಂತಾಗಿತ್ತು; ಅವರಿಗೆ ಈಗ ದಲಿತರಿಗಿಂತಲೂ ದೊಡ್ಡ ಶತ್ರುಗಳಾಗಿ ನಾಮಧಾರಿ ಗೌಡರು ಕಾಣಿಸಿಕೊಳ್ಳಲಾರಂಭಿಸಿದರು. ಆದ್ದರಿಂದ ಗೌಡರ ವಿರುದ್ಧ ಕತ್ತಿ ಮಸೆಯಲು ಪ್ರಾರಂಭಿಸಿದರು!

ಈ ನಡುವೆ ಚುನಾವಣೆಯೂ ನಡೆದು ನಾಯಕ ಜನಾಂಗದ ಚಿಕ್ಕಣ್ಣ ಶಾಸಕನಾಗಿ ಆಯ್ಕೆಯಾದ ಮೇಲಂತೂ ನಾಯಕರ ಅಟ್ಟಹಾಸಗಳಿಗೆ ಪರವಾನಿಗೆ ಸಿಕ್ಕಂತಾಗಿಬಿಟ್ಟಿತು. ಅಲ್ಲಿಂದಾಚೆಗೆ ಊರಿನಲ್ಲಿ ನಾಯಕರ ದೌರ್ಜನ್ಯಗಳಿಗೆ ಕೊನೆಯಿಲ್ಲದಂತಾಯಿತು. ದಲಿತ ಮತ್ತು ನಾಮಧಾರಿ ಗೌಡರ ಹುಲ್ಲು ಮೆದೆಗಳಿಗೆ ಬೆಂಕಿ ಹಾಕುವುದು, ಕೊಲೆ ಬೆದರಿಕೆ ಹೊಡ್ಡುವುದು ಅವರ ದಿನಚರಿಯಾಗಿಹೋಯಿತು. ಇದರ ವಿರುದ್ಧ ಪೊಲೀಸರಿಗೆ ದೂರು ಕೊಡಲಾಯಿತಾದರೂ ಶಾಸಕನೇ ನಾಯಕರ ಬೆನ್ನಿಗಿದ್ದುದರಿಂದ ಅವೆಲ್ಲ ಕಸದ ಬುಟ್ಟಿ ಸೇರಿದವು. ತಮ್ಮ ವಿರುದ್ಧ ಕಂಪ್ಲೇಂಟ್ ಕೊಟ್ಟಿದ್ದನ್ನು ಮತ್ತೆ ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಂಡ ನಾಯಕರು ನಾಮಧಾರಿ ಗೌಡರ ವಿರುದ್ಧ ಅಟ್ರಾಸಿಟಿ ಕೇಸ್ ನಡೆಸುವುದಕ್ಕಾಗಿ ನಿರ್ಧರಿಸಿ ಒಂದು ನೆಪಕ್ಕಾಗಿ ಕಾಯುತ್ತಿದ್ದರು.

ನೆಪ ಸಿಕ್ಕೇಬಿಟ್ಟಿತು!!


ಮೊನ್ನೆ ಮೇ 28ರಂದು ಸುರೇಶ್ ಬಾಬು ಎಂಬ ನಾಮಧಾರಿ ಗೌಡರ ಹುಡುಗ ತನ್ನ ಮನೆಯ ಹಿಂದಿನ ಮನೆಯಲ್ಲಿದ್ದ, ಬಹಳ ವರ್ಷಗಳಿಂದ ಪರಿಚಯವಿದ್ದ ನಾಯಕ ಜನಾಂಗದ ಜ್ಯೋತಿ ಎಂಬ ಹುಡುಗಿಯ ಜೊತೆ ಮಾತನಾಡುತ್ತಿರುವಾಗ 'ಅವನು ನಮ್ಮ ಹುಡುಗಿಯನ್ನು ರೇಪ್ ಮಾಡಲು ಬಂದಿದ್ದಾನೆ' ಎಂದು ಆರೋಪಿಸಿ ಅವನನ್ನು ಕೋಟೆ ಪೊಲೀಸ್ ಠಾಣೆಗೆ ಎಳೆದುಕೊಂಡು ಹೋಗಿ ಕಂಪ್ಲೇಂಟ್ ಕೊಟ್ಟರು. ತಮ್ಮ ಊರಿನ ವಿಷಯ ಪೊಲೀಸ್ ಠಾಣೆ ಮೆಟ್ಟಿಲೇರಿದ್ದನ್ನು ಕಂಡ ತಾ.ಪಂ. ಸದಸ್ಯ ಗೌಡ ಸಮುದಾಯದ ಪದ್ಮರಾಜ್ ಹುಡುಗಿ ಹಾಗೂ ಹುಡುಗಿಯ ತಂದೆಯನ್ನು ಠಾಣೆಗೆ ಕರೆದುಕೊಂಡು ದೌಡಾಯಿಸಿದರು. ಪೊಲೀಸರು ಎಲ್ಲರ ಎದುರೇ ಹುಡುಗಿಯನ್ನು ವಿಚಾರಿಸಿದರು ಆಕೆ ಸ್ಪಷ್ಟವಾಗಿ ಖಡಾಖಂಡಿತವಾಗಿ 'ಆತ ನನಗೇನೂ ಮಾಡಿಲ್ಲ, ಸುಮ್ಮನೇ ಮಾತನಾಡುತ್ತಿದ್ದೆವಷ್ಟೇ' ಎಂದಿದ್ದಾಳೆ. ಎಲ್ಲರ ಎದುರಿಗೇನೇ ಹುಡುಗಿ ಈ ರೀತಿ ಹೇಳಿದ್ದರಿಂದ ಪೊಲೀಸರು ಬೇರೆ ದಾರಿ ಕಾಣದೆ ಎಲ್ಲರನ್ನೂ ಊರಿಗೆ ವಾಪಾಸ್ಸು ಕಳಿಸಿದ್ದಾರೆ.

ನಂತರ ಊರಿನಲ್ಲಿ ಸಭೆ ಸೇರಿದ ನಾಯಕ ಜನಾಂಗದವರು 'ನಮ್ಮ ಹುಡುಗಿಯ ಮರ್ಯಾದೆ ಹಾಳಾಗಿದೆ. ಅವಳನ್ನು ಯಾರು ಮದುವೆಯಾಗ್ತಾರೆ. ಸುರೇಶ್‌ಬಾಬು ಜೊತೆಗೇನೇ ಅವಳ ಮದುವೆ ಮಾಡಿಸಬೇಕು' ಎಂದು ನಿರ್ಧರಿಸಿದ್ದಾರೆ. ಪೊಲೀಸ್ ಠಾಣೆಯ ಮುಂದೆಯೂ ಪ್ರತಿಭಟನೆ ನಡೆಸಿ 'ನಮ್ಮ ಹುಡುಗಿಗೆ ಅನ್ಯಾಯವಾಗಿದೆ, ಅವರಿಬ್ಬರನ್ನೂ ಮದುವೆ ಮಾಡಿಸಿ' ಎಂದು ಪಟ್ಟು ಹಿಡಿದಿದ್ದಾರೆ. ಆಗ ಸ್ಥಳಕ್ಕೆ ಆಗಮಿಸಿದ ಮಾಜಿ ಶಾಸಕ ನಾಗರಾಜ್ ಹಾಗೂ ಕೆಲವು ಮುಖಂಡರು ಈ ಪ್ರಕರಣವನ್ನು ಕೋರ್ಟಿಗೆ ದಾಖಲಿಸೋಣ. ಕೋರ್ಟ್ ಇದನ್ನ ಇತ್ಯರ್ಥ ಮಾಡಲಿ ಎಂದು ಮತ್ತೆ ಸುರೇಶ್‌ಬಾಬುವನ್ನು ಕರೆ ತಂದು ಜೈಲಿಗಟ್ಟಿದರು.






ಇಷ್ಟಕ್ಕೆ ಸುಮ್ಮನಾಗದ ನಾಯಕ ಜನಾಂಗದವರು ಗೌಡ ಜನಾಂಗದವರ ಮೇಲೆ ಇಲ್ಲಸಲ್ಲದ ಆರೋಪ ಮಾಡಿ ಮತ್ತೆ ಸುಮಾರು ಹತ್ತು-ಹದಿನೈದು ಮಂದಿಯ ವಿರುದ್ಧ ಅರೆಸ್ಟ್ ವಾರೆಂಟ್ ಜಾರಿಯಾಗುವಂತೆ ನೋಡಿಕೊಂಡರು. ಅದೂ ಅಲ್ಲದೇ, 'ನೀವೇ ಆ ಹುಡುಗನನ್ನು ಕೋರ್ಟಿನಿಂದ ಬಿಡಿಸಿ ನಮ್ಮ ಹುಡುಗಿಯೊಂದಿಗೆ ಮದುವೆ ಮಾಡಿಸಿ' ಎಂದು ಗೌಡಜನಾಂಗದವರನ್ನು ಒತ್ತಾಯಿಸಲಾರಂಭಿಸಿದರು. ಅದಕ್ಕೆ ಗೌಡರು 'ಈಗ ವಿಷಯ ಕೋರ್ಟಿನಲ್ಲಿದೆ. ಕೋರ್ಟಿನಲ್ಲೇ ಇತ್ಯರ್ಥವಾಗಲಿ ಬಿಡಿ' ಎಂದಿದರು.


ಶಾಸಕ ಚಿಕ್ಕಣ್ಣ

ತಮ್ಮ ಆಧಿಪತ್ಯಕ್ಕೆ ತಡೆಯೊಡ್ಡುತ್ತಿರುವ ಗೌಡ ಜನಾಂಗದವರ ವಿರುದ್ಧ ಆಗಲೇ ನಾಯಕರು ಕೊತ ಕೊತ ಕುದಿಯಲಾರಂಭಿಸಿದ್ದರು; ಗೌಡರ ಜನಾಂಗದ ಹುಲ್ಲು ಮೆದೆಗಳಿಗೆ ಬೆಂಕಿ ಹಾಕಿ ಸುಟ್ಟರು; ಪದ್ಮರಾಜ್‌ಗೆ ಸೇರಿದ ಎರಡುಎಕರೆ ಬೆಳೆಯನ್ನು ಧ್ವಂಸ ಮಾಡಿದರು. ಆಗಲೇ ಈ ಸಂಬಂಧ ಪೊಲೀಸರಿಗೆ ದೂರು ಕೊಡಲಾಯಿತಾದರೂ ಅದು ಕಸದ ಬುಟ್ಟಿ ಸೇರಿತು. ಬಹುಶಃ ಅಂದೇ ಕೋಟೆ ಎಸ್‌ಐ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಮುನ್ನೆಚ್ಚರಿಕೆ ವಹಿಸಿದ್ದರೆ ಈವತ್ತು ಬೆಳತ್ತೂರು ಗ್ರಾಮ ಮಸಣವಾಗುವುದನ್ನು ತಪ್ಪಿಸಬಹುದಿತ್ತು.

ಹೀಗೆ ನಾಯಕರು ದಿನವೂ ಪದ್ಮರಾಜ್ ಹಾಗೂ ಊರಿನ ಮತ್ತೊಬ್ಬ ಮುಖಂಡ ನಾಗರಾಜ್‌ರ ಮೇಲೆ ಒತ್ತಡ ಹೇರುತ್ತಾ ಅವರ ಮನೆಯ ಮುಂದೆ ಗಲಾಟೆ ಮಾಡಲು ಶುರು ಮಾಡಿದರು. ದಿನವೂ ಊರಿನಲ್ಲಿ ಭಯಭೀತ ವಾತಾವರಣ ಸೃಷ್ಟಿಸುತ್ತಿದ್ದರು. ಒಂದು ಹಂತದಲ್ಲಿ ಪದ್ಮರಾಜ್‌ರ ಮನೆಯ ಮುಂದೆ ಕುಳಿತು 'ಹುಡುಗನನ್ನು ನೀವೇ ಬಿಡಿಸಿಕೊಂಡು ಬಂದು ಮದುವೆ ಮಾಡಬೇಕು. ಇಲ್ಲದಿದ್ದರೆ ಎಲ್ಲಾ ಗೌಡರ ಧ್ವಂಸ ಮಾಡುತ್ತೇವೆ' ಎಂದು ಆವಾಜ್ ಹಾಕಿದ್ದರು. ಆಗಲೂ ಕೂಡ ಎಸ್ಸೈ ಅಶೋಕ್ ಬಂದು ಒಂದಿಷ್ಟು ಸಮಾಧಾನ ಮಾಡಿದನೇ ಹೊರತು




ಎಸ್‌ಐ ಎದುರೇ ಅಂಗಡಿ ಲೂಟಿ ಮಾಡಿರುವುದು

ಊರಿನಲ್ಲಿ ಅಶಾಂತಿ ಉಂಟು ಮಾಡುತ್ತಿದ್ದವರನ್ನು ಬಂಧಿಸುವ ಗಡುಸುತನ ತೋರಲಿಲ್ಲ. ಏಕೆಂದರೆ, ಅವನಿಗೂ ನಾಯಕರನ್ನು ರಕ್ಷಿಸುವುದಕ್ಕೆ ಶಾಸಕ ಚಿಕ್ಕಣ್ಣನ ಆದೇಶವಿತ್ತು!

ಜಾಗೃತಗೊಂಡ ಚಿಕ್ಕಣ್ಣನ ಜಾತಿಪ್ರೇಮ!

ಇದಕ್ಕೊಂದು ಪರಿಹಾರ ಕಂಡುಕೊಳ್ಳಬೇಕೆಂದು ಕೆಲವು ಕಾಂಗ್ರೆಸ್ ಮುಖಂಡರು ಶಾಸಕರಿಗೆ 'ನೀವಾದರೂ ನಿಮ್ಮ ಜನಾಂಗಕ್ಕೆ ಸ್ವಲ್ಪ ಬುದ್ಧಿ ಹೇಳಿ ನಿಮ್ಮ ಜನರನ್ನು ಗಲಾಟೆ ಮಾಡದಂತೆ ನಿಯಂತ್ರಿಸಿ' ಎಂದು ಕೇಳಿಕೊಂಡರು. ಆದರೆ, ಅಷ್ಟು ಹೊತ್ತಿಗಾಗಲೇ ಈ ಹೇತ್ಲಾಂಡಿ ಶಾಸಕ ತನ್ನ ಸಮುದಾಯಕ್ಕೆ ಕುಮ್ಮಕ್ಕು ನೀಡಿದ್ದ ಒಂದೆಡೆ ನಾಮಧಾರಿ ಗೌಡರನ್ನು ಸಮಾಧಾನ ಪಡಿಸುತ್ತಲೇ ಇನ್ನೊಂದೆಡೆ ಅವರ ವಿರುದ್ಧ ಧಾಳಿ ಮಾಡುವುದಕ್ಕೆ ನಾಯಕರಿಗೆ ಗ್ರೀನ್ ಸಿಗ್ನಲ್ ಕೊಟ್ಟುಬಿಟ್ಟಿದ್ದ. ಹೇಗಾದರೂ ಸರಿ ತಮ್ಮವರನ್ನು ರಕ್ಷಿಸಬೇಕು ಎಂದು ತನ್ನ ಮಗ ಪ್ರಕಾಶ್‌ನನ್ನ ಅವರ ನೆರವಿಗೆ ಬಿಟ್ಟ.

ಒಂದೆಡೆ ಖುದ್ದು ಶಾಸಕ ಇನ್ನೊಂದೆಡೆ ಪೊಲೀಸರು ಎಲ್ಲರೂ ನಾಯಕರ ಬೆಂಬಲಕ್ಕೆ ನಿಂತರೆ ಏನಾಗುತ್ತೆ? ಏನಾಗಬಾರದಿತ್ತೋ ಅದೇ ಆಗುತ್ತೆ. ಬೆಳತ್ತೂರು ಗ್ರಾಮದಲ್ಲಿ ಆದದ್ದೂ ಅದೆ.

ಈ ಶಾಸಕನಿಗೆ ನಿಜಕ್ಕೂ ಕ್ಷೇತ್ರದ ಜನರ ಬಗ್ಗೆ ಕಾಳಜಿ ಇದ್ದಿದ್ದರೆ ತನ್ನ ಜನರಿಗೆ ಬುದ್ಧಿ ಹೇಳಿ ಈ ಪ್ರಕರಣ ಕೋರ್ಟಿನಲ್ಲಿರುವುದರಿಂದ ಅದರ ತೀರ್ಮಾನಕ್ಕಾಗಿ ಕಾಯೋಣ ಅಲ್ಲಿಯವರೆಗೆ ಊರಿನಲ್ಲಿ ಶಾಂತಿ ಕಾಪಾಡೋಣ ಎಂದು ಈ ಪ್ರಕರಣಕ್ಕೆ ಇತಿಶ್ರೀ ಹಾಡಬಹುದಿತ್ತು. ಆದರೆ ಅದು ಈ ಶಾಸಕನಿಗೆ ಬೇಕಿರಲಿಲ್ಲ. ಆತನಿಗೆ ತನ್ನ ಜಾತಿ ಪ್ರೇಮವನ್ನು ಮೆರೆಯಬೇಕಾಗಿತ್ತು. ಅದಕ್ಕಾಗಿ ಆತ 11ನೇ ತಾರೀಖಿನವರೆಗೆ ನೀವೆಲ್ಲರೂ ಕಾಯಿರಿ ನಂತರ ಒಂದು ಒಪ್ಪಂದಕ್ಕೆ ಬರೋಣ ಎಂದು ಅಡ್ಡ ಗೋಡೆಯ ಮೇಲೆ ದೀಪವಿಟ್ಟಂತೆ ಹೇಳಿದ. ಮಾತ್ರವಲ್ಲ ಜೈಲಿನಲ್ಲಿರುವ ಹುಡುಗನನ್ನು ಭೇಟಿ ಮಾಡಿ ಅವನ ತೀರ್ಮಾನ ಕೇಳೋಣ ಎಂದು ಹುಡುಗನಿದ್ದ ಜೈಲಿಗೆ ಕಡೆಗೆ ನಡೆದೇಬಿಟ್ಟ.

ತನ್ನನ್ನು ಅನ್ಯಾಯವಾಗಿ ಜೈಲಿಗೆ ದೂಡಿದ್ದೂ ಅಲ್ಲದೆ, ತಾವು ಹೇಳಿದ ಹುಡುಗಿಯನ್ನು ಮದುವೆಯಾಗು ಎಂಬ ಪ್ರಸ್ತಾಪವನ್ನು ಹೊತ್ತು ತನ್ನನ್ನು ಭೇಟಿಯಾದ ಶಾಸಕನಿಗೆ ಹಿಗ್ಗಾಮುಗ್ಗಾ ಜಾಡಿಸಿದ್ದಾನೆ ಸುರೇಶ್‌ಬಾಬು. ನನ್ನದೇನು ತಪ್ಪಿಲ್ಲ ನಿಮ್ಮ ಜನಾಂಗದವರೇ ಈ ರೀತಿ ಮಾಡಿರುವುದು. ಅವರಿಗೆ ಬುದ್ಧಿ ಹೇಳಿ. ನನಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಖಡಾಖಂಡಿತವಾಗಿ ತಿಳಿಸಿದ್ದಾನೆ. ಹುಡುಗನಿಂದ ಛೀಮಾರಿ ಹಾಕಿಸಿಕೊಂಡ ಶಾಸಕನಿಗೆ ನಾಮಧಾರಿ ಗೌಡರ ವಿರುದ್ಧ ಸಿಟ್ಟು ನೆತ್ತಿಗೇರಿದೆ. ತನ್ನವರಿಗೆ ಊರಿನಲ್ಲಿ ರಾಬರಿ ಮಾಡುವಂತೆ ರಣವೀಳ್ಯ ನೀಡಿದ್ದಾನೆ. ಇದಕ್ಕಾಗಿ ಕೋಟೆ ಎಸ್ಸೈಗೆ ಕಿವಿ ಚುಚ್ಚಿ ತಮ್ಮವರ ವಿರುದ್ಧ ಯಾವ ಪ್ರಕರಣವನ್ನೂ ದಾಖಲು ಮಾಡಬಾರದು ಎನ್ನುವ ಅಲಿಖಿತ ಸಂದೇಶ ರವಾನಿಸಿದ್ದಾನೆ. ಶಾಸಕ ಚಿಕ್ಕಣ್ಣನಿಂದ ಗ್ರೀನ್ ಸಿಗ್ನಲ್ ದೊರೆತಿದ್ದೇ ತಡ ಬೆಳತ್ತೂರು ಗ್ರಾಮದ ನಾಮಧಾರಿ ಗೌಡರ ಓಣಿಗಳು ಒಂದೇ ಗಂಟೆಯಲ್ಲಿ ಮಸಣವಾಗಿಹೋದವು.

ಚಿಕ್ಕಣ್ಣ ಶಾಸಕನಾಗುವುದಕ್ಕೆ ನಾಮಧಾರಿ ಗೌಡರ ಮತಗಳೂ ನಿರ್ಣಾಯಕವಾಗಿದ್ದವು. ಮತ ಹಾಕಿದ ತಪ್ಪಿಗೆ ತಮ್ಮ ಆಸ್ತಿ-ಪಾಸ್ತಿ, ಮನೆ-ಮನಸ್ಸುಗಳನ್ನು ಒಡೆದುಕೊಂಡು ರೋದಿಸುತ್ತಿದೆ ಕೆ.ಬೆಳತೂರಿನ ನಾಮಧಾರಿ ಗೌಡ ಸಮುದಾಯ.

ಈಗ ಸ್ಮಶಾನ ಮೌನವಾಗಿರುವ ಬೆಳತ್ತೂರನ್ನು ಪೊಲೀಸರು ಕಾಯುತ್ತಿದ್ದಾರೆ. ಜಿಲ್ಲಾ ಎಂಪಿ ವಿಜಯಶಂಕರ್, ಜಿ.ಟಿ.ದೇವೇಗೌಡ, ಚಿಕ್ಕಮಾದು, ಮಾಜಿ ಶಾಸಕ ಎಂ.ಶಿವಣ್ಣ – ಹೀಗೆ ಹತ್ತು ಹಲವು ಮುಖಂಡರು ಭೇಟಿ ಮಾಡಿ ಘಟನೆಯನ್ನು ಖಂಡಿಸಿದ್ದಾರೆ. ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುವುದಾಗಿ ಭರವಸೆ ನೀಡಿದ್ದಾರೆ. ಶಾಸಕ ಚಿಕ್ಕಣ್ಣ ಕೂಡ ಬಂದು ಮೊಸಳೆ ಕಣ್ಣೀರು ಸುರಿಸಿ ಹೋಗಿದ್ದಾನೆ. ಈಗ ಚಿಕ್ಕಣ್ಣನ ಮಗ ಪ್ರಕಾಶನೇ ಖುದ್ದಾಗಿ ಈ ದಾಳಿಕೋರರನ್ನು ರಕ್ಷಿಸುತ್ತಿದ್ದಾರೆ.

ಈ ರೀತಿಯ ದೌರ್ಜನ್ಯಕ್ಕೆ ನಾಮಧಾರಿ ಗೌಡರು ನಾಯಕರಿಂದ ಒಳಗಾಗುತ್ತಿರುವುದು ಇದು ಮೊದಲೇನಲ್ಲ, ಈ ಹಿಂದೆ 1981ರಲ್ಲಿ ಹಾಗೂ 92ರಲ್ಲಿ ಇದೇ ರೀತಿಯ ದೊಂಬಿ ಗಲಾಟೆ ಎಬ್ಬಿಸಿ ತಮ್ಮ ಪ್ರಾಬಲ್ಯವನ್ನು ಅವರು ಮೆರೆದಿದ್ದರು. ಈಗ ಮತ್ತದೇ ಪುನರಾವರ್ತನೆಗೊಂಡಿದೆ. ಆದರೆ, ಈ ಬಾರಿಯ ವಿಶೇಷ ಎಂದರೆ ಕ್ಷೇತ್ರದ ಜನಪ್ರತಿನಿಧಿಯೇ ದಾಳಿಗೆ ನೇತೃತ್ವವಹಿಸಿರುವುದು!

■ ನಾಗೇಶ್

ಹಡಬಿ ದುಡ್ಡಿನ ಆಸೆಗಾಗಿ ಮಧುಸೂದನ ಎಂಬ ಅಮಾಯಕ ಹುಡುಗನನ್ನು ಕೊಂದು, ಹೆಣದ ಗುರುತು ಸಿಗದಂತೆ ಮಾಡುವುದಕ್ಕಾಗಿ ತಲೆಯನ್ನು ಕತ್ತರಿಸಿ ಬಿಸಾಡಿದ ಈ ರಾಕ್ಷಸೀ ಹಂತಕರಿಗೆ ಶಿವಮೊಗ್ಗದ ಮೂರನೇ ಶೀಘ್ರ ವಿಲೇವಾರಿ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿದೆ. ಅದೂ ಘಟನೆ ನಡೆದ ಮೂರು ವರ್ಷಗಳೊಳಗೆ ತೀರ್ಪು ಹೊರಬಿದ್ದದ್ದು ವಿಶೇಷ. ದುಡ್ಡಿಗಾಗಿ ಇಂಥ ಅಮಾನವೀಯ ಕೃತ್ಯ ಎಸಗುವವರಿಗೆ ಇದೊಂದು ಎಚ್ಚರಿಕೆಯ ಗಂಟೆಯಾಗಿರುವುದಂತೂ ಸತ್ಯ.

ಶಿವಮೊಗ್ಗ: ತಲೆ ಕತ್ತರಿಸಿ ನೇಣಿಗೆ ಕೊರಳೊಡ್ಡಿದವರು!



ಮಾಡಿದ ತಪ್ಪಿಗೆ ತಲೆದಂಡ ತೆರಬೇಕಾದ ಪರಿಸ್ಥಿತಿಯನ್ನು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆನಂದಪುರದ ಜಯಣ್ಣ, ರಫೀಕ್ ಮತ್ತು ಮಧುರನಾಥ ಎದುರಿಸುತ್ತಿದ್ದಾರೆ. ಹಡಬಿ ದುಡ್ಡಿನ ಆಶೆಗಾಗಿ ಮಧುಸೂದನ ಎಂಬ ಅಮಾಯಕ ಹುಡುಗನನ್ನು ಕೊಂದು, ಹೆಣದ ಗುರುತು ಸಿಗದಂತೆ ಮಾಡುವುದಕ್ಕಾಗಿ ತಲೆಯನ್ನು ಕತ್ತರಿಸಿ ಬಿಸಾಡಿದ ಈ ರಾಕ್ಷಸೀ ಹಂತಕರಿಗೆ ಶಿವಮೊಗ್ಗದ ಮೂರನೇ ಶೀಘ್ರ ವಿಲೇವಾರಿ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿದೆ. ಅದೂ ಘಟನೆ ನಡೆದ ಮೂರು ವರ್ಷಗಳೊಳಗೆ ತೀರ್ಪು ಹೊರಬಿದ್ದದ್ದು ವಿಶೇಷ. ದುಡ್ಡಿಗಾಗಿ ಇಂಥ ಅಮಾನವೀಯ ಕೃತ್ಯ ಎಸಗುವವರಿಗೆ ಇದೊಂದು ಎಚ್ಚರಿಕೆಯ ಗಂಟೆಯಾಗಿರುವುದಂತೂ ಸತ್ಯ.

ಪ್ರಕರಣದ ಹಿನ್ನೆಲೆ!

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆನಂದಪುರದಲ್ಲಿ ಪ್ರಹ್ಲಾದ್ ಎಂಬುವವರು ಶುಂಠಿ ವ್ಯಾಪಾರ ಮಾಡಿಕೊಂಡಿದ್ದರು. ಶುಂಠಿ ಬೆಳೆಯುವ ಪ್ರದೇಶಗಳಾದ ಸಾಗರ, ಹೊಸನಗರ ತಾಲ್ಲೂಕುಗಳ ಹಳ್ಳಿಗಳಿಂದ ಶುಂಠಿಯನ್ನು ಖರೀದಿಸಿ ಹೋಲ್ ಸೇಲ್ ಆಗಿ ಮಾರಾಟ ಮಾಡುವ ಈ ಬಿಸಿನೆಸ್‌ನಲ್ಲಿ ಅವರಿಗೆ ಕೈತುಂಬ ಲಾಭವೂ ಇತ್ತು. ಇವರಿಂದ ಶುಂಠಿ ಖರೀದಿಸಿದ ಗ್ರಾಹಕರಿಂದ ಹಣ ವಸೂಲಿ ಮಾಡುವ ಕೆಲಸವನ್ನು ತಮ್ಮ ಅಣ್ಣನ ಮಗನಾದ ಮಧುಸೂದನ್ ಎಂಬ ಹುಡುಗನಿಗೆ ವಹಿಸಿದ್ದರು. 2008ರ ಆಗಸ್ಟ್ ಆರಂದು ಹೀಗೆ ನಾಲ್ಕು ಲಕ್ಷ ರೂ.ಗಳನ್ನು ವಸೂಲಿ ಮಾಡಲೆಂದು ಸಾಗರಕ್ಕೆ ತೆರಳಿದ್ದ ಮಧುಸೂದನ್ ಮರಳಿ ಬರಲೇ ಇಲ್ಲ.

ಬೆಳಗ್ಗೆ ಹೋದ ಹುಡುಗ ಸಂಜೆಯಾದರೂ ಬರದಿರುವುದನ್ನು ಕಂಡು ಖುದ್ದು ಪ್ರಹ್ಲಾದ್ ಅವರೇ ಸಾಗರಕ್ಕೆ ತೆರಳಿ ತಮ್ಮ ಗ್ರಾಹಕರನ್ನು ವಿಚಾರಿಸಿದರು. ಮಧುಸೂದನ್ ಹಣ ಪಡೆದುಕೊಂಡು ಮರಳಿಹೋಗಿ ಅದೆಷ್ಟೋ ಸಮಯವಾಯಿತು ಎಂದು ಎಲ್ಲಾ ಗ್ರಾಹಕರೂ ಹೇಳಿದರು. ಪ್ರಹ್ಲಾದ್ ಅವರು ಮಧುಸೂದನ್ ಅವರ ಮೊಬೈಲ್‌ಗೆ ಕರೆ ಮಾಡಿದಾಗ 'ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ' ಎಂಬ ಸಂದೇಶ ಬರುತ್ತಿತ್ತು. ಪಾಪ, ಆತನ ವ್ಯಾಪ್ತಿ ಪ್ರದೇಶವಾದರೂ ಏನು? ಅಷ್ಟು ಹೊತ್ತಿಗಾಗಲೇ ಆತನನ್ನು ಹಂತಕರು ಈ ಲೋಕದ ವ್ಯಾಪ್ತಿಯಿಂದಲೇ ಹೊರಗಟ್ಟಿಬಿಟ್ಟಿದ್ದರು.

ಮಧುಸೂದನ್ ನಾಲ್ಕು ಲಕ್ಷ ವಸೂಲಿ ಮಾಡಿಕೊಂಡು ಪರಾರಿಯಾಗಿದ್ದಾನೆ ಎಂದು ಜನ ಮಾತನಾಡಲಾರಂಭಿಸಿದ್ದರು. ಆದರೆ ಆತನನ್ನು ಅತೀ ಹತ್ತಿರದಿಂದ ನೋಡಿದ್ದ ಪ್ರಹ್ಲಾದ್‌ಗೆ ಮಧುಸೂದನ್ ಅಂತ ಕೆಟ್ಟ ನಡವಳಿಕೆಯ ಹುಡುಗನಲ್ಲ ಎಂಬ ವಿಶ್ವಾಸವಿತ್ತು. ಕೂಡಲೇ ಅವರು ಪೊಲೀಸರಿಗೆ ದೂರು ಕೊಟ್ಟರು. ಸರ್ಕಲ್ ಇನ್ಸ್‌ಪೆಕ್ಟರ್ ಭಾಸ್ಕರ್ ರೈ ಒಂದು ಪೊಲೀಸ್ ತಂಡ ಕಟ್ಟಿಕೊಂಡು ಮಧುಸೂದನ್‌ನನ್ನು ಹುಡುಕಲಾರಂಭಿಸಿದರು. ಆನಂದಪುರದಲ್ಲಿ ಒಂದಿಷ್ಟು ಕಾರ್ಯಾಚರಣೆ ಮಾಡಿದ ಈ ತಂಡದ ಸಂಶಯ ಮಧುಸೂದನ್‌ನ ಸ್ನೇಹಿತರಾದ ಮಧುರನಾಥ, ಜಯಣ್ಣ ಮತ್ತು ರಫೀಕ್ ಎಂಬುವವರ ಮೇಲೆ ಬಿತ್ತು. ಕೂಡಲೇ ಬಟ್ಟೆಮಲ್ಲಪ್ಪ ಗ್ರಾಮದ ವಾಸಿಯಾದ ಜಯಣ್ಣನನ್ನು ವಶಕ್ಕೆ ತೆಗೆದುಕೊಂಡು ಬೆಂಡೆತ್ತಿದರು. ತಕ್ಷಣವೇ ಆತ ನಡೆದದ್ದೆಲ್ಲವನ್ನೂ ಹೇಳಿಬಿಟ್ಟನಲ್ಲದೇ ಕೃತ್ಯದಲ್ಲಿ ಭಾಗಿಗಳಾಗಿದ್ದ ರಫೀಕ್ ಬೆಂಗಳೂರಿನಲ್ಲೂ ಹಾಗೂ ಮಧುರನಾಥ ದಕ್ಷಿಣ ಕನ್ನಡದಲ್ಲೂ ಅಡಗಿರುವುದು ಗೊತ್ತಾಯಿತು. ಕೂಡಲೇ ಅವರಿಬ್ಬರನ್ನು ಬಂಧಿಸುವುದಕ್ಕೆ ಬಲೆ ಹೆಣೆದ ಭಾಸ್ಕರ್ ರೈ ಕೆಲವೇ ಸಮಯದಲ್ಲಿ ಬಂಧಿಸಿ ಠಾಣೆಗೆ ಎಳೆತಂದರು. ಆಗ ನಡೆದದ್ದೆಲ್ಲವೂ ಬಯಲಿಗೆ ಬಿತ್ತು.

ಕತ್ತನ್ನೇ ಕತ್ತರಿಸಿದ್ದರು!

ಜಯಣ್ಣ, ಮಧುರನಾಥ ಮತ್ತು ರಫೀಕ್ ಈ ಮೂವರಿಗೂ ಮಧುಸೂದನ್ ತನ್ನ ದೊಡ್ಡಪ್ಪನ ಶುಂಠಿ ಬಿಸಿನೆಸ್ ಹಣವನ್ನು ವಸೂಲಿ ಮಾಡಿಕೊಂಡು ಆಗಾಗ ಹೋಗುತ್ತಿರುತ್ತಾನೆ ಎಂಬ ವಿಚಾರ ಗೊತ್ತಿತ್ತು. ಮಧುಸೂದನ್‌ನ ಚಲನವಲನಗಳನ್ನು ಅವರು ಬಹಳ ಚೆನ್ನಾಗಿಯೇ ಗಮನಿಸಿದ್ದರು. ಅವತ್ತು ೨೦೦೮ರ ಆಗಸ್ಟ್ ಆರಂದು ಆತ ಸಾಗರಕ್ಕೆ ಹಣ ವಸೂಲಿ ಮಾಡಲು ಹೋಗಿದ್ದೂ ಗೊತ್ತಾದದ್ದೆ ಇವರೂ ಜಯಣ್ಣನ 'ಕಡಲ ಮುತ್ತು' ಹೆಸರಿನ ಮಾರುತಿ ಒಮಿನಿ ಕಾರಿನಲ್ಲಿ ಸಾಗರಕ್ಕೆ ತೆರಳಿದ್ದಾರೆ. ಮಧುಸೂದನ್ ಹಣ ಪಡೆದುಕೊಂಡು ಆನಂದಪುರದ ಕಡೆ ಹೊರಟ ತಕ್ಷಣ ಕಾರಿನಲ್ಲಿ ಆತನನ್ನು ಹಿಂಬಾಲಿಸಿ ಬಂದು 'ನಾವೂ ಆನಂದಪುರಕ್ಕೆ ಹೊರಟಿದ್ದೇವೆ,



ಬಾ ಕಾರು ಹತ್ತು' ಎಂದು ಮಧುಸೂದನನನ್ನು ಹತ್ತಿಸಿಕೊಂಡಿದ್ದಾರೆ. ನಂತರ ಕಾರು ನಿರ್ಜನ ಪ್ರದೇಶಕ್ಕೆ ಬರುತ್ತಿದ್ದಂತೆ ಮಧುಸೂದನನ ಕುತ್ತಿಗೆಗೆ ವೈರ್ ಬಿಗಿದು ಕೊಂದುಹಾಕಿದ್ದಾರೆ. ಶವ ಸಿಕ್ಕರೆ ತನಿಖೆ ಅದೂ ಇದೂ ಎಂದು ಮುಂದೆ ತಾವು ಸಿಕ್ಕಿಹಾಕಿಕೊಳ್ಳಬಹುದೆಂದು ಎಣಿಸಿ ಶವ ಸಿಗದಂತೆ ಅದನ್ನು ಹೂತು ಹಾಕಲು ಯೋಚಿಸಿದ್ದಾರೆ. ಸೀದಾ ಶಿವಮೊಗ್ಗ-ಸಾಗರದ ರಸ್ತೆಗೆ ಹೊಂದಿಕೊಂಡಂತೆ ಇರುವ ನಂದಿತಲಿ ಪ್ಲಾಂಟೇಶನ್ ಹತ್ತಿರ ಬಂದು ಹೆಣ ಹೂಳಲು ಗುಂಡಿ ತೋಡಿದ್ದಾರೆ. ಮುಂದೊಂದು ದಿನ ಈ ಹೂತ ಶವ ಸಿಕ್ಕರೂ ಅದು ಮಧುಸೂದನ್ ಶವ ಎಂಬುದು ಗೊತ್ತಾಗಬಾರದೆಂದು ಯೋಚಿಸಿ ತಲೆಯನ್ನು ಕತ್ತರಿಸಿ ಕೇವಲ ದೇಹವನ್ನು ಮಾತ್ರ ಹೂತು ಹಾಕಿ, ತಲೆಯನ್ನು ಅಲ್ಲಿಂದ ಒಂದೂವರೆ ಕಿ.ಮೀ. ದೂರದಲ್ಲಿರುವ ನಂದಿಹೊಳೆಯಲ್ಲಿ ಬಿಸಾಡಿದ್ದಾರೆ. ನಂತರ ನಾಲ್ಕು ಲಕ್ಷ ದುಡ್ಡನ್ನು ಮೂವರೂ ಸಮನಾಗಿ ಹಂಚಿಕೊಂಡರು.

ಪ್ರಕರಣದ ಬೆನ್ನು ಹತ್ತಿದ ಭಾಸ್ಕರ್ ರೈ ಈ ಕೊಲೆಗಡುಕರನ್ನು ಹಿಡಿದದ್ದೂ ಅಲ್ಲದೇ ಅವರ ಮನೆಯಲ್ಲಿ ಜೋಪಾನವಾಗಿಟ್ಟಿದ್ದ ಮಧುಸೂದನ್‌ನ ಮೂರು ಮುಕ್ಕಾಲು ಲಕ್ಷ ಹಣವನ್ನೂ ವಶಪಡಿಸಿಕೊಂಡರು.

ಪೊಲೀಸರ ಕಾರ್ಯದಕ್ಷತೆ!

ಪೊಲೀಸ್ ತನಿಖೆ ಶೀಘ್ರಗೊಳ್ಳುತ್ತಿದ್ದಂತೆ ರುಂಡವಿಲ್ಲದ ದೇಹ ಮಧುಸೂದನ್‌ನದ್ದು ಅಲ್ಲವೇ ಅಲ್ಲ ಎಂದು ಕೊಲೆಗಡುಕರು ವಾದಿಸತೊಡಗಿದರು. ಆದರೆ ಹೈದ್ರಾಬಾದಿನ ರಾಸಾಯನಿಕ ಪ್ರಯೋಗಾಲಯದಿಂದ ಬಂದ ಡಿಎನ್‌ಎ ವರದಿ ಅದು ಮಧುಸೂದನ್‌ನದ್ದೆ ಶವ ಎಂದು ಖಚಿತಪಡಿಸಿತು.

ಹಾಗೆ ನೋಡಿದರೆ ಈ ಪ್ರಕರಣದಲ್ಲಿ ಯಾವುದೇ ಪ್ರತ್ಯಕ್ಷ ಸಾಕ್ಷಿಗಳಿಲ್ಲ. ಇಂಥ ಕೇಸುಗಳಲ್ಲಿ ಶಿಕ್ಷೆಯಾಗಬೇಕೆಂದರೆ ಭದ್ರ ಬುನಾದಿಯಂತೆ ಎಫ್‌ಐಆರ್ ಸಿದ್ಧಪಡಿಸಬೇಕಾಗುತ್ತದೆ; ಸಾಂದರ್ಭಿಕ ಸಾಕ್ಷಿ ಮತ್ತು ಅವುಗಳನ್ನು ಕರಾರುವಕ್ಕಾಗಿ ಎಳೆಎಳೆಯಾಗಿ ಜೋಡಿಸಿ ಅಪರಾಧವನ್ನು ಸಾಬೀತು ಪಡಿಸಬೇಕಾಗುತ್ತದೆ. ಮಧುಸೂದನ್ ಕೊಲೆ ಪ್ರಕರಣದಲ್ಲಿ ಪೊಲೀಸರ ಈ ಕಾರ್ಯದಕ್ಷತೆಯನ್ನು ಮೆರೆದಿದ್ದರಿಂದಲೇ ಕೃತ್ಯ ಎಸಗಿದ ಕೊಲೆಗಡುಕರು ತಪ್ಪಿಸಿಕೊಳ್ಳಲಾಗಲಿಲ್ಲ. ಕೊಲೆಗಡುಕರು ಸಿಕ್ಕಿಬಿದ್ದಾಗ ಒಂದಷ್ಟು ದಿನ ಜೈಲಿನಲ್ಲಿ ಕಳೆದು ಹೊರಬರಬಹುದೆಂದು ನಂಬಿದ್ದರು. ಏಕೆಂದರೆ ಶಿವಮೊಗ್ಗದಲ್ಲಿ ನಡೆದ ಇಂಥ ಅನೇಕ ಪ್ರಕರಣಗಳು ಅಲ್ಲಿನ ಪೊಲೀಸರ ಕಾರ್ಯದಕ್ಷತೆ ಮತ್ತು ಇಚ್ಛಾಶಕ್ತಿಯ ಕೊರತೆಯಿಂದ ಮುಚ್ಚಿ ಹೋಗಿದ್ದವು. ಆದರೆ ಈ ಪ್ರಕರಣದಲ್ಲಿ ಹಾಗಾಗಲಿಲ್ಲ. ಭಾಸ್ಕರ್ ರೈ ಅವರ ದಕ್ಷ ಕಾರ್ಯಾಚರಣೆಯಿಂದ ಹಾಗೂ ಸರ್ಕಾರದ ಪರ ವಾದ ಮಂಡಿಸಿದ ಹಿರಿಯ ಪಬ್ಲಿಕ್ ಪ್ರಾಸಿಕ್ಯೂಟರ್ ಎಸ್.ಕೆ. ಮೂರ್ತಿರಾವ್ ಮತ್ತು ಎಂ.ಆರ್. ರಾಥೋಡ್ ಅವರ ವಾದಮಂಡನೆಯ ಚಾಣಾಕ್ಷತನದಿಂದ ಕೊಲೆಗಡುಕರ ಅಪರಾಧ ನ್ಯಾಯಾಲಯದಲ್ಲಿ ಸಾಬೀತಾಯಿತು.

ನ್ಯಾಯಾಧೀಶ ಡಿ.ಆರ್.ರೇಣುಕೆ ಅವರು ಈ ಪ್ರಕರಣವನ್ನು ವಿರಳಾತಿವಿರಳ ಎಂದು ಪರಿಗಣಿಸಿ ತಣ್ಣಗೆ ಮರಣದಂಡನೆ ಶಿಕ್ಷೆಯ ತೀರ್ಪನ್ನು ಪ್ರಕಟಿಸಿದಾಗ ತಮಗೂ ಹೆಂಡತಿ ಮಕ್ಕಳಿವೆ, ಅವರನ್ನು ಸಾಕಿಸಲಹುವ ಜವಾಬ್ದಾರಿ ತಮ್ಮ ಮೇಲಿದೆ, ಹಾಗಾಗಿ ತೀರ್ಪನ್ನು ಪುನರ್‌ಪರಿಶೀಲಿಸಬೇಕೆಂದು ಕೊಲೆಗಡುಕರು ಮನವಿ ಮಾಡಿಕೊಂಡರು. ಆದರೆ ರೇಣುಕೆಯವರು 'ಕೊಲೆಯಾದ ಮಧುಸೂದನ್‌ಗೂ ಹೆಂಡತಿ ಮಕ್ಕಳಿದ್ದರಲ್ಲವೆ? ಅವರಿಗೂ ತಮ್ಮ ಹೆಂಡತಿ ಮಕ್ಕಳನ್ನು ಸಾಕಿಸಲಹುವ ಜವಾಬ್ದಾರಿಯಿತ್ತಲ್ಲವೆ?' ಎಂದು ಪ್ರಶ್ನಿಸಿ ತಮ್ಮ ತೀರ್ಪನ್ನು ಸಮರ್ಥಿಸಿಕೊಂಡರು.

ಇದರಿಂದ ಕುಪಿತಗೊಂಡ ರಫೀಕ್ ಎಂಬ ಕೊಲೆಗಡುಕ ಕೋರ್ಟಿನ ಕಟಕಟೆಗೆ ಒದ್ದು 'ನ್ಯಾಯಾಧೀಶರನ್ನು ನೋಡಿಕೊಳ್ಳುತ್ತೇನೆ' ಎಂದು ಅಬ್ಬರಿಸಿದ.

ಈ ಹಿಂದೆ ಶಿವಮೊಗ್ಗದಲ್ಲಿ ನಡೆದ ಎರಡು ಕೊಲೆಗಳ ಬಗ್ಗೆ ಅಲ್ಲಿನ ಪೊಲೀಸರ್ಯಾರೂ ತಲೆಕೆಡಿಸಿಕೊಳ್ಳಲಿಲ್ಲ, ಹಾಗಾಗಿಯೇ ಅವೆರಡೂ ಪ್ರಕರಣಗಳು ಮುಚ್ಚಿಹೋದವು. ದಕ್ಷತೆ ಮತ್ತು ಇಚ್ಛಾಶಕ್ತಿಯ ಕೊರತೆಯಿಂದ ಬಳಲುತ್ತಿರುವ ಶಿವಮೊಗ್ಗ ಪೊಲೀಸರೂ ಕೂಡ ಆನಂದಪುರ ಪೊಲೀಸರಿಂದ ಈ ಪಾಠ ಕಲಿಯಬೇಕಿದೆ. ಆಗ ಮಾತ್ರ ಬೀದಿ ಕೊಲೆಗಳು, ಅಪರಾಧಗಳು ಒಂದಿಷ್ಟು ಕಡಿಮೆಯಾಗಬಹುದೇನೋ.

ಕೊನೆಗೊಂದು ಪ್ರಶ್ನೆ!

ಬದುಕುವ ಹಕ್ಕನ್ನು ಮನುಷ್ಯ ಹುಟ್ಟಿನಿಂದಲೇ ಪಡೆದುಕೊಂಡು ಬಂದಿರುತ್ತಾನೆ. ಅದು ಆತನ ನೈಸರ್ಗಿಕ ದತ್ತ ಹಕ್ಕು. ಅದನ್ನು ಕಿತ್ತುಕೊಳ್ಳುವ ಹಕ್ಕು ಯಾರಿಗೂ ಇರುವುದಿಲ್ಲ. ಮಧುಸೂದನನ ಜೀವವನ್ನು ಕಿತ್ತುಕೊಳ್ಳುವ ಹಕ್ಕು ಜಯಣ್ಣ ರಫೀಕ್ ಮತ್ತು ಮಧುರನಾಥರಿಗೆ ಹೇಗೆ ಇಲ್ಲವೋ ಹಾಗೆಯೇ ಈ ಮೂರು ಅಪರಾಧಿಗಳ ಜೀವವನ್ನು ಕಿತ್ತುಕೊಳ್ಳುವ ಹಕ್ಕು ಈ ದೇಶದ ಸಂವಿಧಾನ ಮತ್ತು ನ್ಯಾಯಾಲಯಗಳಿಗೂ ಇಲ್ಲ. ಇಲ್ಲದಿದ್ದರೆ ಬರ್ಬರತೆಯನ್ನು ಹೊರತುಪಡಿಸಿದರೆ ಮಧುಸೂದನನನ್ನು ಆ ಮೂವರು ಅಪರಾಧಿಗಳಿಗೂ ಹಾಗೂ ಆ ಮೂವರನ್ನು ಕೊಲ್ಲುತ್ತಿರುವ ಈ ದೇಶದ ಸಂವಿಧಾನ ಮತ್ತು ನ್ಯಾಯಾಲಯಗಳಿಗೂ ಏನು ವ್ಯತ್ಯಾಸವಿರುತ್ತದೆ? ಇದು ಬರ್ಬರ ಅಪರಾಧದ ಸಮರ್ಥನೆಯಲ್ಲ, ಬೇಕಾದರೆ ತಮ್ಮ ತಪ್ಪಿನ ಅರಿವು ಮೂಡಿಸುವುದಕ್ಕಾಗಿ ಆ ಅಪರಾಧಿಗಳನ್ನು ಜೀವನಪರ್ಯಂತ ಜೈಲಿನಲ್ಲಿಡಲಿ, ಅವರಿಗೆ ಉಗ್ರ ಶಿಕ್ಷೆ ಕೊಡಲಿ. ಆದರೆ ಮರಣದಂಡನೆ ಯಾವ ಅಪರಾಧಕ್ಕೂ ಉತ್ತರವಾಗಲಾರದು.

■ ಧರಣಿ

ಚಿತ್ರರಂಗಕ್ಕೆ ಸಬ್ಸಿಡಿ ಕೊಳ್ಳಿ

ಮುಖ್ಯಮಂತ್ರಿ ಯಡಿಯೂರಪ್ಪ ಕನ್ನಡ ಚಿತ್ರರಂಗವನ್ನು ನಾಶಮಾಡಲು ಹೊರಟಿದ್ದಾರೆ. ಅದಕ್ಕೆ ಮೊನ್ನಿನ ಬಜೆಟ್‌ನಲ್ಲಿ ಮುನ್ಸೂಚನೆಯನ್ನೂ ನೀಡಿದ್ದಾರೆ.

ಹಲವಾರು ವರ್ಷಗಳಿಂದ ರಿಮೇಕ್ ಚಿತ್ರಗಳಿಗೆ ತೆರಿಗೆ ವಿನಾಯ್ತಿ ನೀಡಬಾರದೆಂಬುದು ಈ ನಾಡಿನ ಬುದ್ಧಿಜೀವಿಗಳ, ಬರಹಗಾರರ ಮತ್ತು ಸದಭಿರುಚಿ ಚಿತ್ರ ನಿರ್ಮಾಪಕರ ಹಾಗೂ ವೀಕ್ಷಕರ ಒಮ್ಮತದ ಅಭಿಪ್ರಾಯವಾಗಿತ್ತು. ಆದರೆ ಯಾವುವೂ ಕ್ರಿಯಾಶೀಲತೆಯನ್ನು ಹೊಂದಿರದೆ ಪರ ಭಾಷೆಗಳಿಂದ ಕದ್ದು ಅಥವಾ ಎರವಲು ಪಡೆದು ಹಳಸಲನ್ನು ಕನ್ನಡಿಗರಿಗೆ ನೀಡುತ್ತಾ ತಮ್ಮ ಜೇಬುಗಳನ್ನು ತುಂಬಿಕೊಳ್ಳುತ್ತಿದ್ದ ಜನ ಇನ್ನಷ್ಟು ಲಾಭದ ಆಸೆಯಿಂದಾಗಿ ತಮಗೂ ತೆರಿಗೆ ವಿನಾಯ್ತಿ ಬೇಕೆಂದು ಸರ್ಕಾರದ ಮೇಲೆ ಹಲವು ವರ್ಷಗಳಿಂದ ಒತ್ತಡವನ್ನು ಹೇರುತ್ತಲೇ ಇದ್ದರು.

ಸಿನಿಮಾದವರೇ ಆದ ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆದ ತಕ್ಷಣ ಇನ್ನೇನು ತಮಗೆ ತೆರಿಗೆ ವಿನಾಯ್ತಿ ಸಿಕ್ಕೇ ಬಿಟ್ಟಿತು ಎಂದು ಅವರೆಲ್ಲಾ ಕುಣಿದಾಡಿದ್ದರು. ಆದರೆ ಕುಮಾರಸ್ವಾಮಿ ಅವರ ಒತ್ತಡಕ್ಕೆ ಮಣಿಯಲಿಲ್ಲ, ಮಾತ್ರವಲ್ಲ, ಒಂದು ಸಮಾರಂಭದಲ್ಲಿ ಈ 'ಕಾಪಿದಾರರನ್ನು' ಓತಪ್ರೋತವಾಗಿ ಬೈದಿದ್ದರು. ಅಷ್ಟೇ ಅಲ್ಲ, ಸರ್ಕಾರಕ್ಕೆ ವಂಚಿಸಿ ರಿಮೇಕ್ ಚಿತ್ರವನ್ನು ಸ್ವಮೇಕ್ ಚಿತ್ರವೆಂದು ಪ್ರದರ್ಶನ ಮಾಡುತ್ತಿದ್ದ ನಿರ್ಮಾಪಕರ ನಿದ್ದೆ ಕೆಡಿಸುವಂತೆ ಆಗಿನ ತೆರಿಗೆ ಅಧಿಕಾರಿ ಹರೀಶ್ ಗೌಡ ಸಮರ ಸಾರಿದ್ದರು. ಹೀಗಾಗಿ ಕಳೆದ ವರ್ಷ ಸೂಪರ್ ಹಿಟ್ ಆದ 'ಚೆಲುವಿನ ಚಿತ್ತಾರ'ದಿಂದ ಹಿಡಿದು ಅನೇಕ ಚಿತ್ರಗಳ ನಿರ್ಮಾಪರಿಗೆ ಕಡಿಮೆ ಲಾಭ ಸಿಕ್ಕಿತ್ತು. ಆದರೆ ಆ ಕ್ರಮದಿಂದಾಗಿ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಹಣ ತೆರಿಗೆ ರೂಪದಲ್ಲಿ ಬಂದಿತ್ತು.



ರಿಮೇಕ್ ಚಿತ್ರಗಳಿಗೆ ತೆರಿಗೆ ವಿನಾಯ್ತಿ ನೀಡಬಾರದೆಂಬ ವಾದಕ್ಕೆ ಹಲವಾರು ಕಾರಣಗಳಿವೆ. ಮೊದಲನೆಯದು ಅಂತಹ ಪ್ರಕ್ರಿಯೆಯಿಂದಾಗಿ ಕನ್ನಡದ ಬರಹಗಾರರು, ಕ್ರಿಯಾಶೀಲರನ್ನು ಕೇಳುವವರೇ ಇಲ್ಲದಂತಾಗುತ್ತದೆ ಎಂಬುದು ಒಂದು. ಎರಡನೆಯದು ಪರಭಾಷಾ ಕತೆಗಳನ್ನು ತಂದು ಸಿನಿಮಾ ಮಾಡುವ ಭರಾಟೆಯಲ್ಲಿ ಕನ್ನಡದ ಸ್ವಂತಿಕೆ, ಸಂಸ್ಕೃತಿ ಮತ್ತು ತನ್ನತನ ಮಣ್ಣುಪಾಲಾಗುತ್ತದೆ ಎಂಬುದು. ಇವೆರಡಕ್ಕಿಂತ ಮುಖ್ಯ ಕಾರಣ ಏನೆಂದರೆ ಪರಭಾಷಾ ನಿರ್ಮಾಪಕರು ಅಲ್ಲಿಯ ಕಲಾವಿದರು ಮತ್ತು ತಂತ್ರಜ್ಞರನ್ನು ಹಾಕಿಕೊಂಡು ಕನ್ನಡ ಸಿನಿಮಾ ನಿರ್ಮಿಸಿ ಕನ್ನಡಿಗರ ಹಣವನ್ನು ಕೊಳ್ಳೆಹೊಡೆಯಲು ಮುಂದಾಗುತ್ತಾರೆ ಎಂಬುದು. ಆದರೆ ಇದ್ಯಾವುದೂ ಯಡಿಯೂರಪ್ಪ ಎಂಬ ಅವಿವೇಕಿಗೆ ಅರಿವಾದಂತಿಲ್ಲ.

ಈಗ ಹತ್ತಾರು ಸಿನಿಮಾಗಳ ರಿಮೇಕ್ ಹಕ್ಕನ್ನು ಹೊಂದಿರುವ ಕೆಲವೇ ಕೆಲವು ನಿರ್ಮಾಪಕರು ಇನ್ನು ಮುಂದೆ ಎರಡು ಮೂರು ವಾರಕ್ಕೊಂದು ಸಿನಿಮಾ ಮುಗಿಸಿ ಆ ಚಿತ್ರಾನ್ನವನ್ನು ಕನ್ನಡ ಪ್ರೇಕ್ಷಕರ ಮುಂದೆ ತಂದು ಬಿಸಾಡಲಿದ್ದಾರೆ. ಸರ್ಕಾರದ ಈ ನೀತಿಯಿಂದಾಗಿ ಈ ವರ್ಷ ಸಿನಿಮಾ ನಿರ್ಮಾಣದ ಸಂಖ್ಯೆ ಗಣನೀಯವಾಗಿ ಏರುವುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ಕ್ರಿಯಾಶೀಲತೆ ಮಾತ್ರ ಇನ್ನಷ್ಟು ಹಳ್ಳ ಹಿಡಿಯುತ್ತದೆ. ಸರ್ಕಾರದ ಈ ಕ್ರಮದಿಂದಾಗಿ ಒಂದು ಕಡೆ ಸರ್ಕಾರದ ಬೊಕ್ಕಸಕ್ಕೆ ಅಪಾರವಾದ ನಷ್ಟವಾದರೆ ಇನ್ನೊಂದೆಡೆ ಕನ್ನಡ ಸಂಸ್ಕೃತಿಗೆ ಕೊಡಲಿ ಪೆಟ್ಟು ನೀಡುತ್ತದೆ.

ಕನ್ನಡ ಭಾಷೆ, ಸಂಸ್ಕೃತಿಯ ಬಗ್ಗೆ ಅವಕಾಶ ಸಿಕ್ಕಾಗಲೆಲ್ಲ ಅರಚಾಡುವ ಕನ್ನಡ ಹೋರಾಟಗಾರರು ಮತ್ತು ನಿಜವಾಗಲೂ ಅಪಾರ ಕಾಳಜಿ ಹೊಂದಿರುವ ಬುದ್ಧಿಜೀವಿಗಳು ಈ ಬಗ್ಗೆ ಚಕಾರವೆತ್ತದಿರುವುದು ಅಚ್ಚರಿ ಮೂಡಿಸಿದೆ. ಆದರೆ ನಿಜಕ್ಕೂ ಬೇಸರ ಹುಟ್ಟಿಸುವ ಸಂಗತಿ ಯಾವುದೆಂದರೆ 'ತಾಯಿಸಾಹೇಬ'ದಂತಹ ಕಲಾತ್ಮಕ ಚಿತ್ರವನ್ನು ನಿರ್ಮಿಸಿ, ಅದರಲ್ಲಿ ನಟಿಸಿ ರಾಷ್ಟ್ರೀಯ ಪ್ರಶಸ್ತಿ ಪಡೆದ ಜಯಮಾಲಾ ತಮ್ಮ ಇಲ್ಲಿಯತನಕದ ರಿಮೇಕ್ ವಿರುದ್ಧದ ನಿಲುವನ್ನು ಬದಲಾಯಿಸಿ ಅಂತಹ ಚಿತ್ರಗಳಿಗೆ ತೆರಿಗೆ ವಿನಾಯ್ತಿ ನೀಡಬೇಕೆಂದು ಸರಕಾರವನ್ನು ಒತ್ತಾಯಿಸಿದ್ದು. ಒಂದು ಕಡೆಯಲ್ಲಿ ರಿಮೇಕ್ ಲಾಬಿಗೆ ಹೀಗೆ ಶರಣಾಗಿರುವ ಯಡಿಯೂರಪ್ಪನ ಸರ್ಕಾರ ಇನ್ನೊಂದೆಡೆ ಫಿಲ್ಮ್ ಅಕಾಡೆಮಿ ಸ್ಥಾಪಿಸುವುದಾಗಿ ಘೋಷಿಸಿ ತನ್ನ ಇಬ್ಬಂದಿತನವನ್ನು ಪ್ರದರ್ಶಿಸಿದೆ. ಕನ್ನಡ ಚಿತ್ರರಂಗ ಅಮೃತ ಮಹೋತ್ಸವ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಚಿತ್ರರಂಗಕ್ಕೆ ಇದು ಸರಕಾರ ಎಸಗಿರುವ ದ್ರೋಹವಲ್ಲದೇ ಮತ್ತೇನು? ■



ಯಡ್ಡಿ ಬಜೆಟ್: ಭರವಸೆ ಉಚಿತ ದ್ರೋಹ ಖಚಿತ!

■ ಶಿವಸುಂದರ್



ಮುಖ್ಯಮಂತ್ರಿ ಯಡಿಯೂರಪ್ಪ ಸಂಪೂರ್ಣ ಬಿಜೆಪಿ ಪಕ್ಷದ್ದೇ ಆಗಿರುವ 'ಸ್ವತಂತ್ರ' ಬಜೆಟ್ ಅನ್ನು ಮಂಡಿಸಿದ್ದಾರೆ. ಆದರೆ ಈ ಸ್ವತಂತ್ರ ಬಿಜೆಪಿ ಬಜೆಟ್ ಕೂಡ ಕಾಂಗ್ರೆಸ್ ಬಜೆಟ್ಟುಗಳ ಮತ್ತು ಅದರ ಆರ್ಥಿಕ ನೀತಿಗಳ ಪಡಿಯಚ್ಚೇ ಆಗಿದೆ!

ಇದಕ್ಕೆ ಕಾರಣವೂ ಇದೆ. ಕಳೆದ ಜುಲೈ 17ರಂದು ಮಧ್ಯಾಹ್ನ 12 ರ 'ಶುಭಗಳಿಗೆ'ಯಲ್ಲಿ ಯಡಿಯೂರಪ್ಪ ಮಂಡಿಸಿದ ಬಜೆಟ್ ಆಗಲಿ, ಈ ಹಿಂದೆ 'ಕೋ-ಜಾ' ಸಮ್ಮಿಶ್ರ ಸರ್ಕಾರವಾಗಲಿ, ಅಥವಾ ಅದಕ್ಕೂ ಹಿಂದೆ ಕಾಂಗ್ರೆಸ್ ಸರ್ಕಾರ ಮಂಡಿಸಿದ ಎಲ್ಲಾ ಬಜೆಟ್ಟುಗಳಾಗಲಿ, ಅವೆಲ್ಲವೂ ಮುಂಚಿತವಾಗಿಯೇ ವಿಶ್ವಬ್ಯಾಂಕು ಮತ್ತು ಎಡಿಬಿಗಳಂಥ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಅನುಮೋದಿಸಲ್ಪಟ್ಟವೇ ಆಗಿವೆ. ಈ ಹಿಂದೆ ಕರ್ನಾಟಕ ಸರ್ಕಾರವು ವಿಶ್ವಬ್ಯಾಂಕಿನಿಂದ ಸ್ಟ್ರಕ್ಚರಲ್ ರಿಅಡ್ಜೆಸ್ಟ್‌ಮೆಂಟ್ ಲೋನ್ ಪಡೆದುಕೊಂಡಾಗ ಅದರ ಬದಲಿಗೆ ಬ್ಯಾಂಕಿನ ಷರತ್ತಿಗನುಸಾರ ತನ್ನ ಇಡಿ ಆರ್ಥಿಕತೆಯನ್ನು ಪುನರ್ ರಚಿಸಲು ಸಮ್ಮತಿಸಿತ್ತು. ಹೀಗಾಗಿ ಅಂದಿನಿಂದ ಇವತ್ತಿನತನಕ ಕರ್ನಾಟಕದ ಎಲ್ಲಾ ಬಜೆಟ್ಟುಗಳು ಮತ್ತು ಆರ್ಥಿಕ ನೀತಿಗಳನ್ನು ನಿರ್ಣಯಿಸುತ್ತಿರುವುದು ಈ ರಾಜ್ಯದ ಚುನಾಯಿತ ಸರ್ಕಾರಗಳಲ್ಲ, ವಿಧಾನಸಭೆಯಂತೂ ಅಲ್ಲವೇ ಅಲ್ಲ!

ಯಾವುದೇ ಸರ್ಕಾರ ಬಂದರೂ ವಿಶ್ವಬ್ಯಾಂಕಿನ ನಿರ್ದೇಶನದನ್ವಯವೇ ರಾಜ್ಯದ ಬಜೆಟ್‌ಗಳು ಪಾಸಾಗುವಂತೆ ಖಾತರಿಪಡಿಸಿಕೊಳ್ಳಲು 2002ರಲ್ಲೇ ಎಸ್.ಎಂ ಕೃಷ್ಣ ಸರ್ಕಾರ ವಿತ್ತೀಯ ಸುಧಾರಣಾ ಶಾಸನವನ್ನು (Fiscal Responsibility Act-2002) ಸದನದಲ್ಲಿ ಮಂಡಿಸಿತ್ತು. ಅದಕ್ಕೆ ಬಿಜೆಪಿಯೂ ಒಳಗೊಂಡಂತೆ ಯಾವುದೇ ವಿರೋಧ ಪಕ್ಷವೂ ಪ್ರತಿರೋಧವನ್ನು ವ್ಯಕ್ತಪಡಿಸದೇ ಸರ್ವಾನುಮತದಿಂದ ಅದನ್ನು ನಮ್ಮ ಶಾಸನ ಪ್ರತಿನಿಧಿಗಳು ಕಾಯಿದೆಯನ್ನಾಗಿಸಿದರು. ನಂತರ 2003ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಇದೇ ನೀತಿ ಇಡೀ ದೇಶಕ್ಕೆ ಅನ್ವಯವಾಗುವಂತೆ ಕೇಂದ್ರೀಯ ಕಾಯಿದೆಯನ್ನು ಜಾರಿಗೊಳಿಸಿತು.

ಅದರ ಪ್ರಕಾರ ಸರ್ಕಾರವು ತನ್ನ ಆದಾಯ ಸಂಗ್ರಹಣೆಯನ್ನು VAT ತರಹದ ತೆರಿಗೆಗಳ ಮೂಲಕ ಹೆಚ್ಚಿಸಿಕೊಳ್ಳಬೇಕಲ್ಲದೆ, ಈವರೆಗೆ ರಿಯಾಯಿತಿ ದರದಲ್ಲಿ ನೀಡಲಾಗುತ್ತಿದ್ದ ಸರ್ಕಾರಿ ಸರಕು ಮತ್ತು ಸೇವೆಗಳಿಗೆ ಗರಿಷ್ಠ ಮಟ್ಟದ ಶುಲ್ಕವನ್ನು ವಿಧಿಸಬೇಕು. ಅದರಲ್ಲೂ MTFP ಜಾರಿಯ ನಂತರ ರೈತರು ಬಳಸುವ ನೀರಿನ ದರವನ್ನು ಕಡ್ಡಾಯವಾಗಿ ಅದರ ಪೂರೈಕೆಗೆ ತಗಲುವ ಖರ್ಚು ಮತ್ತು ಶೇ.1ರಷ್ಟು ಬಂಡವಾಳ ವೆಚ್ಚವನ್ನು ಒಳಗೊಂಡಿರಬೇಕೆಂದು ಕಡ್ಡಾಯ ಮಾಡಲಾಗಿದೆ. ಇದರಿಂದಾಗಿ ರೈತರ ಕೃಷಿ ವೆಚ್ಚ ಹೆಚ್ಚಾಗಿದೆ. ಇತರೆ ಸಂಕಷ್ಟಗಳೊಂದಿಗೆ ರೈತ ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿಯೇ ಕಬ್ಬಿಗೆ ಬಳಸುತ್ತಿದ್ದ ಹರಿ ನೀರಿನ ಮೇಲೆ ಪ್ರತಿ ಎಕರೆ ದರವನ್ನು 300ರಿಂದ 400 ರೂ.ಗಳಿಗೆ ಮತ್ತು ಭತ್ತ ಹತ್ತಿ ಇನ್ನಿತ್ಯಾದಿ ಬೆಳೆಗಳಿಗೆ ವಿಧಿಸುತ್ತಿದ್ದ ದರವನ್ನು 30 ರೂ.ನಿಂದ 100 ರೂ.ಗಳಿಗೆ ಏರಿಸಲಾಗಿದೆ. ಇನ್ನು ಏತನೀರಾವರಿಯಾಗಿದ್ದರೆ ಇದರ ಮೂರು ಪಟ್ಟು ದರವನ್ನು ವಿಶ್ವಬ್ಯಾಂಕಿನ ಆದೇಶದನ್ವಯ ಜಾರಿಗೆ ತರಲಾಗಿದೆ.

ಇದಿಷ್ಟಲ್ಲದೆ, ಎಮ್‌ಟಿಎಫ್‌ಪಿ ಕಾಯಿದೆಯ ಪ್ರಕಾರ ಸರ್ಕಾರಿ ಉದ್ಯಮಗಳಿಗೆ ಬಜೆಟ್ಟಿನಿಂದ ನೀಡುತ್ತಿದ್ದ ಸಹಾಯಧನವನ್ನು ಹಿಂತೆಗೆದುಕೊಳ್ಳುವ, ಲಾಭವಿಲ್ಲದಿದ್ದರೆ ಮುಚ್ಚುವ, ಖಾಸಗೀಕರಿಸುವ ಮತ್ತು ಉದ್ಯೋಗಿಗಳಿಗೆ ವಿಆರ್‌ಎಸ್ ನೀಡುವ ನಿಯಮಗಳೂ ಇವೆ. ಅದರೊಂದಿಗೆ ವಿದ್ಯುತ್ ವಲಯಕ್ಕೆ ನೀಡುತ್ತಿರುವ ಸಬ್ಸಿಡಿಯನ್ನು ಗಣನೀಯವಾಗಿ ಕಡಿಮೆ ಮಾಡುವ, ವಿದ್ಯುತ್ ದರವನ್ನು ಹೆಚ್ಚಿಸುವ, ಕುಡಿಯುವ ನೀರು, ನೀರಾವರಿ, ಉನ್ನತ ಶಿಕ್ಷಣ, ಆರೋಗ್ಯ ಸೇವೆ ಇನ್ನಿತರ ಬಾಬತ್ತುಗಳಿಗೆ ನೀಡುತ್ತಿರುವ ಎಲ್ಲಾ ಸಬ್ಸಿಡಿಗಳನ್ನು ಗಣನೀಯವಾಗಿ ಹಿಂತೆಗೆದುಕೊಳ್ಳುವ, ಪಡಿತರಕ್ಕೆ ನೀಡುತ್ತಿರುವ ಸಬ್ಸಿಡಿಯನ್ನು ಕಡ್ಡಾಯವಾಗಿ ಕಡಿಮೆ ಮಾಡುವಂತೆ ತಾಕೀತು ನೀಡಿದೆ. ಅಷ್ಟು ಮಾತ್ರವಲ್ಲದೆ ಇದನ್ನು ಸಾಧಿಸಲು ಪ್ರತಿ ವರ್ಷದ ರೋಡ್ ಮ್ಯಾಪ್ ಹೇಗಿರಬೇಕೆಂಬುದನ್ನು ಸರ್ಕಾರಕ್ಕೆ ಆದೇಶಿಸಿದೆ. ಇಲ್ಲಿಯತನಕ ವಿದ್ಯುತ್ ಕ್ಷೇತ್ರವು ರಾಜ್ಯ ಸರ್ಕಾರದಿಂದ ಅಪಾರ ಸಬ್ಸಿಡಿಯನ್ನು ಪಡೆಯುತ್ತಿದ್ದು ಅದನ್ನು ತಗ್ಗಿಸಬೇಕೆಂಬುದೇ ವಿಶ್ವಬ್ಯಾಂಕಿನ ಮತ್ತು ಎಲ್ಲಾ MTFP-ಗಳ ಪ್ರಮುಖ ಒತ್ತಡವಾಗಿದೆ.

ಯಡಿಯೂರಪ್ಪ ಕೂಡ ತಮ್ಮ ಬಜೆಟ್‌ನಲ್ಲಿ ಉಚಿತ ವಿದ್ಯುತ್ ಎಂಬ ಪುಗಸಟ್ಟೆ ಘೋಷಣೆ ನೀಡಿದ್ದರೂ ಅವರು MTFP ಯ ಎಲ್ಲಾ ಆದೇಶಗಳನ್ನು ಪಾಲಿಸಿದ್ದಾರೆ. ಅದು ಹೇಗೆ ಎಂದು ಇಲ್ಲಿ ವಿವರಿಸಲಾಗಿದೆ.

ವಿದ್ಯುತ್ ಕ್ಷೇತ್ರಕ್ಕೆ ಸಂಬಂಧಿಸಿದಂತೆ 2001ರ MTFP ಹೇಳಿರುವುದನ್ನು ಈಗಾಗಲೇ ಮೇಲೆ ಗಮನಿಸಿದ್ದೇವೆ. 2005-2009ರ ಸಾಲಿಗೆ ಸರ್ಕಾರ ಸಿದ್ಧಗೊಳಿಸಿದ್ದ MTFP ಈ ಯೋಜನೆಯನ್ನು ಜಾರಿಗೊಳಿಸಿದೆ:

"4.3.2 Power Sector reforms have been gaining importance in recent years. The Electricity Act, 2003 notified on 10th June 2005 has provided the necessary legal framework for reforms in this sector. Establishments of Regulators, unbundling of generation, transmission and distribu tion are some major reforms. On the power subsidy side, various efforts have been made by the state but with little success. The purchaser-provider model has been proposed. The major constraint in assessing the power consumption is the non-metering of agricultural pump sets. Action has been contemplated to meter the consumption points so that the actual energy consumed is accounted and the subsidy provided to Escoms to the agricultural pump sets is linked to actual submission of the of the bills by the utilities" (MTFP-2005-2009 p.29)

ಬಿಜೆಪಿ ಪಕ್ಷವು ಚುನಾವಣೆಗೆ ಮುನ್ನ ಮತ್ತು ಅಧಿಕಾರಕ್ಕೆ ಬಂದನಂತರ ನೀಡಿದ ಪ್ರಧಾನ ಭರವಸೆಗಳಲ್ಲಿ ರೈತರು ಬಳಸುವ ಹತ್ತು ಎಚ್‌ಪಿವರೆಗಿನ ಎಲ್ಲಾ ಕೃಷಿ ಪಂಪ್‌ಸೆಟ್ಟುಗಳಿಗೆ ಉಚಿತ ವಿದ್ಯುತ್ತನ್ನು ನೀಡುವುದಾಗಿ ಹೇಳಿದ್ದು ಅತಿಮುಖ್ಯವಾದದ್ದು. ಹಾಗೆಯೇ ಈ ಬಜೆಟ್ಟಿನಲ್ಲಿ ಜನರಿಗೆ ಮಾಡಿದ ಅತಿ ದೊಡ್ಡ ದ್ರೋಹಗಳಲ್ಲಿ ಸಹಾ ಪ್ರಮುಖವಾಗಿದೆ.

ಚುನಾವಣೆಗೆ ಮುನ್ನ 10 ಎಚ್‌ಪಿವರೆಗಿನ ಎಲ್ಲಾ ಪಂಪ್ ಸೆಟ್ಟುಗಳಿಗೆ ಉಚಿತ ವಿದ್ಯುತ್ ಸರಬರಾಜು ಮಾಡುವುದಾಗಿ ಹೇಳುತ್ತಿದ್ದ ಬಿಜೆಪಿ ಪಕ್ಷ ಅಧಿಕಾರ ಹಿಡಿದೊಡನೆ ಬೇರೆ ರಾಗ ಹಾಡಲು ಪ್ರಾರಂಭಿಸಿತು. ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ನಂತರ ನಡೆಸಿದ ಮೊದಲ ಪತ್ರಿಕಾಗೋಷ್ಠಿಯಲ್ಲೇ ಯಡಿಯೂರಪ್ಪನವರು ಎಲ್ಲರಿಗೂ ಉಚಿತ ವಿದ್ಯುತ್ ಕೊಡಲು ಸಾಧ್ಯವಿಲ್ಲ ಎಂದು ಘೋಷಿಸಿಬಿಟ್ಟರು. ನಂತರ ಇಂಧನ ಮಂತ್ರಿ ಈಶ್ವರಪ್ಪನವರೂ ಸಹ ಮುಂದಿನ ವರ್ಷದಲ್ಲಾದರೂ ಉಚಿತ ವಿದ್ಯುತ್ ಕೊಡಲು ಮುಖ್ಯಮಂತ್ರಿಗೆ ಮನವಿ ಮಾಡುತ್ತೇವೆ ಎಂದರು. ನಂತರ ಅವರೂ ಎಲ್ಲರಿಗೂ ಉಚಿತ ವಿದ್ಯುತ್ ಸಾಧ್ಯವಿಲ್ಲ ಎಂಬ ರಾಗ ಪ್ರಾರಂಭಿಸಿದರು. ಅಂತಿಮವಾಗಿ ಬಜೆಟ್ಟಿಗೆ ಎರಡು ದಿನಗಳಿರುವಾಗ ಉಚಿತ ವಿದ್ಯುತ್ ಕೊಡುತ್ತೇವೆ ಎಂದು ಹೇಳಲು ಪ್ರಾರಂಭಿಸಿದರು. ಈಗ ಅಂತಿಮವಾಗಿ ಉಚಿತ ವಿದ್ಯುತ್ ಬಗ್ಗೆ ಬಜೆಟ್ಟಿನಲ್ಲಿ ಸರ್ಕಾರ ಹೀಗೆ ಘೋಷಿಸಿದೆ:

"ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಒದಗಿಸಲಾಗುತ್ತಿದ್ದು, 15 ಲಕ್ಷ ರೈತರು ಇದರ ಅನುಕೂಲ ಪಡೆಯಲಿದ್ದಾರೆ. ವಿದ್ಯುತ್ ಸರಬರಾಜು ನಿಗಮಗಳ ವೆಚ್ಚದಲ್ಲಿ ಪ್ರತಿ ಪಂಪ್‌ಸೆಟ್‌ಗೂ ಮೀಟರ್ ಅಳವಡಿಸಲು ನಿರ್ಧರಿಸಲಾಗಿದ್ದು, ಇದರಿಂದ ರೈತರು ಬಳಕೆ ಮಾಡುತ್ತಿರುವ ಒಟ್ಟಾರೆ ವಿದ್ಯುಚ್ಛಕ್ತಿಯ ಪ್ರಮಾಣವನ್ನು ತಿಳಿಯಲು ಸಾಧ್ಯವಾಗುತ್ತದೆ. ಈ ಸಂಬಂಧ ಸರ್ಕಾರವು ಈಗಾಗಲೇ ವಿದ್ಯುತ್ ಸಂಸ್ಥೆಗಳಿಗೆ ನೀಡುತ್ತಿರುವ 1550 ಕೋಟಿ ರೂ.ಗಳಲ್ಲದೆ ಹೆಚ್ಚುವರಿಯಾಗಿ ಪ್ರತಿವರ್ಷ 750 ಕೋಟಿ ರೂ.ಗಳ ಹೆಚ್ಚುವರಿ ಸಹಾಯಧನವನ್ನು ನೀಡಬೇಕಾಗಿದೆ. ಈ ವರ್ಷ ಉಳಿದ ಎಂಟು ತಿಂಗಳಿಗೆ ಈ ಹೆಚ್ಚುವರಿ ಸಹಾಯಧನದ ಮೊತ್ತವು 500 ಕೋಟಿ ರೂ. ಆಗುವುದೆಂದು ಅಂದಾಜಿಸಲಾಗಿದೆ." (ಬಜೆಟ್ಟಿನ 27 ನೇ ಅಂಶ)

ಮರುದಿನದ ದಿನಪತ್ರಿಕೆಗಳ ಮುಖಪುಟದ ತುಂಬಾ 'ಮಾತು ಉಳಿಸಿಕೊಂಡ ಮುಖ್ಯಮಂತ್ರಿ', 'ರೈತಪರ ಬಜೆಟ್' ಇನ್ನಿತ್ಯಾದಿ ಶೀರ್ಷಿಕೆಗಳಲ್ಲಿ ಕಿಂಚಿತ್ತೂ ವಿಶ್ಲೇಷಣೆ ಮಾಡದೆ ಯಡಿಯೂರಪ್ಪನವರಿಗೆ ಅನಾಮತ್ತು ರೈತಪರ ಬಿರುದನ್ನು ಪತ್ರಿಕೆಗಳು ದಯಪಾಲಿಸಿಬಿಟ್ಟವು.

ಆದರೆ ಆವರೆಗೆ ಉಚಿತ ವಿದ್ಯುತ್ ನೀಡಲು 875 ಕೋಟಿ ರೂ. ಬೇಕು ಎನ್ನುತ್ತಿದ್ದ ಸರ್ಕಾರ ಮರುದಿನವೇ ಉಚಿತ ವಿದ್ಯುತ್ ನೀಡಲು 875 ಕೋಟಿ ಬೇಕಾಗಿಲ್ಲ, ಬದಲಿಗೆ 750 ಕೋಟಿ ಸಾಕು ಎನ್ನಲು ಪ್ರಾರಂಭಿಸಿತು. ಅಷ್ಟು ಮಾತ್ರವಲ್ಲ, 10 ಎಚ್‌ಪಿ ಬಳಸುವ ಕೃಷಿ ಪಂಪ್‌ಸೆಟ್‌ಗಳು ರಾಜ್ಯದಲ್ಲಿ 17.21 ಲಕ್ಷದಷ್ಟಿವೆ. ಅವುಗಳಲ್ಲಿ ಉಚಿತ ವಿದ್ಯುತ್ ಕೊಡುತ್ತೇವೆ ಎಂದು ಸರ್ಕಾರ ಹೇಳುತ್ತಿರುವುದು ಕೇವಲ 15 ಲಕ್ಷ ಪಂಪ್‌ಸೆಟ್‌ಗಳಿಗೆ ಮಾತ್ರ. ಇದಲ್ಲದೆ ಬಜೆಟ್ ಮರುದಿನದಿಂದ ಇಂಧನ ಮಂತ್ರಿಗಳು ವರಮಾನ ತೆರಿಗೆ ಪಾವತಿ ಮಾಡುವ ರೈತರು 10 ಅಶ್ವಶಕ್ತಿ ಪಂಪ್‌ಸೆಟ್ ಬಳಸುತ್ತಿದ್ದರೂ ಅವರಿಗೆ ಉಚಿತ ವಿದ್ಯುತ್ ನೀಡಲಾಗುವುದಿಲ್ಲವೆಂದು ಘೋಷಿಸಿದ್ದಾರೆ. ವಾಸ್ತವವಾಗಿ ಕೃಷಿ ಆದಾಯಕ್ಕೆ ವರಮಾನ ತೆರಿಗೆಯೇ ಇಲ್ಲ! ಇನ್ನು ವರಮಾನ ತೆರಿಗೆ ಕಟ್ಟುವಷ್ಟು ಕೃಷಿಯೇತರ ಆದಾಯ ಪಡೆಯುವವರು ಅತಿ ಕಡಿಮೆ. ಹೀಗಿದ್ದರೂ ಅದನ್ನು ಉಚಿತ ವಿದ್ಯುತ್ ನಿರಾಕರಿಸಲು ಒಂದು ಮಾನದಂಡವನ್ನಾಗಿ ಸರ್ಕಾರ ಉಪಯೋಗಿಸುತ್ತಿದೆ. ಅಂದರೆ ಬರಲಿರುವ ದಿನಗಳಲ್ಲಿ ಹೊಸ ಮಾನದಂಡಗಳನ್ನು ಹಾಕುತ್ತಾ ಉಚಿತ ವಿದ್ಯುತ್ತಿನಿಂದ ಹೆಚ್ಚು ರೈತರನ್ನು ಹೊರಗುಳಿಸಲು ಪ್ರಯತ್ನಿಸಲಾಗುತ್ತದೆ ಎಂದರ್ಥ! ಈಗಾಗಲೇ 17.21 ಲಕ್ಷ ಪಂಪ್‌ಸೆಟ್ ಬಳಕೆದಾರರಲ್ಲಿ ಏಕಾಏಕಿ 2.21 ಲಕ್ಷ ರೈತರನ್ನು ವಿವರಣೆಯೇ ಇಲ್ಲದೆ ಈ ಯೋಜನೆಯಿಂದ ಹೊರಗಿಡಲಾಗಿದೆ.

ಅಷ್ಟು ಮಾತ್ರವಲ್ಲ, ಈವರೆಗೆ ಉಚಿತ ವಿದ್ಯುತ್ ನೀಡಲು 875 ಕೋಟಿ ಹಣ ಬೇಕು ಎನ್ನುತ್ತಿದ್ದವರು ಏಕಾಏಕಿ ಅದನ್ನು 750 ಕೋಟಿಗೆ ಇಳಿಸಿದ್ದಾರೆ. ಅಂದರೆ 125 ಕೋಟಿ ರೂ. ಕಡಿತಗೊಳಿಸುವ ಮೂಲಕ ಇನ್ನೂ

2.14 ಲಕ್ಷದಷ್ಟು ರೈತರನ್ನು ಹೊರಗಿಡಲಾಗಿದೆ. ಅಂದರೆ ಉಚಿತ ವಿದ್ಯುತ್ ಕೊಡಲಿರುವುದು 15 ಲಕ್ಷ ಪಂಪ್‌ಸೆಟ್ಟುಗಳಿಗಲ್ಲ, ಬದಲಿಗೆ 12.86 ಲಕ್ಷದಷ್ಟು ರೈತರಿಗೆ ಮಾತ್ರ ಎಂದಾಯಿತು.

ಇಲ್ಲಿ ಇನ್ನೊಂದು ಮುಖ್ಯ ಅಂಶವನ್ನು ಗಮನಿಸಬೇಕು. ಈವರೆಗೆ ಭಾಗ್ಯಜ್ಯೋತಿ ಯೋಜನೆ ಮತ್ತು ಕೃಷಿ ಪಂಪ್ ಸೆಟ್ಟುಗಳಿಗೆ ರಿಯಾಯತಿ ವಿದ್ಯುತ್ ನೀಡಲು ಸರ್ಕಾರವು 1800 ಕೋಟಿ ರೂ.ಗಳನ್ನು ನೀಡುತ್ತಿತ್ತು, ಉಚಿತ ವಿದ್ಯುತ್ ಯೋಜನೆಗೆ ಈ 1800 ಕೋಟಿಯೂ ಸೇರಿದಂತೆ ಹೆಚ್ಚುವರಿಯಾಗಿ 875 ಕೋಟಿ ರೂ.ಗಳು ಬೇಕಾಗುತ್ತಿತ್ತು. ಆದರೆ ಬಜೆಟ್ ಘೋಷಣೆಯಲ್ಲಿ ಸ್ಪಷ್ಟ ಪಡಿಸಿರುವಂತೆ "ಈಗಾಗಲೇ ಸರ್ಕಾರವು ವಿದ್ಯುತ್ ಸಂಸ್ಥೆಗಳಿಗೆ ನೀಡುತ್ತಿರುವ ಸಹಾಯಧನವಾದ 1550 ಕೋಟಿ.." ಎಂದು ಹೇಳಲಾಗಿದೆ. ಇದರರ್ಥ ಇಲ್ಲಿಯತನಕ ಕೊಡಲಾಗುತ್ತಿದ್ದ ಸಹಾಯ ಧನವನ್ನು 1800 ಕೋಟಿಯಿಂದ 1550 ಕೋಟಿಗೆ ಇಳಿಸಿದ್ದಾರೆ 'ರೈತಪರ'ವಾಗಿರುವ ಯಡಿಯೂರಪ್ಪ!

ಇದರ ಪರಿಣಾಮವಾಗಿ ಉಚಿತ ವಿದ್ಯುತ್ ಪಡೆಯುತ್ತಿದ್ದ 250 ಕೋಟಿ ರೂ.ಗಳಷ್ಟು ಫಲಾನುಭವಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಅದನ್ನು ಇನ್ನೊಂದು ರೀತಿ ಹೇಳುವುದಾದರೆ 4.28 ಲಕ್ಷದಷ್ಟು ರೈತರು ಈ ಯೋಜನೆಯಿಂದ ಹೊರಗುಳಿಯುತ್ತಾರೆ. ಒಟ್ಟಾರೆಯಾಗಿ ಈ ಯೋಜನೆಯಿಂದ ಹೊರಗುಳಿಯುವವರ ಸಂಖ್ಯೆ 6.42 ಲಕ್ಷದಷ್ಟು ರೈತರು ಎಂದಾಯ್ತು, ಅಂದರೆ ಉಚಿತ ವಿದ್ಯುತ್ತಿನ ಫಲಾನುಭವಿಗಳ ಸಂಖ್ಯೆ 15 ಲಕ್ಷವಲ್ಲ, ಕೇವಲ 8.58 ಲಕ್ಷವೆಂದಾಯಿತು.

ಇದಲ್ಲದೆ ಅಂಕಿಸಂಖ್ಯೆಗಳ ಗಾರುಡಿಯಲ್ಲಿ ಸರ್ಕಾರ ತಣ್ಣಗೆ ನಡೆಸಿರುವ ಮತ್ತೊಂದು ಮೋಸ ಜನತೆಯ ಗಮನಕ್ಕೆ ಬಾರದೆ ಹೋಗಿದೆ. ಬಜೆಟ್ ಘೋಷಣೆಯಲ್ಲಿ "ವಿದ್ಯುತ್ ಸರಬರಾಜು ನಿಗಮಗಳ ವೆಚ್ಚದಲ್ಲಿ ಪ್ರತಿ ಪಂಪ್‌ಸೆಟ್‌ಗೂ ಮೀಟರ್ ಅಳವಡಿಸಲು ನಿರ್ಧರಿಸಲಾಗಿದೆ" ಎಂದೂ ಸೇರಿಸಲಾಗಿದೆ. ಇಲ್ಲಿ ಎರಡು ಮುಖ್ಯ ಪ್ರಶ್ನೆಗಳಿವೆ.

ಮೊದಲನೆಯದಾಗಿ ಪ್ರತಿ ಪಂಪ್‌ಸೆಟ್ಟಿಗೂ ಮೀಟರ್ ಅನ್ನು ಏಕೆ ಅಳವಡಿಸಲಾಗುತ್ತಿದೆ?

ಇಂಧನ ಮಂತ್ರಿ ಈಶ್ವರಪ್ಪ ಮತ್ತು ಮುಖ್ಯಮಂತ್ರಿ ಯಡಿಯೂರಪ್ಪನವರ ಪ್ರಕಾರ ಅದು ಒಟ್ಟಾರೆಯಾಗಿ ಕೃಷಿ ಕ್ಷೇತ್ರಕ್ಕೆ ಎಷ್ಟು ವಿದ್ಯುತ್ ಬೇಕು ಎಂದು ತಿಳಿಯಲು ಮಾತ್ರ. ಈಶ್ವರಪ್ಪನವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ಅದನ್ನು ಬಿಲ್ ಹಾಕಲು ಬಳಸುವುದಾದರೆ ನಾವೆಲ್ಲರೂ ಒಟ್ಟು ಸೇರಿ ಮೀಟರ್ ತೆಗೆಯಲು ಹೋರಾಟ ಮಾಡೋಣ" ಎಂದು ಸದನದಲ್ಲಿ ಕರೆ ನೀಡಿದ್ದಾರೆ. ಆದರೆ ವಾಸ್ತವವೆಂದರೆ ವಿದ್ಯುತ್ ಕ್ಷೇತ್ರದಲ್ಲಿ ತರಲಾಗುತ್ತಿರುವ ಎಲ್ಲಾ ಬದಲಾವಣೆಗಳು ಸಹ ಉದಾರೀಕರಣ ಮತ್ತು ಜಾಗತೀಕರಣ ನೀತಿಗಳು ಮತ್ತು ವಿಶ್ವಬ್ಯಾಂಕ್ ಆದೇಶದನ್ವಯ 1999ರಲ್ಲಿ ಪ್ರಾರಂಭವಾದ ಕರ್ನಾಟಕ ವಿದ್ಯುತ್ ಕ್ಷೇತ್ರ ಸುಧಾರಣೆ ಕಾಯಿದೆಯ ಪರಿಣಾಮವಾಗಿದ್ದು ಅದರ ಧ್ಯೇಯವೇ ಈ ರೀತಿ ಇದೆ:

Hence, the Karnataka Electricity Reform Act, (KERC) has been enacted in 1999. The salient features of the Act are:

(1) Constitution of Electricity Regulation Commission.

(2) Corporatisation of the erstwhile Electricity Board and formation of several distribution companies,

(3) Privatisation of distribution companies; and

(4) Augmentation of generation through Independent Power Producers (IPPs).

(ಕರ್ನಾಟಕ ವಿದ್ಯುತ್ ಸುಧಾರಣಾ ಕಾಯಿದೆ-1999)

ಈ ಕಾಯಿದೆಯು ಸ್ಪಷ್ಟ ಪಡಿಸುವಂತೆ ವಿದ್ಯುತ್ ವಿತರಣೆಯನ್ನು ಖಾಸಗೀಕರಿಸುವುದು ಅದರ ಪ್ರಧಾನ ಉದ್ದೇಶ. ಇದನ್ನು ಅನುಸರಿಸಿ 2001ರಲ್ಲಿ ಹೊರಡಿಸಲಾದ ಕರ್ನಾಟಕ ರಾಜ್ಯ ಸರ್ಕಾರದ ಆದೇಶವು ಎಲ್ಲಾ ಬಳಕೆದಾರರಿಗೂ ಮೀಟರ್ ಅಳವಡಿಕೆ ಕಡ್ಡಾಯ ಮಾಡುತ್ತದೆ:

GOVERNMENT ORDER NO.DE 15 PSR 2001 DATED 18.4.2001

In the circumstances explained in the Preamble, Government is pleased to approve the following:

1. Detailed Operational Plan of KPTCL for metering of its unmetered consumer installations appended to this Order is approved subject to the following conditions:

i. KPTCL shall also make necessary arrangements for meter reading a n d billing of IP sets, as per the KERC Tariff Order-2000 dated 18.12.2000 duly taking into account the subsidy granted by the Government of Karnataka by its Notification dated 2.2.2001/23.3.2001.

ಮೇಲಿನ ಆದೇಶವು ಸ್ಪಷ್ಟ ಪಡಿಸುವಂತೆ ಸರ್ಕಾರವು ಕೆಪಿಟಿಸಿಎಲ್‌ಗೆ ಎಲ್ಲಾ ನೀರಾವರಿ ಪಂಪ್‌ಸೆಟ್ಟುಗಳಿಗೆ ಮೀಟರ್ ಹಾಕಲು ಕಡ್ಡಾಯ ಮಾಡಿರುವುದೇ ನಂತರದ ದಿನಗಳಲ್ಲಿ ಬಳಕೆಗೆ ತಕ್ಕಂತೆ ಬಿಲ್ ಹಾಕಲು. ಏಕೆಂದರೆ ಆಗ ಮಾತ್ರ ವಿದ್ಯುತ್ ವಿತರಣೆಯನ್ನು ಯಶಸ್ವಿಯಾಗಿ ಖಾಸಗೀಕರಿಸಲು ಸಾಧ್ಯ. ಹೀಗಾಗಿ ಪಂಪ್‌ಸೆಟ್ಟುಗಳಿಗೆ ಮೀಟರ್ ಹಾಕುತ್ತಿರುವುದೇ ನಂತರ ವಿತರಣೆಯನ್ನು ಖಾಸಗೀಕರಿಸಿ ಬಳಕೆಗೆ ತಕ್ಕಂತೆ ಬಿಲ್ ವಸೂಲಿ ಮಾಡುವುದಕ್ಕೆ ಎಂಬುದರಲ್ಲಿ ಸಂಶಯವಿಲ್ಲ.

ಇನ್ನು ಎರಡನೆಯ ಪ್ರಶ್ನೆ: ಅಷ್ಟೂ ಪಂಪ್‌ಸೆಟ್ಟುಗಳಿಗೆ ಮೀಟರ್ ಅಳವಡಿಸಲು ಕನಿಷ್ಟ 875 ಕೋಟಿ ರೂಪಾಯಿಗಳು ಬೇಕು. ಆ ವೆಚ್ಚವನ್ನು ವಿದ್ಯುತ್ ಸರಬರಾಜು ನಿಗಮಗಳೇ ಹೊರುತ್ತವೆ ಎಂದು ಬಜೆಟ್ಟಿನಲ್ಲಿ ಹೇಳಲಾಗಿದ್ದರೂ ವಿದ್ಯುತ್ ವಿತರಣಾ ಸಂಸ್ಥೆಗಳು ಈಗ ಎದುರಿಸುತ್ತಿರುವ ಆರ್ಥಿಕ ಪರಿಸ್ಥಿತಿಯಲ್ಲಿ ಅದನ್ನು ಹೊರಲು ಸಾಧ್ಯವೆ?

ಈ ಮೀಟರ್ ಹಾಕಲು ಹಣ ಎಲ್ಲಿಂದ ಬರುತ್ತದೆ? ಒಂದು ಅಂದಾಜಿನ ಪ್ರಕಾರ ಎಲ್ಲಾ ಐದು ವಿತರಣಾ ಕಂಪನಿಗಳಿಗೆ ಗೃಹ ಬಳಕೆದಾರರು, ನೀರು ಸರಬರಾಜು, ಬೀದಿ ದೀಪ, ನೀರಾವರಿ ಪಂಪ್ ಸೆಟ್ಟುಗಳ ಬಾಕಿ ಮೊತ್ತವೂ ಸೇರಿ ಒಟ್ಟು 5026 ಕೋಟಿ ರೂಪಾಯಿ ಬಾಕಿ ಇದೆ. ಇದಲ್ಲದೆ ರಿಯಾಯತಿ ದರದಲ್ಲಿ ವಿದ್ಯುತ್ ಸರಬರಾಜು ಮಾಡಲು ಸರ್ಕಾರ ನೀಡಬೇಕಿರುವ ಸಹಾಯಧನದ ಬಾಕಿ, ಗ್ರಾಮ ಪಂಚಾಯತಿಗಳಿಂದ ಬರಬೇಕಾದ ಬಾಕಿ ಎಲ್ಲಾ ಸೇರಿ ಸರ್ಕಾರದಿಂದ 4079 ಕೋಟಿ ರೂ. ಬಾಕಿ ಉಳಿಸಿಕೊಳ್ಳಲಾಗಿದೆ. ಹೀಗಾಗಿ ಈ ಕಂಪನಿಗಳು ಒಟ್ಟು 10000 ಕೋಟಿ ರೂ. ಕೊರತೆಯನ್ನು ಎದುರಿಸುತ್ತಿವೆ.

ಇದರ ಜೊತೆಗೆ ಈಗ ಮೀಟರ್ ಹಾಕಲು ಬೇಕಾದ 875 ಕೋಟಿ ರೂ. ಎಲ್ಲಿಂದ ತರುತ್ತವೆ? ಇದಕ್ಕೆ ಆ ಕಂಪನಿಗಳಿಗೆ ಎರಡೇ ದಾರಿಗಳಿವೆ. ಒಂದು ವಿದ್ಯುತ್ ದರವನ್ನು ಏರಿಸುವುದು, ಎರಡು ಸರ್ಕಾರದಿಂದ ಇನ್ನೂ ಹೆಚ್ಚಿನ ಸಹಾಯ ಧನವನ್ನು ಕೋರುವುದು. ಆದರೆ ಕರ್ನಾಟಕ ವಿದ್ಯುತ್ ಪ್ರಾಧಿಕಾರದ ನಿಯಮಾವಳಿಯ ಪ್ರಕಾರ ಸರ್ಕಾರವು ವಿಶೇಷವಾಗಿ ಕೆಲವು ಗುಂಪುಗಳಿಗೆ ಕಡಿಮೆ ದರವನ್ನು ಘೋಷಿಸಿದರೆ ಅಥವಾ ಆ ಬಗೆಯ ಹೆಚ್ಚುವರಿಯಾಗಿ ವಿದ್ಯುತ್ ಕಂಪನಿಗಳ ಮೇಲೆ ಹೊರೆ ಬೀಳುವ ಕಾರ್ಯಕ್ರಮಗಳನ್ನು ಘೋಷಿಸಿದರೆ ಅದರ ಹೊರೆಯನ್ನು ಸರ್ಕಾರವೇ ಹೊರಬೇಕು. ಹೀಗಾಗಿ ಹೇಗೆ ನೋಡಿದರೂ ಮೀಟರೀಕರಣದ ಹೊರೆಯನ್ನು ಸರ್ಕಾರವೇ ಹೊರಬೇಕಾಗುತ್ತದೆ.

ಆದರೆ ಇದಕ್ಕಾಗಿ ಬಜೆಟ್ಟಿನಲ್ಲಿ ಯಾವುದೇ ವಿಶೇಷವಾದ ಮೊತ್ತವನ್ನು ಎತ್ತಿಟ್ಟಿಲ್ಲವಾದ್ದರಿಂದ ಈಗ ನೀಡಲಾಗಿರುವ 2050 ಕೋಟಿ ರೂ.ನಲ್ಲೇ ಮೀಟರೀಕರಣವೂ ನಡೆಯಬೇಕಿದೆ. ಅಂದರೆ 2050 ಕೋಟಿಯಲ್ಲಿ 875 ಕೋಟಿ ಮೀಟರೀಕರಣಕ್ಕೆ ಹೋದಲ್ಲಿ ಉಳಿಯುವುದು ಕೇವಲ 1175 ಕೋಟಿ ರೂ.ಗಳು ಮಾತ್ರ. ಅಂದರೆ ಸಾರಾಂಶದಲ್ಲಿ ಉಚಿತ ವಿದ್ಯುತ್ತಿಗೆ ಯಾವುದೇ ಹಣ ಉಳಿಯುವುದಿಲ್ಲ!

ಇವೆಲ್ಲಾ ಏಕೆ ಹೀಗೆ ನಡೆಯುತ್ತಿದೆ? 1999ರ ವಿದ್ಯುತ್ ಸುಧಾರಣಾ ಕಾಯಿದೆಯ ಪ್ರಕಾರ 2004ರ ವೇಳೆಗೆ ವಿದ್ಯುತ್ ಕ್ಷೇತ್ರಕ್ಕೆ ನೀಡಲಾಗುತ್ತಿದ್ದ ಸಹಾಯ ಧನವು ರದ್ದಾಗಬೇಕಿತ್ತು. ಹೀಗಾಗಿ 2004ರ ವೇಳೆಗೆ ಮೀಟರಿಂಗ್ ಪ್ರಕ್ರಿಯೆ ಮುಗಿಯಬೇಕಿತ್ತು, ಆದರೆ ಹಾಗಾಗದಿದ್ದರಿಂದ ನಂತರದ 2005-09ರ MTFP ಮತ್ತು 2008-12ರ MTFPಯಲ್ಲಿ ಹೇಗೆ ಕ್ರಮೇಣ ವಿದ್ಯುತ್ ಸಬ್ಸಿಡಿಯನ್ನು ಕಡಿಮೆಮಾಡಬೇಕೆಂದು ಮಾರ್ಗ ಸೂಚಿಯನ್ನು ಹಾಕಿ ಕೊಡಲಾಗಿದೆ. ಅದರ ಪ್ರಕಾರ 2008-09ರ ಸಾಲಿಗೆ ಈ ಸಹಾಯಧನವನ್ನು 2060 ಕೋಟಿಗೂ (ಬಜೆಟ್ಟಿನಲ್ಲಿ 2050 ಕೋಟಿ ನೀಡಲಾಗಿದೆ!) 2009-10ರ ಸಾಲಿಗೆ 1957 ಕೋಟಿ, 2010-11ರ ಸಾಲಿಗೆ 1859 ಕೋಟಿ ಮತ್ತು 2011-12ರ ಸಾಲಿಗೆ 1766 ಕೋಟಿ ರೂ.ಗಳಿಗೆ ಇಳಿಸಬೇಕೆಂದು ಆದೇಶಿಸಲಾಗಿದೆ. ಅಂದರೆ ರಾಜ್ಯ ಆಂತರಿಕ ಉತ್ಪನ್ನದ ಶೇ.0.91ರಷ್ಟಿರುವ ವಿದ್ಯುತ್ ಸಬ್ಸಿಡಿಯನ್ನು 2012 ರ ವೇಳೆಗೆ ಶೇ.0.5ಕ್ಕೆ ಇಳಿಸಬೇಕು ಮತ್ತು ನಂತರದ ಅವಧಿಯಲ್ಲಿ ಶೂನ್ಯಕ್ಕೆ ಇಳಿಸಬೇಕೆಂಬುದೇ ಆದೇಶವಾಗಿದೆ. ಎಲ್ಲಾ ಬಳಕೆದಾರರು - ವಿಶೇಷವಾಗಿ ಬಡ ಮಧ್ಯಮ ವರ್ಗದವರು - ತಾವು ಬಳಸುವ ಸರಕು ಮತ್ತು ಸೇವೆಗಳಿಗೆ ತಗಲುವ ವೆಚ್ಚವನ್ನು ತಾವೇ ಹೊರಬೇಕೆಂಬ ನಿಯಮವನ್ನು ಅನುಸರಿಸುತ್ತಿರುವ ಸರ್ಕಾರ ಹೊಸ ಸಬ್ಸಿಡಿಯನ್ನು ಮತ್ತು ಉಚಿತ ವಿದ್ಯುತ್ತನ್ನು ಕೊಡಲು ಸಾಧ್ಯವೇ?

ಇದು ಸರ್ಕಾರದ ಉಚಿತ ವಿದ್ಯುತ್ ಯೋಜನೆಯ ಹಿಂದಿರುವ ಅಸಲಿಯತ್ತು, ಇದೆಲ್ಲದರ ಅರ್ಥ ಇಷ್ಟೇ: ಮುಖ್ಯಮಂತ್ರಿ ಯಡಿಯೂರಪ್ಪನವರು ಈ ನಾಡಿನ ಜನರಿಗೆ, ಇಲ್ಲಿನ ರೈತರಿಗೆ ಕೊಟ್ಟಿರುವುದು ಬರೀ ಉಚಿತ ಭರವಸೆ, ಅದರ ಹಿಂದಿರುವುದು ಖಚಿತ ಮೋಸ! ■

ಪರಮಾಣು ಒಪ್ಪಂದಕ್ಕಿಂತ ಗಣಿ ಒಪ್ಪಂದ ಮುಖ್ಯ ನನಗೆ

ಥೂತ್ತೇರಿ

ಯಾಹೂ

ನಮ್ಮ ವಿಶ್ವಭಟ್ಟರ ಪತ್ರಿಕೆ ಬಿಜೆಪಿ ಕರಪತ್ರದ ಸ್ಥಾನದಿಂದ ಬಡ್ತಿ ಪಡೆದು, ಚೆಡ್ಡಿಗಳ ದೈನಂದಿನ ವ್ಯವಹಾರದ ಮಾಹಿತಿ ಪತ್ರವಾಗಿ ಹೊರಹೊಮ್ಮ ತೊಡಗಿದೆಯಂತಲ್ಲಾ, ಸ್ವತಃ ವಿಶ್ವಭಟ್ಟ ತನ್ನ ದೈನಂದಿನ ಕೈಂಕರ್ಯದ ಜೊತೆಗೆ ಮೂರ್ಖಮಂತ್ರಿ ಮಹೋದಯರನ್ನು ಮಾತನಾಡಿಸುತ್ತ, ದುರ್ದರ್ಶನ ಮಾಡುತ್ತಾ ಹುಟ್ಟು ಭಟ್ಟಂಗಿಯಂತಾಡುತ್ತಿರಬೇಕಾದರೆ ಆತನ ಕೈಕೆಳಗಿನ ಮಾಣಿಗಳು ಎಡೂರಪ್ಪನ ಅಡಿಗೆಮನೆ, ಬಚ್ಚಲು ಮನೆಯಲ್ಲೆಲ್ಲಾ ತಿರುಗಾಡುತ್ತ ವರದಿ ಮಾಡುತ್ತಿವೆಯಂತಲ್ಲಾ, ಇದಕ್ಕೊಂದು ಸ್ಯಾಂಪಲ್ ಎಂದರೆ ಕಳೆದ ಜುಲೈ ಗುರುವಾರದಂದು ಎಡೂರಪ್ಪ ಎಂದಿನಂತೆ ಸ್ನಾನ ಮಾಡಿ, ಹಲ್ಲುಜ್ಜಿ ಮುಖ ತೊಳೆದು, ದೇವರಪೂಜೆಗೆ ಕುಳಿತರಂತೆ. ಪೂಜೆ ಮಾಡಿದ ನಂತರ ತಿಂಡಿಗೆ ಕುಳಿತರಂತೆ. ಇಡ್ಲಿ ಮುರಿದು, ಚಟ್ನಿ ಅದ್ದಿ, ಬಾಯಿಗಿಡಬೇಕಾದರೆ ಶಾಸಕನೊಬ್ಬ ಕಾಣಿಸಿಕೊಂಡನಂತೆ. ಆತ ಚೆಡ್ಡಿಯಲ್ಲದ ಕಾರಣ ಎಡೂರಪ್ಪ ಚೆಡ್ಡಿಯೊಳಕ್ಕೆ ಚೊಣಚ ಹೊಕ್ಕಂತೆ ಆಡಿದರಂತೆ! ಥೂತ್ತೇರಿ!

* * * *

ಸಾಹಿತ್ಯ ಲೋಕದ ರಾಜಕಾರಣ ನಮ್ಮ ಹಂಪಾನ ಕಾಲವನ್ನು ನೆನೆಸಿಕೊಳ್ಳುವಂತೆ ಮಾಡಿದೆಯಂತಲ್ಲಾ. ಅತ್ತ ಕ್ರಾಂತಿಕಾರಿ ವೀರಣ್ಣ ಇತ್ತ ಜೆಡಿಎಸ್ ಕಾರ್ಯಕರ್ತನಂತೆ ಕಾಣುವ ನಲ್ಲೂರು ಪ್ರಸಾದ್ ತಾವು ಆಯ್ಕೆಯಾದ ನಂತರ ಕಡಿದು ಕಟ್ಟಿ ಹಾಕುವ ಕರಪತ್ರದೊಂದಿಗೆ ಓಡಾಡುತ್ತಿದ್ದಾರಂತಲ್ಲಾ, ಈ ಮಧ್ಯೆ ಕೊಟ್ಟೂರು ಕಡೆಯ ಕುಂವೀರಭದ್ರಪ್ಪ ಅರಮನೆ ಕಾದಂಬರಿ ಹಿಡಿದು, ಯಾರ್‍ಯಾರು ಓದಿಲ್ಲವೊ ಅವರಿಗೆಲ್ಲಾ ಓದಿ ಹೇಳುತ್ತಿರುವುದಲ್ಲದೆ "ಈ ಅರಮನೆ ಕೃತಿ ಸುಮ್ಮನೆ ಕುಳಿತು ಬರೆದದ್ದಲ್ಲ, ಪ್ರಶಸ್ತಿಗಾಗಿಯೇ ಬರೆದದ್ದು, ಹಾಗೆ ಪ್ರಶಸ್ತಿ ಬರುತ್ತದೆಂದು ಸುಮ್ಮನೆ ಕೂರಲಾಗುವುದಿಲ್ಲ, ಪ್ರಶಸ್ತಿಯಲ್ಲಿನ ಆಯ್ಕೆ ಸಮಿತಿಯ ಮೇಧಾವಿಗಳಿಗೆ ಫೋನ್ ಮಾಡಬೇಕಾಗುತ್ತದೆ. ನಾನೂ ಕೂಡ ಅಂತಹ ಕೆಲಸ ಮಾಡಿದೆ. ಏಕೆಂದರೆ ನನ್ನ ಹೆಂಡತಿಗೆ ನನಗೆ ಪ್ರಶಸ್ತಿ ಗ್ಯಾರಂಟಿ ಬರುತ್ತೆ, ನನ್ನ ಜೊತೆ ಸನ್ಮಾನಕ್ಕೆ ನೀನು ರೆಡಿಯಾಗಿರಬೇಕು. ಇದರ ಪ್ರಶಸ್ತಿ ಸಿಗುವುದು ಡೆಲ್ಲಿಯಲ್ಲಿ ಎಂದು ಕಾದಂಬರಿಯನ್ನು ಅರ್ಧ ಬರೆದಿರುವಾಗಲೇ ನನ್ನ ಅರ್ಧಾಂಗಿಗೆ ಹೇಳಿದ್ದೆ" ಎಂದಿದ್ದಾರಂತಲ್ಲಾ, ಥೂತ್ತೇರಿ!!

* * * *

ಈ ಪರಮಾಣು ಒಪ್ಪಂದದ ರಹಸ್ಯವೇನು? ಇದರಲ್ಲಿ ದೇಶದ ಉನ್ನತಿ ಅಡಗಿದೆಯೋ ಅಥವಾ ಅವನತಿ ಅಡಗಿದೆಯೋ? ಎಂಬ ಅಂಶವನ್ನು ತಿಳಿದುಕೊಳ್ಳ ಬೇಕಾದರೆ ಯಾರನ್ನಾದರೂ ಮಾತನಾಡಿಸಬೇಕೆನಿಸಿತಲ್ಲಾ, ಆ ಕೂಡಲೇ ನೆನಪಿಗೆ ಬಂದ ಧೀಮಂತ ನಾಯಕರೆಂದರೆ ನಮ್ಮ ಮಾಜಿ ಪ್ರಧಾನಿಗಳಾದ ದೇವೇಗೌಡರು. ಕೂಡಲೇ ಫೋನ್ ಮಾಡಲಾಗಿ ಸಿಕ್ಕೇಬಿಟ್ಟರು.



"ನಮಸ್ಕಾರ ಸಾರ್, ನಾನು ಯಾಹು."

"ನಮಸ್ಕಾರ ಯಾಹು ಅವ್ರೆ. ನಾನು ದತ್ತ, ಗೌಡ್ರು ತಿಂಡಿ ತಿಂತಾ ಇದಾರೆ."

"ಬೆಳಿಗ್ಗೆನೆ ಗೌಡ್ರು ಒಂಟಿ ಬ್ರಾಹ್ಮಣನ್ನ ನೋಡಲ್ಲವಂತಲ್ಲಾ ಸಾರ್?"

"ನನ್ನ ಜೊತೆ ಹಾಸನದ ಇನ್ನೊಬ್ಬ ಬ್ರಾಹ್ಮಣ ರಾಜಕಾರಣಿ ಇದ್ರು."

"ಅಂಗಿದ್ರೆ ಸರಿ, ಗೌಡ್ರಿಗೆ ಫೋನ್ ಕೊಡ್ತಿರಾ?"

"ಆಯ್ತು ಕೊಟ್ಟೆ."

"ಹಲೋ?"

"ನಾನು ಸಾರ್ ಯಾಹು. ಒಂದೆರಡು ಮಾತಾಡಬೇಕು."

"ಅದೇನು ಹೇಳಿ?"

"ಈ ಅಣುಒಪ್ಪಂದದ ಸಾಧಕ ಬಾಧಕ ಹೇಳಿ ಸಾರ್."

"ಏನಾಗಬೇಕೊ ಅದಾಗುತ್ತೆ, ನೀವೇಕೆ ತಲೆ ಕೆಡಿಸಿಕೊಳ್ತೀರೀ?"

"ರಾಷ್ಟ್ರದ ಮುಂದಿನ ಭವಿಷ್ಯದ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಲ್ಲವ ಸಾರ್?"

"ತಲೆ ಕೆಡಿಸಿಕೊಳ್ಳಬೇಕಾದವರು ಈ ರಾಷ್ಟ್ರದ ಜವಾಬ್ದಾರಿ ಹೊತ್ತಂತಹ ಜನ. ಅವ್ರುಗಳೇ ಕೆಡಿಸ್ಕಂಡ್ ಇದಾರೆ."

"ಅದ ಸಾರ್, ಪರ ಇದ್ದೋರ ವಾದ ಸರಿನೊ, ವಿರೋಧಿಗಳ ವಾದ ಸರಿನೊ?"

"ನಾನು ಅದನ್ನೆಲ್ಲಾ ಈಗ ಬಿಡಿಸಿ ಹೇಳಕ್ಕೋಗೋದಿಲ್ಲ, ಅದರಿಂದ ಏನೂ ಪ್ರಯೋಜನ ಇಲ್ಲ, ನನ್ನ ಮುಂದಿನ ಕೆಲಸ ಏನೂ ಅಂದ್ರೆ ಹಾವೇರಿ ಗೋಲಿಬಾರಲ್ಲಿ ಸತ್ತವನ ಕುಟುಂಬ ನೋಡಿ ಸಾಂತ್ವನ ಹೇಳೋದು."

"ಒಳ್ಳೆ ತೀರ್ಮಾನ ಸಾರ್. ಗಾಂಧೀಜಿ ಕೂಡ ನಿಮ್ಮ ತರಹ ಯೋಚನೆ ಮಾಡುತಿದ್ರು. ರಾಷ್ಟ್ರದ ಬಗ್ಗೆ ಯೋಚನೆ ಜೊತೆಗೆ ಆಡಿನ ಆರೋಗ್ಯನೂ ವಿಚಾರಸುತಿದ್ರು."

"ಆಡಿನ ಹಾಲು ಕುಡಿತಿದ್ದ ಅವರಿಗೆ ಅದರ ಆರೋಗ್ಯದ ವಿಷಯವೂ ಮುಖ್ಯ ಅಲ್ಲವೆ?"

"ನಿಮ್ಮ ಈ ಅಭಿಪ್ರಾಯದಿಂದ ನನಿಗೇನೊ ಹೊಳಿತು ಸಾರ್."

"ಏನು ಹೊಳಿತು?"

"ನಿಮ್ಮ ಕಾರ್ಯಕ್ಷೇತ್ರ!"

"ನಾನು ಕಷ್ಟದಲ್ಲಿರೊ ಕಾಂಗ್ರಸ್ಸಿಗರಿಗೆ ಸಹಾಯ ಮಾಡೋಣ ಅಂತ ಯೋಚನೆ ಮಾಡಿದ್ರೆ, ಆ ಪಾರ್ಟಿ ಮಹಾ ನಾಯಕರು ಕಾಂಗ್ರೆಸ್ ಬಿಡತಾರಂತೆ ನೋಡಿ ಹೋಗಿದೆ?"

"ಬಜೆಪಿಯ ಮೂಲ ಮನಸ್ಸು ಮತ್ತು ಅಮೆರಿಕದ ದೂರಾಲೋಚನೆಗಳಿಗೂ ಸಾಮ್ಯ ಇದ್ರು, ಇವುರೇಕೆ ಸಾರ್ ವಿರೋಧಿಸ್ತಾಯಿದಾರೆ?"

"ಯಾವ ದೇವೇಗೌಡನಿಂದ ಉನ್ನತ ಸ್ಥಾನಗಳನ್ನು ಅನುಭವಿಸಿದ್ರೊ ಅಂತ ಮಹಾನುಭಾವರು ತಮ್ಮ ಹಿನ್ನೆಲೆ ಬಗ್ಗೆ ಯೋಚನೆ ಮಾಡೋದು ಒಳ್ಳೆದು!"

"ಅಣು ಒಪ್ಪಂದದ ವಿಷಯದಲ್ಲಿ ಈ ತರ ಆಡ್ತಾಯಿರೊ ಬಜೆಪಿಗಳು ಅಮೆರಿಕದ ಬುಶನ್ನು ಹಾಡಿ ಹೊಗಳಿದ್ರಲವ ಸಾರ್?"

"ಹೊಗಳಿದ್ರು. ಇದೇ ಸಿಂಧ್ಯಾ ನನ್ನನ್ನ ನನ್ನ ಮಕ್ಕಳನ್ನ ಹಾಡಿ ಹೊಗಳತಿದ್ದ. ಇವತ್ತು ಆತನ ಪರಿಸ್ಥಿತಿ ಏನಾಗಿದೆ? ಸಾಕಿದ ನಾಯಿಗಳು ಕಾಲುಕಚ್ಚಿ ದೂರ ಹೋದೊ. ಈಗ ಅವುಗಳ ಸ್ಥಿತಿ ಏನಾಗಿದೆ ಎಂಬತಕ್ಕಂತದನ್ನು ಇಡೀ ಕರ್ನಾಟಕದ ಜತನೆ ನೋಡ್ತಾಯಿದೆ."

"ಮಾಜಿ ಪ್ರಧಾನಿ ವಾಜಪೇಯಿ ಕೂಡ ಪರಮಾಣು ಒಪ್ಪಂದದ ಪರ ಇದ್ದರಂತೆ. ಮಾಜಿ ಪ್ರಧಾನಿಗಳಾದ ತಾವು ಸಾರ್?"

"ನಮ್ಮ ನಿಲುವು ತಿಳಸೊ ಅಗತ್ಯ ಇಲ್ಲ, ನಮ್ಮ ನಿಲುವು ಏನು ಅಂತ ಹೇಳಿದ ಕೂಡಲೇ ಹಾಸನ ಮೈಸೂರು ಕಡೆ ನಾಯಕರೆಲ್ಲಾ ಬೇರೆ ಪಾರ್ಟಿ ಕಡೆ ನೋಡ್ತಾಯಿದಾರೆ."

"ಅವರ ತೀರ್ಮಾನ ಸರಿಯಲ್ಲವ ಸಾರ್?"

"ಸರಿಯೋ ತಪ್ಪೊ, ಯಾವ ದೇವೇಗೌಡನಿಂದ ಉನ್ನತ ಸ್ಥಾನಗಳನ್ನು ಅನುಭವಿಸಿದ್ರೊ ಅಂತ ಮಹಾನುಭಾವರಿಗೆಲ್ಲಾ ಈ ದೇವೇಗೌಡ ಹೆದರಲ್ಲ."

"ನಾನು ಪರಮಾಣು ವಿಷಯ ತಿಳಕಳ್ಳೆ ಫೋನ್ ಮಾಡಿದ್ದೆ ಸಾರ್."

"ಪರಮಾಣು ವಿಷಯ ಇರ್ಲಿ, ಬಳ್ಳಾರಿ ಗಣಿ ಜನಗಳಿಂದ ಆಗ್ತಾಯಿರತಕ್ಕಂತಹ ಅನಾಹುತಗಳ ಬಗ್ಗೆ ನಾನು ಯೋಚನೆ ಮಾಡಬೇಕಾಗಿದೆ."

"ಬಾಲಕೃಷ್ಣೇಗೌಡ, ಡಾ. ರಮೇಶ್ ಗಣಿಗಾರಿಕೆ ನಿಲ್ಸಿದ್ರ ಸಾರ್?"

"ಅವ್ರುನ್ನೇ ಕೇಳಿ."

"ಥೂತ್ತೇರಿ!!! ■

ಪ್ರಳಯ ಆಗುತ್ತೋ ಇಲ್ಲವೊ, ಶಿರಡಿ ಬಾಬಾನ ಕೈಕಾಲು ಆಡುತ್ತೋ ಇಲ್ಲವೋ! ಆದರೆ ನಮ್ಮ ಮನೇಲಿ ಬಾಬಾ ಎಡಗಣ್ಣು ತೆರೆದು ಕೂತವ್ನೆ ಎಂದು ಬೊಂಬಡ ಬಜಾಯಿಸುತ್ತಾ, ಸಾಕ್ಷಾತ್ ಭಕ್ತ ಮಾರ್ಕಂಡೇಯನ ತುಂಡಿನಂತಾಡುತ್ತಿರುವ 'ಪಾರ್ಟ್ ಟೈಂ ಫ್ರಾಡ್' ಬಾಬು ಎಂಬಾತನ ಜೋಳಿಗೆಯಂತೂ ಖಂಡಿತಾ ತುಂಬುತ್ತಿದೆ. ಜನ ಹುಚ್ಚೋ ಸಂತೆ ಹುಚ್ಚೋ ಎಂಬಂತೆ ಕಳೆದ ನಾಲ್ಕು ದಿನಗಳಿಂದ ಬಾಬಾನ ದರ್ಶನಕ್ಕೆಂದು ಬರುತ್ತಿರುವ ಭಕ್ತಾದಿಗಳು ನೀಡುತ್ತಿರುವ ಕಾಣಿಕೆಯನ್ನು ತನ್ನೆರಡೂ ಕೈಗಳಿಂದ ಬಾಬು ಬಾಚಿಕೊಳ್ಳುತ್ತಿದ್ದಾನೆ. ಒಟ್ಟಿನಲ್ಲಿ ಭಕ್ತ ಬಾಬುವಿನ ಇಕ್ಕಟ್ಟು ಮನೆ ಈಗ ಪುಣ್ಯಕ್ಷೇತ್ರವಾಗಿ ಪಕ್ಕದ ಪುರಾತನ ಗವಿಗಂಗಾಧರೇಶ್ವರ ದೇವಸ್ಥಾನದ ಖ್ಯಾತಿಯನ್ನೇ ಮೀರಿಸಿಬಿಟ್ಟಿದೆ.

ಬಾಬಾ ಒಕ್ಕಣ್ಣ ಬಾಬು ಮುಕ್ಕಣ್ಣ





ಫೆನಾಯಿಲ್ ಬಾಬು

"ಇನ್ನೇನು ಪ್ರಳಯ ಹತ್ತಿರಕ್ಕೆ ಬಂದಿದೆ. ಎಲ್ಲಾ ಬಿಟ್ಟು ಬಾಬಾ ಎಡಗಣ್ಣು ಬಿಡೋದು ಅಂದ್ರೆ ಏನರ್ಥ? ಇದ್ಯಾವುದೋ ಅನಿಷ್ಟಕ್ಕೆ ಮುನ್ಸೂಚನೆಯೇ ಸರಿ." "ಅಯ್ಯೋ ಹಾಗೇನೂ ಇಲ್ಲಾರಿ. ಗುರು ಪೌರ್ಣಿಮೆ ದಿನ ಬಾಬಾ ಕಣ್ತೆರೆದಿರೋದು ಶುಭಶಕುನ. ಇನ್ನೊಂದೆರಡ್ ದಿನದಲ್ಲಿ ಬಲಗಣ್ಣೂ ತೆರೆಯುತ್ತೆ. ಆಮೇಲೆ ಕೈಕಾಲು ಆಡಕ್ಕೆ ಶುರು ಆಗುತ್ತೆ ನೋಡ್ತಿರಿ....!"

ಕಳೆದ ನಾಲ್ಕು ದಿನಗಳ ಹಿಂದೆ ಬೆಂಗಳೂರಿನ ಗವಿಪುರಂ ಗುಟ್ಟಹಳ್ಳಿಯ ಮನೆಯೊಂದರಲ್ಲಿದ್ದ ಶಿರಡಿ ಸಾಯಿಬಾಬಾನ ವಿಗ್ರಹದ ಎಡಗಣ್ಣು ತೆರೆದಿದೆ ಎಂಬ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿ ಆ ಮನೆಯ ಮುಂದೆ ದರ್ಶನಕ್ಕೆಂದು ಗಂಟೆಗಟ್ಟಲೆ ಕಾದು ನಿಂತಿರುವ ಜನರ ಹಿಂದಿನಿಂದ ಕೇಳಿಬಂದ ಮಾತುಗಳ ಸ್ಯಾಂಪಲ್ ಇದು.

ಪ್ರಳಯ ಆಗುತ್ತೋ ಇಲ್ಲವೊ, ಶಿರಡಿ ಬಾಬಾನ ಕೈಕಾಲು ಆಡುತ್ತೋ ಇಲ್ಲವೋ! ಆದರೆ ನಮ್ಮ ಮನೇಲಿ ಬಾಬಾ ಎಡಗಣ್ಣು ತೆರೆದು ಕೂತವ್ನೆ ಎಂದು ಬೊಂಬಡ ಬಜಾಯಿಸುತ್ತಾ, ಸಾಕ್ಷಾತ್ ಭಕ್ತ ಮಾರ್ಕಂಡೇಯನ ತುಂಡಿನಂತಾಡುತ್ತಿರುವ 'ಪಾರ್ಟ್ ಟೈಂ ಫ್ರಾಡ್' ಬಾಬು ಎಂಬಾತನ ಜೋಳಿಗೆಯಂತೂ ಖಂಡಿತಾ ತುಂಬುತ್ತಿದೆ.



ಜನ ಹುಚ್ಚೋ ಸಂತೆ ಹುಚ್ಚೋ ಎಂಬಂತೆ ಕಳೆದ ನಾಲ್ಕು ದಿನಗಳಿಂದ ಬಾಬಾನ ದರ್ಶನಕ್ಕೆಂದು ಬರುತ್ತಿರುವ ಭಕ್ತಾದಿಗಳು ನೀಡುತ್ತಿರುವ ಕಾಣಿಕೆಯನ್ನು ತನ್ನೆರಡೂ ಕೈಗಳಿಂದ ಬಾಬು ಬಾಚಿಕೊಳ್ಳುತ್ತಿದ್ದಾನೆ.

ಇದೆಲ್ಲ ಶುರುವಾಗಿದ್ದು ಜುಲೈ 18ರಂದು. ಗವಿಪುರಂ ಗುಟ್ಟಹಳ್ಳಿಯ ಹರಿಹರನ ಗುಡ್ಡದ ಕೆಳಗಿರುವ ಪ್ರಾಚೀನ ಗವಿ ಗಂಗಾಧರೇಶ್ವರ ದೇವಾಲಯದ ಹಿಂಭಾಗದ ಲಕ್ಷ್ಮಿ ವೆಂಕಟೇಶ್ವರ ಕಲ್ಯಾಣ ಮಂಟಪದ ಪಕ್ಕದ ಔಟ್‌ಹೌಸ್‌ನಲ್ಲಿ ಈ ಭಕ್ತ ಬಾಬು ಕುಟುಂಬ ವಾಸವಾಗಿದೆ. ಈ ಕುಟುಂಬ ಅನೇಕ ವರ್ಷಗಳಿಂದ ಶಿರಡಿ ಸಾಯಿ ಭಕ್ತರೆಂಬುದೇನೋ ನಿಜ. ಆದರೆ ತನ್ನ ಸಾವಿರಾರು ಭಕ್ತರನ್ನು ಬಿಟ್ಟು ಬೆಂಗಳೂರಿನ ಈ ಫ್ರಾಡ್ ಬಾಬು ಎಂಬಾತನ ಮನೆಯನ್ನೇ ಏಕೆ ಶಿರಡಿ ಸಾಯಿಬಾಬಾ ಆರಿಸಿಕೊಂಡ ಎಂದು ತಲೆಕೆಡಿಸಿಕೊಂಡರೆ, ಕೆಲ ನಿಗೂಢ ಸಂಗತಿಗಳು ಗೋಚರಿಸುತ್ತವೆ.

■ ರಾ. ಸೋಮನಾಥ್

ಎ. ಬಾಬು ಉರ್ಫ್ ಫೆನಾಯಿಲ್ ಬಾಬು ಅಲಿಯಾಸ್ ಆಳ್ವಾಟ್ ಬಾಬುವೇ ಹೇಳಿಕೊಂಡಂತೆ ಆತ ಇಲ್ಲಿಗೆ ನಾಲ್ಕು ತಿಂಗಳ ಹಿಂದೆ ಮಹಾರಾಷ್ಟ್ರದ ಶಿರಡಿಗೆ ಹೋಗಿ ಬಾಬಾನ ಅಮೃತಶಿಲೆಯ ಪುಟ್ಟ ವಿಗ್ರಹವನ್ನು ತಂದಿದ್ದ. ಹಾಗೇ ತಂದವನು ಅದನ್ನು ಮೊನ್ನೆ ಗುರುಪೂರ್ಣಿಮೆಯತನಕ ಡಬ್ಬದಿಂದ ತೆಗೆದೇ ಇರಲಿಲ್ಲವಂತೆ. ಗುರುಪೂರ್ಣಿಮೆಯ ದಿನ ವಿಗ್ರಹವನ್ನು ಹೊರತೆಗೆದು ಪ್ರತಿಷ್ಠಾಪಿಸಿ ಪೂಜೆಯ ನಂತರ ಬಾಬು ಎಲ್ಲೋ ಹೊರಗೆ ಹೋದನಂತೆ. ಹಿಂದಿರುಗಿ ಬರುವಷ್ಟರಲ್ಲಿ ಬಾಬಾ ಎಡಗಣ್ಣು ಬಿಟ್ಟಿದ್ದನಂತೆ! ಆನಂತರ ಶುರುವಾಗಿದ್ದೇ ಬಾಬು ಮನೆ ಮುಂದೆ ಭಕ್ತರ ಜಾತ್ರೆ.

ಯಾವುದೋ ಚಂದಮಾಮಾ ಕತೆಯಂತಿರುವ ಇದನ್ನು ನಂಬಿದ ಭಕ್ತಾದಿಗಳೇನೂ ಸುಮ್ಮನೇ ಬರುತ್ತಾರ? ತಮ್ಮ ಶಕ್ತ್ಯಾನುಸಾರ ಹತ್ತರಿಂದ ಐನೂರು ರೂಪಾಯಿತನಕ ದಕ್ಷಿಣೆ ಹಾಕಿ, ಕೈಮುಗಿದು ಭಾವಪರವಶರಾಗಿದ್ದಾರೆ. ಕಳೆದ ನಾಲ್ಕು ದಿನಗಳಿಂದ ಕಮ್ಮಿಯೆಂದರೂ ಇಪ್ಪತ್ತೈದು ಸಾವಿರ ಮಂದಿ ಗಂಟೆಗಟ್ಟಲೇ ಸಾಲಲ್ಲಿ ನಿಂತು ಬಾಬಾನ ದರ್ಶನ ಪಡೆದಿದ್ದಾರೆ. ಬೆಳಿಗ್ಗೆ ಆರೂವರೆಯಿಂದ ಶುರುವಾಗಿ ರಾತ್ರಿ ಒಂದರತನಕ ಜನ ಕಾಡಿಬೇಡಿ ದರ್ಶನ ಮಾಡುವುದು, ಬಂದವರು ಆರತಿ ಬೆಳಗಿ ಕಾಯಿ ಒಡೆಯುವುದು, ವಿಗ್ರಹದ ಎದುರೇ ಕಾಣಿಕೆ ಹುಂಡಿ, ಅದರೊಳಗೆ ಕಂಗೊಳಿಸುವ ನೋಟಿನ ರಾಶಿ, ಇನ್ನೂ ಕೆಲವರು ಶಿರಡಿ ಸಾಯಿಬಾಬಾ ಕೀ... ಜೈ ಎಂದು ಜೈಘೋಷ ಹಾಕುವುದು, ಬಂದ ಭಕ್ತಾದಿಗಳಿಗೆ ಬಾಳೆಹಣ್ಣು ಹೂವು, ಕರ್ಪೂರ, ತಿಂಡಿ, ಕಾಫಿ ಮಾರಲೆಂದೇ ಚಿಕ್ಕಪುಟ್ಟ ಅಂಗಡಿಗಳು; ಒಂದೇ ಎರಡೆ?



ಬಂದ ಇಪ್ಪತ್ತೈದು ಸಾವಿರದಷ್ಟು ಭಕ್ತಸಾಗರದಲ್ಲಿ ಐನೂರು ಹಾಕಿದವರೂ ಉಂಟು. ಹತ್ತು ರೂಪಾಯಿ ಕೊಟ್ಟವರೂ ಉಂಟು. ಸರಾಸರಿ ಓರ್ವ ಭಕ್ತಾದಿಗೆ ಐವತ್ತರಂತೆ ಲೆಕ್ಕವಿಟ್ಟರೂ ಅದು ಹನ್ನೆರಡೂವರೆ ಲಕ್ಷದಷ್ಟಾಗುತ್ತದೆ. ಜೊತೆಗೆ ಎಡಗಣ್ಣು ತೆರೆದು ಕೂತ ಬಾಬಾ ಫೋಟೋವನ್ನು ಕಂತೆಗಟ್ಟಲೇ ಅಚ್ಚು ಹಾಕಿಸಿದ ಬಾಬು ಬಂಟರು ಅದನ್ನು ಇಪ್ಪತ್ತು ರೂಪಾಯಿಗೊಂದರಂತೆ ಮಾರುತ್ತಾರೆ. ಒಟ್ಟಿನಲ್ಲಿ ಭಕ್ತ ಬಾಬುವಿನ ಇಕ್ಕಟ್ಟು ಮನೆ ಈಗ ಪುಣ್ಯಕ್ಷೇತ್ರವಾಗಿ ಪಕ್ಕದ ಪುರಾತನ ಗವಿಗಂಗಾಧರೇಶ್ವರ ದೇವಸ್ಥಾನದ ಖ್ಯಾತಿಯನ್ನೇ ಮೀರಿಸಿಬಿಟ್ಟಿದೆ.

ಇಷ್ಟೆಲ್ಲಕ್ಕೂ ಕಾರಣಕರ್ತನಾದ ಈ ಬಾಬುವಿನ ಕುಖ್ಯಾತಿ, ಆತನ ಸುತ್ತ ಠಳಾಯಿಸುವ ಪೋರ್ಕಿ ಗ್ಯಾಂಗ್, ಬಾಬಾನ ವಿಗ್ರಹ ಕಣ್ಣುಬಿಟ್ಟಿದೆ ಎಂದು ಸುದ್ದಿ ಹಬ್ಬಿದ ಬೆನ್ನಲ್ಲೇ ಪ್ರಿಂಟಾಗಿ ಬಂದ ಸಾವಿರಾರು ಫೋಟೋಗಳು, ಇದ್ದಕ್ಕಿದ್ದಂತೆ ಭಕ್ತಾದಿಗಳ ನಿಯಂತ್ರಣಕ್ಕೆಂದು ಜಮೆಗೊಂಡ ಬಾಬು ಸಂಬಂಧಿ ಬಳಗ, ಅವರ ವರ್ತನೆ, ಎಲ್ಲವೂ ಇಂಥದೊಂದು ಕುಚೋದ್ಯದ ಹಿಂದಿನ ಪೂರ್ವ ತಯಾರಿಯನ್ನು ಎತ್ತಿ ತೋರಿಸುತ್ತಿವೆ. ಈ ಬಾಬು ಸದ್ಯ ಬಿಜೆಪಿ ನಾಯಕ ಅನಂತಕುಮಾರ್ ಶಿಷ್ಯ. ಬಸವನಗುಡಿಯ ಮಾಜಿ ಶಾಸಕ ಕೆ. ಚಂದ್ರಶೇಖರ್ ಜೊತೆಗೂ ಒಡನಾಟವಿದೆ. ಕಳೆದ ಚುನಾವಣೆಯಲ್ಲಿ ಎಲ್ಲಾ ಪಕ್ಷಗಳ

▶▶▶12

ಫೆನಾಯಿಲ್ ಬಾಬು ಎಂಬ ಪಾಖಂಡಿ

ಇಲ್ಲಿಗೆ ಹತ್ತು ವರ್ಷದ ಹಿಂದೆ ಹನುಮಂತನಗರದ ಮಾರುತಿ ಸರ್ಕಲ್‌ನಲ್ಲಿ ಪುಟ್ಟದೊಂದು ಗ್ಯಾರೇಜ್ ಇಟ್ಟುಕೊಂಡಿದ್ದ ಬಾಬು ಸ್ವಭಾವತಃ ವಿಚಿತ್ರ ವ್ಯಕ್ತಿ. ಹಲವರಿಗೆ ಗ್ಯಾರೇಜ್ ಬಾಬು, ಕೆಲವರಿಗೆ ಮೆಕ್ಯಾನಿಕ್ ಬಾಬು, ಅನೇಕರಿಗೆ ಫೆನಾಯಿಲ್ ಬಾಬು, ಮರಾಠಿ ಬಾಬು, ಆಳ್ವಾಟಿ ಬಾಬು, ಬಂಡಲ್ ಬಾಬು... ಹೀಗೆ ಅನುಕೂಲಕ್ಕೆ ತಕ್ಕಂತೆ ವೃತ್ತಿ ಪ್ರವೃತ್ತಿ ಪಾರ್ಟಿ-ವೇಷ ಭೂಷಣಗಳನ್ನು ಬದಲಾಯಿಸುತ್ತಾನೆ. ಈತನ ಬಗ್ಗೆ ಗುಟ್ಟಹಳ್ಳಿ, ಗಾಂಧಿಬಜಾರ್, ಚಾಮರಾಜಪೇಟೆಯ ಯಾರಲ್ಲೂ ಒಳ್ಳೆಯ ಮಾತಿಲ್ಲ. ಈತನ ತಂದೆ ಅನಂತಪ್ಪ ಪಾಲಿಕೆ ಗ್ಯಾಂಗ್‌ಮನ್ ಆಗಿದ್ದ. ಪ್ರಾರಂಭದಲ್ಲಿ ಆಟೋ ಓಡಿಸಿಕೊಂಡಿದ್ದ ಬಾಬು ವಿಧಾನಸೌಧದಲ್ಲಿ ಪೀವನ್ ಆಗಿದ್ದ ಲಕ್ಷ್ಮಿ ಎಂಬ ಗೌಡರ ಹೆಣ್ಣನ್ನು ಪ್ರೀತಿಸಿ ಮದುವೆಯಾದ. ಆಕೆಯಿಂದ ಸ್ಪೀಕರ್‌ಗೆ ಹೇಳಿಸಿ ವಿಧಾನಸೌಧ, ಶಾಸಕರ ಭವನಗಳಿಗೆ ಫೆನಾಯಿಲ್ ಸರಬರಾಜಿಗೆ ನಿಂತು ತನ್ನ ಗ್ಯಾರೇಜನ್ನು ಇನ್ನಾರಿಗೋ ಬಾಡಿಗೆಗೆ ಬಿಟ್ಟ.

ಬಂಗಾರಪ್ಪ ಕೆಸಿಪಿ ಎಂಬ ಪಾರ್ಟಿ ಕಟ್ಟಿದ್ದಾಗ ಏಕಾಏಕಿ ಬಳಿಖಾದಿ ತೊಟ್ಟವನು ಕಾಲಕ್ರಮೇಣ ವಿಧಾನಸೌಧದಲ್ಲಿ ಡ್ರೈವರ್ ಕೆಲಸ ಕೊಡಿಸ್ತೀನಿ, ಅಟೆಂಡರ್ ಕೆಲಸ ಕೊಡಿಸ್ತೀನಿ ಎಂದು ಅನೇಕರಿಂದ ದುಡ್ಡು ಕಿತ್ತ ಗ್ಯಾರೇಜು ಕೈಹತ್ತಲಿಲ್ಲ, ಫೆನಾಯಿಲ್ ದಂಧೆ ಬರಕತ್ತಾಗಲಿಲ್ಲ, ವಿಧಾನಸೌಧದಲ್ಲಿ ಡ್ರೈವರ್, ಅಟೆಂಡರ್ ಕೆಲಸಕ್ಕೆಂದು ದುಡ್ಡು ಕೊಟ್ಟವರು ಬಿಡಬೇಕಲ್ಲ?

ಅಲ್ಲಿಗೆ ಕೆಸಿಪಿಗೆ ಟಾಟಾ ಹೇಳಿದ ಬಾಬು ಕಾಂಗ್ರೆಸ್ ಸೇರಿ ಮಾಜಿ ಮೇಯರ್ ನಾರಾಯಣಸ್ವಾಮಿಯ ಛೇಲಾಗಿರಿ ಮಾಡಿಕೊಂಡಿದ್ದ. ಕಾಂಗ್ರೆಸ್ ತೊರೆದು ನಾರಾಯಣಸ್ವಾಮಿ ಜೆಡಿಎಸ್ ಸೇರಿಕೊಂಡಾಗಲೂ ಬಾಬು ಜೊತೆಗೇ ಇದ್ದ. ಆದರೆ ಒಳಗೊಳಗೇ ಎಮ್ಮೆಲ್ಲೆ ಎಲೆಕ್ಷನ್ನಿಗೆ ನಿಂತಿದ್ದ ಮಾಜಿ ಮೇಯರ್ ಚಂದ್ರಶೇಖರ್‌ಗೆ ಮಾಹಿತಿ ಕೊಡುತ್ತಿದ್ದ. ಅದಕ್ಕೆ ಪ್ರತಿಯಾಗಿ ಎಮ್ಮೆಲ್ಲೇ ಚಂದ್ರಶೇಖರ್ ತಾವೇ ಇಟ್ಟಿಗೆ ಸಿಮೆಂಟು ಕೊಡಿಸಿ ಗೋಸಾಯಿ ಮಠದ ಜಮೀನಿನಲ್ಲಿ ಬಾಬುಗೊಂದು ಮನೆ ಕಟ್ಟಿಕೊಳ್ಳಲು ಕುಮ್ಮಕ್ಕು ಕೊಟ್ಟರು. ಅದಕ್ಕೂ ಮುನ್ನ ಕೆಲಕಾಲ ಬಿಜೆಪಿಯ ಸುಬ್ಬಾರೆಡ್ಡಿಗೂ ಬಾಬು ಜಿಂದಾಬಾದ್ ಹೇಳಿಕೊಂಡಿದ್ದ. ಜಮೀನಿಗೆ ವಕ್ಕರಿಸಿದವರ ವಿರುದ್ಧ ಗೋಸಾಯಿ ಮಠದವರು ಕೋರ್ಟಿಗೆ ಮೊರೆಯಿಟ್ಟರೆ ಬಾಬು ಗವಿಗಂಗಾಧರೇಶ್ವರ ದೇವಸ್ಥಾನದ ಪಾಖಂಡಿ ಅರ್ಚಕ ಸೋಮಸುಂದರ ದೀಕ್ಷಿತನ ಜೊತೆ ಬಿದ್ದ.



ಸೋಮಸುಂದರ ದೀಕ್ಷಿತ

ಪ್ರತಿ ಸಂಜೆಯಾದರೆ ಗವಿಗಂಗಾಧರೇಶ್ವರ ಗುಡಿಪಕ್ಕದ ಬಂಡೆಯ ಮೇಲೆ ಸೋಮಸುಂದರ ದೀಕ್ಷಿತ ಮತ್ತು ಬಾಬು ಕುಂತು ಎಣ್ಣೆ ಹೊಡೆಯುತ್ತಿದ್ದರೆ, ಬಾಬು ಮನೆಯಿಂದಲೇ ಖೈಮಾ-ಬೋಟಿ ಸರಬರಾಜಾಗುತ್ತಿತ್ತು. ಗವಿಗಂಗಾಧರನ ಗುಡಿಯ ಕಾಣಿಕೆ ಹುಂಡಿ ಕದ್ದೇ ತನ್ನ ಎರಡನೇ ಪತ್ನಿಗೆ ಕೋಲಾರದಲ್ಲಿ ಹದಿನೆಂಟೆಕರೆಯ ಫಾರ್ಮ್ ಹೌಸ್ ಕರುಣಿಸಿದ ಪೂಜಾರಿ ದೀಕ್ಷಿತನ ಜೊತೆ ಸೈಕಲ್ ಶಾಪ್ ಲಿಂಗರಾಜ, ಪಾಲಿಕೆಯಲ್ಲಿ ಹೆಲ್ತ್ ಇನ್ಸ್‌ಪೆಕ್ಟರ್ ಆಗಿರುವ ನಟ ರಜನಿಕಾಂತ್ ಅಣ್ಣ ಶಿವಾಜಿರಾವ್‌ನ ಮಗ ರಾಮಕೃಷ್ಣ, ಗುಟ್ಟಹಳ್ಳಿಯ ಪರೋಡಿ ಕುಂಟಾಕುಮಾರ, ಲಕ್ಷ್ಮೀಪುರದ ಗಡ್ಡಾಕುಮಾರ ಇತ್ಯಾದಿ ಅಡ್ಡಕಸುಬಿಗಳ ಹಿಂಡೇ ಜಮೆಯಾಯಿತು. ಹೇಗೂ ಗೋಸಾಯಿ ಮಠದ ಲ್ಯಾಂಡು ದೋಚಿದ್ದಾಗಿದೆ. ಮನೆಯೂ ಎದ್ದಿದೆ. ಬಿಜೆಪಿಯದೇ ಸರ್ಕಾರವಿದೆ. ಬಹುಶಃ ಪಾಖಂಡಿ ಸೋಮಸುಂದರ ದೀಕ್ಷಿತನೇ ಐಡಿಯಾ ಕೊಟ್ಟಿರಬೇಕು. ಶಿರಡಿ ಬಾಬಾನ ಪುತ್ಥಳಿ ತಂದಿದ್ದೇ ಬಾಬು ಕೈಚಳಕ ತೋರಿಸಿದ್ದಾನೆ.

ಪರೋಡಿ ಹಿಂಡು, ಪ್ರಳಯಾಂತಕ ಬುದ್ಧಿ ಮತ್ತು ಭಂಡ ಛಾತಿ ಇದ್ದುಬಿಟ್ಟರೆ ಕಲ್ಲುಮೂರ್ತಿಗೂ ಕಣ್ಣುಬರುತ್ತೆ ಕಳ್ಳನಿಗೂ ದೇವರೊಲಿಯುತ್ತೆ! ■

ಶಿರಡಿ ಸಾಯಿಬಾಬಾ ಜನಸಾಮಾನ್ಯರ ಸಂತ

ಈ ಸಾಯಿಬಾಬಾ ವಿಚಾರಕ್ಕೆ ಬಂದರೆ ಸಾಮಾನ್ಯ ಜನ ಗೊಂದಲಕ್ಕೊಳಗಾಗುವುದೇ ಹೆಚ್ಚು, ಏಕೆಂದರೆ ಇಲ್ಲಿ ಶಿರಡಿ ಸಾಯಿಬಾಬಾ ಹಾಗೂ ಪುಟ್ಟಪರ್ತಿ ಸಾಯಿಬಾಬಾ ಎಂಬಿಬ್ಬರೂ ಚಲಾವಣೆಯಲ್ಲಿದ್ದಾರೆ.

ಇವರ ಪೈಕಿ ಶಿರಡಿ ಸಾಯಿಬಾಬಾ ನಿಜಕ್ಕೂ ಒಬ್ಬ ಸಂತ, ದಾರ್ಶನಿಕನಾದರೆ ಪುಟ್ಟಪರ್ತಿ ಸಾಯಿಬಾಬಾ ಒಬ್ಬ ಮೂರನೇ ದರ್ಜೆಯ ಜಾದುಗಾರ. ಶಿರಡಿ ಸಾಯಿಬಾಬಾನ ಪುನರಾವತಾರ ನಾನೇ ಎಂದು ಪುಟ್ಟಪರ್ತಿ ಸಾಯಿಬಾಬಾ ಚೀರಿಕೊಳ್ಳುತ್ತಾನಾದರೂ ಅಸಲಿ ಸಾಯಿ ಭಕ್ತರು ಇದನ್ನು ನಂಬುವುದಿಲ್ಲ. ಮಹಾರಾಷ್ಟ್ರದ ಪತ್ರಿ ಎಂಬ ಗ್ರಾಮದಲ್ಲಿ 1838 ರಲ್ಲಿ ಶಿರಡಿ ಸಾಯಿಬಾಬಾ ಹುಟ್ಟಿದ ಎಂದು ನಂಬಲಾಗಿದೆಯಾದರೂ ಆತನ ತಂದೆ-ತಾಯಿ ಯಾರು, ಹುಟ್ಟಿದ್ದೆಲ್ಲಿ, ಜಾತಿ-ಧರ್ಮ ಮುಂತಾದ ಯಾವ ವಿವರಗಳೂ ಖಚಿತವಾಗಿ ಗೊತ್ತಾಗಿಲ್ಲ. ಈ ಬಗ್ಗೆ ವಿಚಾರಿಸಿದವರಿಗೆ ಶಿರಡಿ ಬಾಬಾನ ನಗುವೇ ಉತ್ತರವಾಗಿರುತ್ತಿತ್ತು, ಆದರೂ ಈತ ಒಬ್ಬ ಮುಸ್ಲಿಂ ಫಕೀರ ಹಾಗೂ ವೆಂಕೂಸಾನೆಂಬ ಸಂತನ ಆಶ್ರಯದಲ್ಲಿ ಬೆಳೆದವನೆಂಬುದು ಗೊತ್ತಾಗಿದೆ.



1855 ರ ಸುಮಾರಿಗೆ ಈಗಿನ ಶಿರಡಿಗೆ ಬಂದು ನೆಲೆಸಿದಾಗ ಸಾಯಿಬಾಬಾಗೆ ಆಗಿನ್ನೂ 16-18 ರ ವಯಸ್ಸು. ಅಲ್ಲಿ ಕೆಲಕಾಲವಿದ್ದು ನಂತರ ದೇಶಾಂತರ ಹೊರಟು ಹೋಗಿದ್ದ. ಆ ಅವಧಿಯಲ್ಲಿ ಈತ ಝಾನ್ಸಿರಾಣಿ ಲಕ್ಷ್ಮೀಬಾಯಿಗೆ ನೆರವಾದನೆಂತಲೂ, ಸಿಪಾಯಿದಂಗೆಯಲ್ಲಿ ಪಾಲ್ಗೊಂಡನೆಂತಲೂ ಊಹಾಪೋಹಗಳಿವೆ. ಅದೇನೇ ಇರಲಿ ಈತ ಮರಳಿ ಶಿರಡಿಗೆ 1858 ರಲ್ಲಿ ಬಂದಾಗ ಅಲ್ಲಿನ ಜನ 'ಓಹ್', ಈತನೊಬ್ಬ ಸಾಯಿ (ಪರ್ಶಿಯನ್ ಭಾಷೆಯ Sain-The Holy Man) ಎಂದರು. ಅದಕ್ಕೆ ಬಾಬಾ (ಗುರು, ತಂದೆ) ಸೇರಿಕೊಂಡು ಆತ ಸಾಯಿಬಾಬಾ... ಶಿರಡಿ ಸಾಯಿಬಾಬಾ ಎನಿಸಿಕೊಂಡ. ಒಂದು ಮೊಣಕಾಲವರೆಗಿನ ನಿಲುವಂಗಿ, ತಲೆಗೂದಲು ಮುಚ್ಚುವಂತ ಬಟ್ಟೆ ಇವೆರಡೇ ಆತನ ಜೀವನಪರ್ಯಂತದ ಉಡುಗೆಯಾಗಿತ್ತು.

ಎಲ್ಲರ ಬಗೆಗೂ ದಯೆ, ಪ್ರೀತಿ, ಸಹನೆ ಹಾಗೂ ಆತ್ಮಶಾಂತಿ, ದೇವರಲ್ಲಿ ಶ್ರದ್ಧೆ ಭಕ್ತಿಯನ್ನು ಪ್ರತಿಪಾದಿಸಿದ ಶಿರಡಿ ಸಾಯಿಬಾಬಾ ಅನುಕೂಲಸ್ಥರಿಂದ ಹಣ ದಾನ ಪಡೆದು ಅದನ್ನೇ ಬಡವರಿಗೆ ನೀಡಿ ನೆರವಾದ ಸಂತ. ತನಗಾಗಿ ಏನನ್ನೂ

▶▶▶12

ಮಾಯಾ ಬಜಾರ್!

■ ಪಾರ್ವತೀಶ



ಮಾಯಾವತಿ ಭಾರತದ ಮುಂದಿನ ಪ್ರಧಾನಿಯಾಗಬಹುದಾ?

'ಯಾಕಾಗಬಾರದು' ಎನ್ನುತ್ತಿದ್ದಾರೆ ಮಾಯಾವತಿ. 'ಆಗಲಿ.... ನಮ್ಮದೇನೂ ಅಭ್ಯಂತರವಿಲ್ಲ' ಎನ್ನುತ್ತಿದ್ದಾರೆ ಕಮ್ಯೂನಿಸ್ಟ್ ಪಕ್ಷಗಳು, ತೆಲುಗುದೇಶಂ, ಟಿಆರ್‌ಎಸ್ ಅಜಿತ್‌ಸಿಂಗ್‌ನ ಲೋಕದಳ ಮತ್ತಿತರರು.

ಇನ್ನೇನಿದ್ದರೂ ಅಂಕಿ ಸಂಖ್ಯೆಗಳ ಆಟ. ಇದು ಅಮೆರಿಕಾ ಭಾರತದ ರಾಜಕಾರಣಿಗಳ ತಲೆ ಮೇಲೆ ಹಾಕಿರುವ ಬಾಂಬಿನ ಪರಿಣಾಮ. ಜುಲೈ 22 ರ ವಿಶ್ವಾಸಮತ ಯಾಚನೆಯಲ್ಲಿ ಅಕಸ್ಮಾತ್ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಬಿದ್ದುಹೋದರೆ ಎಲ್ಲಾ ರಾಜಕೀಯ ಪಕ್ಷಗಳಿಗೂ ಉಳಿಯುವ ಆಯ್ಕೆ ಎರಡೇ ಎರಡು. ಒಂದನೆಯದು, ಲೋಕಸಭೆ ವಿಸರ್ಜನೆಗೆ ಒಮ್ಮತದಿಂದ ತೀರ್ಮಾನಿಸಿ ಮುಂದಿನ ಚುನಾವಣೆಗೆ ಹೋಗುವುದು. ಇಲ್ಲಾ ಉಳಿದಿರುವ ಆರೆಂಟು ತಿಂಗಳ ಅವಧಿಗೆ ಯಾವುದಾದರೂ ಮೈತ್ರಿಕೂಟ ರಚಿಸಿಕೊಂಡು ಒಬ್ಬ ಅಭ್ಯರ್ಥಿಯನ್ನು ಆರಿಸಿ ಪ್ರಧಾನಿ ಕುರ್ಚಿಗೆ ತಂದು ಕೂರಿಸುವುದು.

ಇದರಲ್ಲಿ ಎಲ್ಲರೂ ಮೊದಲನೇ ದಾರಿ ಹಿಡಿಸಿಕೊಂಡರೆ ಮಾಯಾವತಿ ಈ ತಕ್ಷಣದಲ್ಲಿ ಪ್ರಧಾನಿಯಾಗದಿರಬಹುದು. ಆದರೆ ಕಾಂಗ್ರೆಸ್ ಬಿಜೆಪಿ ಹೊರತುಪಡಿಸಿದ ಮೂರನೇ ರಂಗದ ಮೈತ್ರಿಕೂಟದ ನಾಯಕಿಯಾಗಿ ಮಾಯಾವತಿ emerge ಆಗಲಿದ್ದಾರೆ. ಕಾಂಗ್ರೆಸ್ ನೇತೃತ್ವದ ಯುಪಿಎ, ಬಿಜೆಪಿ ನಾಯಕತ್ವದ ಎನ್‌ಡಿಎ ಹಾಗೂ ಬಿಎಸ್‌ಪಿ ನೇತೃತ್ವದ ಯುಎನ್‌ಪಿಎ (United National Progressive Alliance)ಗಳೇ ಚುನಾವಣಾ ಕದನದ ಮುಂಚೂಣಿ ಹೋರಾಟಗಾರರಾಗಲಿದ್ದಾರೆ.

ಯಾಕೆಂದರೆ ಈಗ ಕಾಂಗ್ರೆಸ್, ಬಿಎಸ್‌ಪಿ ಹಾಗೂ ಬಿಜೆಪಿ ಮಾತ್ರವೇ ದೇಶವ್ಯಾಪಿ ನೆಲೆ ಹೊಂದಿರುವ ಪಾರ್ಟಿಗಳಾಗಿವೆ. ಇನ್ನುಳಿದ ಜನತಾದಳ, ತೆಲುಗು ದೇಶಂ, ಡಿಎಂಕೆ, ಎಐಎಡಿಎಂಕೆ, ಅಕಾಲಿ ದಳ, ಸಮಾಜವಾದಿ ಪಾರ್ಟಿ, ಲೋಕದಳ, ಶಿವಸೇನೆ, ಅಸ್ಸಾಂ ಗಣಪರಿಷತ್, ಬಿಜು ಜನತಾದಳ, ಲಾಲೂನ ಆರ್‌ಜೆಡಿ.... ಮುಂತಾದವುಗಳ ಶಕ್ತಿ ಏನಿದ್ದರೂ ಆಯಾ ರಾಜ್ಯಗಳಿಗಷ್ಟೇ ಸೀಮಿತ.

ಇನ್ನು ಕಮ್ಯುನಿಸ್ಟರು ಬಿಜೆಪಿ ಜೊತೆಗೆ ಎಂದೆಂದೂ ಸೇರಲಾರರು. ಆಯಾ ಸಂದರ್ಭ ಹಾಗೂ ತಮ್ಮ ನೀತಿಗನುಗುಣವಾಗಿ ಅವರು ಕಾಂಗ್ರೆಸ್ ಅಥವಾ UNPA ಜೊತೆ ಇರಬಲ್ಲರು. ಈಗ ನಾವೆಲ್ಲಾ ನೋಡುತ್ತಿರುವಂತೆ ಕಮ್ಯುನಿಸ್ಟರು ಕಾಂಗ್ರೆಸ್ ಸಂಗ ತೊರೆದು ತೃತೀಯ ಬಣಕ್ಕೆ ಬಲ ತುಂಬಲು ಹೊರಟಿದ್ದಾರೆ.



ಸಹಜವಾಗೆ ಮಾಯಾವತಿ ಇದರ ನಾಯಕಿಯಾಗಿ ಹೊರಹೊಮ್ಮಿದ್ದಾರೆ. ನಾಳೆ ಚುನಾವಣೆ ನಡೆದು ಮತ್ತೆ ಅತಂತ್ರ ಪರಿಸ್ಥಿತಿ ಬಂದರೆ ಆಗಲೂ ತೃತೀಯ ರಂಗದ ನಾಯಕಿಯಾಗಿ ಮಾಯಾವತಿಗೆ ಪ್ರಧಾನಿ ಹುದ್ದೆಯ ಒಂದು ಛಾನ್ಸ್ ಇದ್ದೇ ಇರುತ್ತದೆ.

ಇದು ಭವಿಷ್ಯದ ಮಾತಾಯಿತು.


ಈಗ ದೆಹಲಿಯಲ್ಲಿ ಏನೇನಾಗುತ್ತಿದೆ ನೋಡಿ. ಅದು ಅಕ್ಷರಶಃ ಎಂಪಿ ಬಜಾರ್ ಆಗಿ ಬದಲಾಗಿದೆ.


ಯಾರು ಯಾರ ಕೈ ಕುಲುಕಲಿದ್ದಾರೆ, ಯಾರು ಎಷ್ಟಕ್ಕೆ ಬಿಕರಿಯಾದರು. ಯಾರ್‍ಯಾರು ಮತ್ತಾರದೋ ಬೆನ್ನಿಗೆ ಚೂರಿ ಹಾಕಿದರೆಂಬುದು ಇನ್ನೇನು ಕೆಲವೇ ಗಂಟೆಗಳಲ್ಲಿ ಗೊತ್ತಾಗಲಿದೆ.


ಮೇಲ್ನೋಟಕ್ಕೆ ಇದು ಅಣು ಒಪ್ಪಂದದ ವಿವಾದ. ಆದರೆ ಕಮ್ಯುನಿಸ್ಟರನ್ನು ಹೊರತುಪಡಿಸಿದರೆ ಉಳಿದವರ್‍ಯಾರಿಗೂ ಈ ಒಪ್ಪಂದದ ಬಗ್ಗೆ ಖಚಿತ ನಿಲುವಿಲ್ಲ. ಅವರದೇನಿದ್ದರೂ ಅನುಕೂಲಸಿಂಧು ರಾಜಕಾರಣ. ಮಾಯಾವತಿಯೂ ಇದಕ್ಕೆ ಹೊರತಲ್ಲ.


ಕಾಂಗ್ರೆಸ್ ಆತ್ಮಹತ್ಯೆ


ಈಗ ಕಾಂಗ್ರೆಸ್‌ಗೆ 'ಇರಲಾರದೇ ಇರುವೆ ಬಿಟ್ಕೊಂಡರಂತೆ' ಎಂಬ ಸ್ಥಿತಿ. ಬೆಲೆ ಏರಿಕೆ, ಹಣದುಬ್ಬರ, ನಾಲ್ಕಾರು ರಾಜ್ಯ ವಿಧಾನಸಭಾ ಎಲೆಕ್ಷನ್ ಸೋತು ಹೈರಾಣಾಗಿರುವಾಗಲೇ ಈ ಅಣುಬಾಂಬನ್ನು ತಂದು ತನ್ನ ತಲೆ ಮೇಲೇ ಹಾಕಿಕೊಂಡಿದೆ. 543 ಸದಸ್ಯಬಲದ ಸಂಸತ್‌ನಲ್ಲಿ ಕಾಂಗ್ರೆಸ್ ಸರ್ಕಾರ ಉಳಿಯಬೇಕೆಂದರೆ ಅವರಿಗೆ 272 ಸದಸ್ಯರ ಬೆಂಬಲ ಬೇಕು. ಕಮ್ಯೂನಿಸ್ಟರು ಮುನಿಸಿಕೊಂಡು ದೂರಾದ ನಂತರ ಯುಪಿಎ ಮೈತ್ರಿಕೂಟದ ಸಂಖ್ಯೆ ಕೇವಲ 222 ಆಯಿತು. ಅದಕ್ಕೆ ತೇಪೆ ಹಾಕಲು ಮುಲಾಯಂರ ಎಸ್‌ಪಿಯೊಂದಿಗೆ ಗೆಳೆತನ ಬೆಳೆಸಿದರೂ ಆ ಪಾರ್ಟಿಯ ಎಲ್ಲಾ 39 ಸದಸ್ಯರ ಬೆಂಬಲ ಸಿಗುವ ಖಾತ್ರಿ ಇಲ್ಲದಂತಾಗಿದೆ.











ತಲೆ ಹೋಗುವಂಥ ಬಿಕ್ಕಟ್ಟು ಬಂದಾಗ ಎಲ್ಲಾ ರಾಜಕೀಯ ಪಕ್ಷಗಳು ಮಾಡುವಂತೆಯೇ ಈಗ ಕಾಂಗ್ರೆಸ್ಸೂ ಕುದುರೆ ವ್ಯಾಪಾರಕ್ಕಿಳಿದಿದೆ. ತನಗೆ ಬೆಂಬಲ ಕೊಟ್ಟರೆ 25 ಕೋಟಿ, ಅಕಸ್ಮಾತ್ ಬೆಂಬಲ ಕೊಡಲಾಗದಿದ್ದರೂ ಪರವಾಗಿಲ್ಲ, ವಿಶ್ವಾಸಮತ ಯಾಚನೆಯ ದಿನ ಸದನಕ್ಕೆ ಬಾರದೆ ದೂರ ಉಳಿದರೂ ಹಣ.... ಇದು ಕಾಂಗ್ರೆಸ್‌ನ ಕುತಂತ್ರ ನಡೆ.

ವಿಪರ್ಯಾಸವೆಂದರೆ ಮಾಯಾವತಿಯೂ ಇಂಥದ್ದೇ ತಂತ್ರಗಾರಿಕೆ ನಡೆಸುತ್ತಾ ಕಾಂಗ್ರೆಸ್ ಹಾಗೂ ಸಮಾಜವಾದಿ ಪಾರ್ಟಿಯ ಸಂಸದರನ್ನು ಖರೀದಿಸಲು ಪ್ರಯತ್ನಿಸುತ್ತಿದ್ದಾರೆ.

ತೃತೀಯ ರಂಗದ ಪ್ರಮುಖ ಪಕ್ಷಗಳೆಲ್ಲಾ ಈಗ 'ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಉರುಳಿಸುವುದೇ ನಮ್ಮ ಒಂದಂಶದ ಕಾರ್ಯಕ್ರಮ' ಎಂದು ಪಣತೊಟ್ಟಿವೆ.


ಒಂದು ವೇಳೆ ಅವರು ಈ ಗುರಿ ಸಾಧಿಸಿದಲ್ಲಿ ಪರ್ಯಾಯ ಸರ್ಕಾರ ರಚನೆಯ ಸಂದರ್ಭ ಬಂದಲ್ಲಿ ಮುಂದಿನ ಪ್ರಧಾನಿಯಾಗುವ ಅವಕಾಶ ಮಾಯಾವತಿಗೇ ಸಿಗಲಿದೆ. ಆದರೆ ತೃತಿಯ ರಂಗಕ್ಕೆ ಅಗತ್ಯ ಸಂಖ್ಯಾ ಬಲ ಇಲ್ಲ. ಹಾಗಾಗಿ ಅವರಿಗೆ ಬಿಜೆಪಿಯ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಬೆಂಬಲ ಬೇಕೇಬೇಕಾಗುತ್ತದೆ. ಆ ಸಂದರ್ಭ ಬಂದಲ್ಲಿ ಕಮ್ಯುನಿಸ್ಟರು ದೂರಾಗಬಹುದು. ಆಗ ಉಳಿಯುವ ಸಾಧ್ಯತೆ ಒಂದೇ ಒಂದು.

ಮಾಯಾವತಿ ನೇತೃತ್ವದ ತೃತೀಯ ರಂಗಕ್ಕೆ ಎನ್‌ಡಿಎ ಹೊರಗಿನಿಂದ ಬೆಂಬಲಿಸಬೇಕಾಗುತ್ತದೆ.

ಭಾರತ ದೇಶದ ಮೊಟ್ಟಮೊದಲ ದಲಿತ ಪ್ರಧಾನ ಮಂತ್ರಿಯಾಗಿ ಮಾಯಾವತಿ ಅಧಿಕಾರ ನಡೆಸಲು 'ನಾವೇ ಕಾರಣ'ವೆಂಬ ಕ್ರೆಡಿಟ್ ಎಲ್ಲರಿಗೂ ಬೇಕಿದೆ. ಹೇಗಿದ್ದರೂ ಈ ಸರ್ಕಾರದ ಆಯಸ್ಸು ಕೇವಲ ಆರು ತಿಂಗಳು ತಾನೆ?

ಮಾಯಾವತಿ ಮುಂದಿನ ಪ್ರಧಾನಿಯಾಗುವ ಸಂದರ್ಭ ಈ ರೀತಿ ರೂಪು ತಳೆಯುತ್ತಿವೆ.

ಕಾಂಗ್ರೆಸ್‌ಗೆ ಈ ಅಕಾಲಿಕ ಆತ್ಮಹತ್ಯೆ ನಿಜಕ್ಕೂ ಬೇಕಿತ್ತಾ? ■



ಗೌಡ ಪ್ರಧಾನಿಯಾದಾಗಲೂ ಹದಿನೇಳೇ ಜನ!

ಮುಂದಿನ ಪ್ರಧಾನಿ ಅಭ್ಯರ್ಥಿ ಎನಿಸಿಕೊಳ್ಳುತ್ತಿರುವ ಮಾಯಾವತಿಯ ಬಹುಜನ ಸಮಾಜ ಪಕ್ಷದ ಅಸಲಿ ರಾಜಕೀಯ ತಾಕತ್ತೆಷ್ಟು ಗೊತ್ತೆ?

ಕೇವಲ 17 ಸಂಸದರ ಬಲ!


543 ಸದಸ್ಯ ಬಲದ ಸಂಸತ್‌ನಲ್ಲಿ 17 ಜನ ಸದಸ್ಯರದ್ದು ಒಂದು ಲೆಕ್ಕವೇ ಅಲ್ಲ ಬಿಡಿ. ಆದರೂ ರಾಜಕೀಯದ ಅಂಕಿ ಸಂಖ್ಯೆ ಆಟದಲ್ಲಿ ಈ ಹದಿನೇಳು ಎಂಬುದು ಕೇವಲ ಸಂಖ್ಯೆಯಾಗಷ್ಟೇ ಭಾಸವಾಗುವುದಿಲ್ಲ. ಆ ಪಾರ್ಟಿಗಿರುವ ಇಮೇಜು, ವ್ಯಾಪ್ತಿ ಜನಬೆಂಬಲಗಳೆಲ್ಲಾ ಕೆಲವೊಮ್ಮೆ ಪರಿಗಣನೆಗೆ ಬಂದುಬಿಡುತ್ತದೆ. ರಾಜಕೀಯದಲ್ಲಿ ತಂತ್ರಗಾರಿಕೆಯೇ ಮೇಲುಗೈ ಸಾಧಿಸಿದಾಗ ನೂರಿನ್ನೂರು ಸಂಸದರನ್ನು ಹೊಂದಿರುವ ದೊಡ್ಡ ಪಕ್ಷಗಳೂ ಬಿಎಸ್‌ಪಿಯಂಥ ಸಣ್ಣ ಸೈಜಿನ ಪಕ್ಷಗಳ ಮುಂದೆ ಕೈಕಟ್ಟಿ ನಿಲ್ಲಲೇಬೇಕಾಗುತ್ತವೆ.

1996 ರಲ್ಲೊಮ್ಮೆ ಇಂಥದ್ದೇ ಪರಿಸ್ಥಿತಿ ಬಂದಿದ್ದು ನಿಮಗೆ ನೆನಪಿರಬಹುದು. ದೇವೇಗೌಡರು ಆಗ ತಾನೆ ಕರ್ನಾಟಕದ ಮುಖ್ಯಮಂತ್ರಿಯಾಗಿ ಪಂಚೆ ಬಿಗಿ ಮಾಡಿಕೊಂಡು ಓಡಾಡಲು ಶುರು ಮಾಡಿದ್ದರು. ಆಗ ನಡೆದ ಸಂಸತ್ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ನಿರೀಕ್ಷಿತ ಬಹುಮತ ಸಿಗದೆ ಪಿ.ವಿ. ನರಸಿಂಹರಾವ್ ಸೋತರು. ಆ ವಿಚಿತ್ರ ಪರಿಸ್ಥಿತಿಯಲ್ಲಿ ಲಾಲೂಯಾದವ್ ಹಾಗೂ ಕಾಂಗ್ರೆಸ್‌ನವರೇ ಸೇರಿಕೊಂಡು ದೇವೇಗೌಡರನ್ನು ಪ್ರಧಾನ ಮಂತ್ರಿಯಾಗಿಸಿಬಿಟ್ಟರು.

ಅವತ್ತು ಗೌಡರಿಗಿದ್ದ ಸ್ವಂತ ಶಕ್ತಿಯೂ 17 ಸಂಸದರಷ್ಟೇ!

96 ರ ಜೂನ್‌ನಿಂದ 97 ರ ಏಪ್ರಿಲ್‌ವರೆಗೂ ಗೌಡರ ಪ್ರಧಾನಿಗಿರಿ ಅಬಾಧಿತವಾಗಿ ಮುಂದುವರೆಯಿತು. ಕೊನೆಗೆ ಕಾಂಗ್ರೆಸ್ ತೆರೆಮರೆ ಕೆಲಸ ತಂತ್ರ ನಡೆಸಿ ಗೌಡರಿಗೆ ಕೊಟ್ಟಿದ್ದ ಬೆಂಬಲ ಹಿಂಪಡೆದು ತನ್ನದೇ ಪಾರ್ಟಿಯ ಐ.ಕೆ. ಗುಜ್ರಾಲ್‌ರನ್ನು ಪ್ರಧಾನಿಯಾಗಿಸಿತು.

ಹೀಗೆ ಅವತ್ತು ರಾಜಕೀಯ ಏಣಿಯಾಟದಲ್ಲಿ ಎದ್ದಿದ್ದ ಅಲೆ ಗೌಡರನ್ನು ದೆಹಲಿಗೆ ಕರೆದೊಯ್ದಂತೆ ಇವತ್ತು ಮಾಯಾವತಿಯೂ ಅಂತಹ ಅಲೆ ಬಯಸುತ್ತಿದ್ದಾರೆ. ಆದರೆ ಒಂದೇ ಒಂದು ವ್ಯತ್ಯಾಸ ಏನೆಂದರೆ ಅಂಥ ಅಲೆಯನ್ನು ಈಗ ಮಾಯಾವತಿಯೇ ಮೊದಲು ಸೃಷ್ಟಿಸಬೇಕಿದೆ.



ಕಾಂಗ್ರೆಸ್ ಕೆಡವಿದ ಸರ್ದಾರ್‌ಜಿ

ಒಂದು ವೇಳೆ ಕಾಂಗ್ರೆಸ್ ವಿಶ್ವಾಸಮತದಲ್ಲಿ 272 ಓಟು ಪಡೆದು ಗೆದ್ದರೂ ನಂತರ ನಡೆಯುವ ಎಲೆಕ್ಷನ್‌ನಲ್ಲಿ 272 ಸ್ಥಾನ ಖಂಡಿತ ಗೆಲ್ಲಲಾರದು. ಬಹುತೇಕ ಕಾಂಗ್ರೆಸ್ ನಾಯಕರಿಗೆ ಈ ಸತ್ಯ ಗೊತ್ತಿದೆ.

'ದೇಶದ ಹಿತ ರಕ್ಷಣೆಗಾಗಿಯೇ ಈ ಅಣು ಒಪ್ಪಂದ' ಎಂದು ಮನಮೋಹನ್ ಸಿಂಗ್ ಬೊಂಬಡಾ ಬಜಾಯಿಸುತ್ತಿದ್ದರೂ ಯಾರೊಬ್ಬರಿಗೂ ಅದು ನಿಜ ಎನಿಸುತ್ತಿಲ್ಲ. ಇದರ ಒಳವಿವರ ತಿಳಿದವರ ಪ್ರಕಾರ ಅಮೆರಿಕೆಯೊಂದಿಗೆ ಈ ಒಪ್ಪಂದ ಆಗೇ ಬಿಟ್ಟರೆ ಅದು ಕೇವಲ ಅಣು ವಿದ್ಯುತ್ ಉತ್ಪಾದನೆಗಷ್ಟೇ ಸೀಮಿತವಾಗುಳಿಯುವುದಿಲ್ಲ. ಅದು ಅಮೆರಿಕಾದ ಮಿಲಿಟರಿ ಕೈಗಾರಿಕೆಗೆ ನೂರೈವತ್ತು ಬಿಲಿಯನ್ ಡಾಲರ್ ಬ್ಯುಸಿನೆಸ್ ತಂದು ಕೊಡಲಿದೆ.

ಇದೊಂದು ರೀತಿಯ ಹಗಲು ದರೋಡೆ.

ಜೊತೆಗೆ ಕೆಲ ಮುಸ್ಲಿಂ ಸಂಸದರು ಈ ಒಪ್ಪಂದ ಮುಸಲ್ಮಾನರಿಗೆ ಬೇಕಿಲ್ಲ ಎಂದು ಇನ್ನಷ್ಟು ಗೊಂದಲವೆಬ್ಬಿಸಿದ್ದಾರೆ. ಅಮೆರಿಕಾ ಮುಸ್ಲಿಂ ವಿರೋಧಿ ಇರಾಕ್ ಯುದ್ಧ ಅಫಘಾನಿಸ್ತಾನದಲ್ಲಿ ದಬ್ಬಾಳಿಕೆ ಈಗ ಇಸ್ರೇಲ್ ಪರ ನಿಂತು ಇರಾನ್‌ಗೆ ಬೆದರಿಸುತ್ತಿರುವ ವಿಚಾರಗಳನ್ನೆಲ್ಲಾ ಮುಸ್ಲಿಂ ನಾಯಕರು ಬೆರಳೆತ್ತಿ ತೋರಿಸುತ್ತಿದ್ದಾರೆ. ಈ ತರ್ಕ ಮುಂದುವರೆದರೆ ಕಾಂಗ್ರೆಸ್ ಅಮೆರಿಕಾ ಪರ ಅರ್ಥಾತ್ ಮುಸ್ಲಿಂ ವಿರೋಧಿಯೆಂಬ ಕಳಂಕವೂ ತಟ್ಟಿದಂತಾಯಿತು. ಈಗಾಗಲೇ ಬೆಲೆ ಏರಿಕೆ, ಹಣದುಬ್ಬರದಿಂದ ಜನ ತತ್ತರಿಸುತ್ತಾ ಕಾಂಗ್ರೆಸ್‌ಗೆ ಶಾಪ ಹಾಕುತ್ತಿದ್ದಾರೆ. ಇಂಥ ಸಮಯದಲ್ಲಿ 'ಅಣು ಒಪ್ಪಂದ ಮಾಡಿಕೊಂಡು ಭಾರತಕ್ಕೆ ಒಳ್ಳೇದು ಮಾಡಿದ್ದೇನೆ' ಎಂದು ಎಲೆಕ್ಷನ್‌ಗೆ ಹೊರಟರೆ ಕಾಂಗ್ರೆಸ್‌ಗೆ ಯಾರು ತಾನೆ ಓಟು ಹಾಕಿ ಬೆಂಬಲಿಸುತ್ತಾರೆ ಹೇಳಿ?

ಪ್ರಧಾನಿ ಮನಮೋಹನ್ ಸಿಂಗ್ ತಾನೇನೊ ಚರಿತ್ರಾರ್ಹವಾದ ಕೆಲಸ ಮಾಡಲು ಹೊರಟಿದ್ದೇನೆ ಎಂದು ಆತುರಪಟ್ಟಿದ್ದು ಈಗ ಕಾಂಗ್ರೆಸ್ ಶವಪೆಟ್ಟಿಗೆಗೆ ಕೊನೆಯ ಮೊಳೆ ಹೊಡೆಯುತ್ತಿರುವಂತೆ ಕಾಣುತ್ತಿದೆ.

ಅಣು ದಾಳಿಗೆ ಪಕ್ಷಗಳೇ ಛಿದ್ರ

ಒಂದು ಒಪ್ಪಂದ ಅಥವಾ ವಿದೇಶಾಂಗ ನೀತಿ ಇಂಡಿಯಾದ ರಾಜಕೀಯವನ್ನು ಇಷ್ಟೊಂದು ಆಳವಾಗಿ ಅಲ್ಲಾಡಿಸಿದ ಘಟನೆ ಇತಿಹಾಸದಲ್ಲೆಂದೂ ನಡೆದಿರಲಿಲ್ಲ.

ಒಂದೆಡೆ ಕಮ್ಯೂನಿಸ್ಟರು ಇದನ್ನೊಂದು ತತ್ವ-ಸಿದ್ಧಾಂತದ ಹಾಗೂ ಭಾರತದ ರಕ್ಷಣೆ ಸಾರ್ವಭೌಮತೆಯ ವಿಚಾರವಾಗಿ ನೋಡುತ್ತಿದ್ದಾರೆ.

ಅದು ಸಕಾಲಿಕ ಹಾಗೂ ಸಕಾರಣವಾದದ್ದೇ ಆಗಿದೆ.

ಆದರೆ ಬಿಜೆಪಿಯಾದಿಯಾಗಿ ಬೇರೆಲ್ಲರಿಗೂ ಇದು ಉರಿವ ಮನೆಯಲ್ಲಿ ಗಳ ಇರಿಯುವ ಸಂದರ್ಭ.

ಹಣ, ಅಧಿಕಾರದ ಆಮಿಷ, ಪ್ರತಿಸ್ಪರ್ಧಿ ಪಕ್ಷಗಳನ್ನು ಮುಗಿಸಿಬಿಡುವ ಪ್ರಯತ್ನ ಇವೆಲ್ಲಾ ಈಗ ನಡೆದಿವೆ.

ಮುಲಾಯಂರು ತಾವು ಕಾಂಗ್ರೆಸ್‌ಗೆ ಬೆಂಬಲಿಸುವುದಾಗಿ ಹೇಳಿದ ಕೂಡಲೇ ಚುರುಕಾದ ಮಾಯಾವತಿ ಸಮಾಜವಾದಿ ಪಾರ್ಟಿಯಲ್ಲೇ ಒಡಕು ತರಲು ಪ್ರಯತ್ನಿಸಿ ಅರ್ಧ ಯಶಸ್ಸು ಕಂಡಿದ್ದಾರೆ. ಆ ಪಾರ್ಟಿಯ ಸದಸ್ಯರ ಪೂರ್ಣ ಬೆಂಬಲ ಕಾಂಗ್ರೆಸ್‌ಗೆ ಸಿಗುವುದು ಡೌಟೆ!

ಶಿಬು ಸೊರೇನ್ ನೇತೃತ್ವದ ಜಾರ್ಖಂಡ್ ಮುಕ್ತಿ ಮೋರ್ಚಾದ ಐವರು ಸಂಸದರಲ್ಲೇ ಭಿನ್ನಾಭಿಪ್ರಾಯ ಉಂಟಾಗಿತ್ತು. ಈಗ ಕೊನೇ ಗಳಿಗೆಯಲ್ಲಿ ಕಾಂಗ್ರೆಸ್ ಅವರೆಲ್ಲರನ್ನು ಹೋಲ್‌ಸೇಲಾಗಿ ಖರೀದಿಸಿಬಿಟ್ಟಿದೆ. ಇನ್ನು ಗೌಡರ ಜೆಡಿಎಸ್‌ನ ಮೂವರು ಸಂಸದರ ಪೈಕಿ ಕೇರಳದ ವೀರೇಂದ್ರ ಕುಮಾರ್ ಕಾಂಗ್ರೆಸ್ ವಿರುದ್ಧ ಓಟು ಹಾಕುವುದಾಗಿ ಘೋಷಿಸಿಬಿಟ್ಟಿದ್ದರು. ಈ ನಡುವೆ ಗೌಡರು ಕಾಂಗ್ರೆಸ್‌ನೊಂದಿಗೆ ಎಂಥದ್ದೋ ವ್ಯವಹಾರ ಕುದುರಿಸಲು ಯತ್ನಿಸಿ ಖಾಲಿ ಕೈಯಲ್ಲಿ ವಾಪಸ್ ಬಂದು 'ಯುಪಿಎ ಸೋಲಬೇಕು' ಎನ್ನುತ್ತಿದ್ದಾರೆ. ಒಂದು ವೇಳೆ ಗೌಡರು ಕಾಂಗ್ರೆಸ್ ಪರ ನಿಂತಿದ್ದರೂ ಜೆಡಿಎಸ್ ಸಂಸದರು ಅದಕ್ಕೆ ಬೆಲೆ ಕೊಡುತ್ತಿರಲಿಲ್ಲ ಬಿಡಿ.

ಮತ್ತೊಂದೆಡೆ ಕಾಂಗ್ರೆಸ್ ಬಿಜೆಪಿ ಕ್ಯಾಂಪಿನ ಮೇಲೆ ಕಣ್ಣು ಹಾಕಿ ಶಿವಸೇನೆ, ಅಕಾಲಿ ದಳದ ಸಂಸದರಿಗೆ ಹಣದ ಆಮಿಷ ನೀಡಿ ವಿಶ್ವಾಸಮತದ ದಿನ ಸದನಕ್ಕೇ ಬಾರದಂತೆ 'ಪಲಾಯನ ಮಾರ್ಗ' ಹೇಳಿಕೊಡುತ್ತಿವೆ.

ಒಟ್ಟಾರೆಯಾಗಿ ಹೇಳಬೇಕೆಂದರೆ ಜುಲೈ 22 ರ ವಿಶ್ವಾಸಮತ ಯಾಚನೆಯಲ್ಲಿ ಕಾಂಗ್ರೆಸ್ ಗೆಲ್ಲಲಿ-ಇಲ್ಲ ಸೋಲಲಿ ಹಲವು ರಾಜಕೀಯ ಪಕ್ಷಗಳು ವಿಭಜನೆಯಾಗುವುದು, [illegible] ಪಕ್ಷಾಂತರ ಮಾಡುವುದಂತೂ ಖಚಿತ.

ಇದು ಹಾಗೇ ಮುಂದುವರೆಯುತ್ತಾ ನಾಳಿನ ಲೋಕಸಭಾ ಚುನಾವಣೆ ವೇಳೆಗೆ NDA-UPA-UNPA ಮೈತ್ರಿಕೂಟದ [illegible] ಬದಲಾಗಬಹುದು [illegible]. ■

ಬಾಬಾ ಒಕ್ಕಣ್ಣ ಬಾಬು ಮುಕ್ಕಣ್ಣ

▶▶▶

ಬೂತ್ ಏಜೆಂಟರಿಗೂ ಈತ ಇಂಕ್ ರಿಮೂವರ್ ಎಂಬ ನಕಲಿ ಮತದಾನಕ್ಕೆ ಸಹಕಾರಿಯಾಗಿದ್ದ ದ್ರಾವಣವನ್ನು ಮಾರುತ್ತಿದ್ದ. ವಿಧಾನಸೌಧದಲ್ಲಿ ಕೆಲಸ ಕೊಡಿಸುತ್ತೇನೆಂದು ಅನೇಕರಿಂದ ದುಡ್ಡು ಕಿತ್ತಿದ್ದ. ಸಾಲ ಮಾಡಿಕೊಂಡಿದ್ದ. ಗರಿಗರಿ ಖಾದಿ ಅಂಗಿ, ಅದಕ್ಕೆ ಹೊಂದದ ಟೆರಿಕಾಟ್ ಪ್ಯಾಂಟು, ಗುಂಗುರು ಕೂದಲು, ಹಣೆಗೆ ಕುಂಕುಮ, ಕತ್ತಿಗೆ ಏನೇನೋ ತಾಯಿತ; ಹೀಗೆ ಒಂದೇ ನೋಟಕ್ಕೆ ಥರ್ಡ್ ಕ್ಲಾಸ್ ಮಂತ್ರವಾದಿಯಂತೆ ಕಾಣುವ ಬಾಬು ಸಾಕಷ್ಟು ಪೂರ್ವ ಸಿದ್ಧತೆ ಮಾಡಿಕೊಂಡೇ ಬಾಬಾ ಪವಾಡಕ್ಕೆ ಅಣಿಯಾಗಿದ್ದಾನೆ.

ತಾನು ನಾಲ್ಕು ತಿಂಗಳ ಹಿಂದೆ ಶಿರಡಿಗೆ ಹೋಗಿ ಈ ವಿಗ್ರಹ ತಂದೆ ಎನ್ನುತ್ತಾನೆ. ಆದರೆ ಯಾರಿಂದ ತಂದೆ? ಅಡ್ರೆಸ್ ಕೊಡ್ತಿಯಾ? ಎಂದರೆ ಶಿರಡಿಯ ಫುಟ್‌ಪಾತಿನಲ್ಲಿ ಯಾರಿಂದಲೋ ಖರೀದಿಸಿದೆ ಎನ್ನುತ್ತಾನೆ. ಹೋಗಲಿ ನೀನು ತಂದಾಗ ಎರಡೂ ಕಣ್ಣು ಮುಚ್ಚಿದ್ದನ್ನು ಬೇರೆ ಯಾರಿಗಾದರೂ ತೋರಿಸಿದ್ದಿಯಾ? ಎಂದರೆ ಇಲ್ಲ ಎನ್ನುತ್ತಾನೆ. ಇದರರ್ಥ ಆತ ಶಿರಡಿಯಿಂದಲೇ ಇದನ್ನು ತಂದಿದ್ದಕ್ಕಾಗಲಿ ತಂದಾಗ ಅದು ಕಣ್ಣುಮುಚ್ಚಿದ್ದನ್ನಾಗಲಿ ಯಾರೂ ನೋಡಿಲ್ಲ, ಯಾರಿಗೂ ಗೊತ್ತಿಲ್ಲ. ಏಕಾಏಕಿ ಇಷ್ಟೆಲ್ಲ ಫೋಟೋ ಪ್ರಿಂಟು ಮಾಡಿಸಿದ್ದು ಯಾರು? ಮಾರುತ್ತಿರುವುದು ಯಾರು? ಎಂದರೆ ಅದಕ್ಕೂ ಗೊತ್ತಿಲ್ಲ ಎನ್ನುತ್ತಾನೆ.

ಚೋದ್ಯವೆಂದರೆ ಈ ರೀತಿ ಫೋಟೋ ಮಾರುತ್ತಿರುವವರೆಲ್ಲ ಬಾಬುವಿನ ಬಾಮೈದ ಆಟೋ ರಮೇಶ, ಹನುಮಂತನಗರದ ಹಳೇ ರೌಡಿ ಮಾಚ, ಲಕ್ಷ್ಮೀಪುರದ ಉಂಡಾಡಿ ಕೇಬಲ್ ಗೋವಿಂದ ಮತ್ತವರ ಪರೋಡಿ ಶಿಷ್ಯರೆ. ಫೋಟೋಗಳು ಮಾರಾಟವಾಗಿ ಖರ್ಚಾಗುತ್ತಿದ್ದಂತೆ ಅದೇ ಬಾಬುವಿನ ಮನೆಯಿಂದ ಕಂತೆಗಟ್ಟಲೇ ಫೋಟೋಗಳು ಆಟೋ ರಮೇಶನ ಕೈಗೆ ಬರುತ್ತಿತ್ತು. ಮೊದಲ ದಿನ ಹತ್ತು ರೂಪಾಯಿದ್ದ ಪೋಸ್ಟ್‌ಕಾರ್ಡ್ ಸೈಜಿನ ಒಂದು ಫೋಟೋ ಎರಡನೇ ದಿನಕ್ಕೆ ಇಪ್ಪತ್ತು



ರೂಪಾಯಿಗೇರಿತ್ತು. ಜೊತೆಗೆ ಬಾಬುವಿನ ಬಂಧುಗಳು, ಛೇಲಾಗಳೆಲ್ಲ ಸೇರಿ ಮನೆಯ ಸುತ್ತ ಒಂದು ವ್ಯೂಹವನ್ನೇ ರಚಿಸಿಬಿಟ್ಟಿದ್ದಾರೆ. ಹನುಮಂತನ ಬಾಲದಂತೆ ಬೆಳೆಯುವ ಭಕ್ತರ ಸಾಲನ್ನು ನಿಯಂತ್ರಿಸಿ ಅವರನ್ನು ಆತುರಾತುರವಾಗಿ ಹೊರಗಟ್ಟುವುದು ಒಂದು ಗ್ಯಾಂಗಿನ ಕೆಲಸವಾದರೆ ಮತ್ತೊಂದು ಗ್ಯಾಂಗ್ ಹೊರಕ್ಕೆ ಗುಂಪುಗೂಡಿ ಜೈ ಕೂಗುತ್ತಿರುತ್ತದೆ. ಮಗದೊಂದು ಗ್ಯಾಂಗ್ ಫೋಟೋ ಮಾರುವುದು, ಅನುಮಾನಾಸ್ಪದವಾಗಿ ಕಂಡವರನ್ನು ಗುರಾಯಿಸುವುದು ಮಾಡುತ್ತದೆ.

ಇಲ್ಲಿ ಗಮನಿಸಬೇಕಾದ ಒಂದು ಸಂಗತಿಯೆಂದರೆ ಯಾವುದೇ ಭಕ್ತ ಬಾಬಾನ ವಿಗ್ರಹವನ್ನು ಸಮೀಪಿಸುವಂತಿಲ್ಲ, ಏನಿದ್ದರೂ ಮೂರಡಿ ದೂರದಿಂದಲೇ ನೋಡಬೇಕು. ವಿಗ್ರಹದ ಮುಂದೆ ಎರಡು ಸೆಕೆಂಡಿಗಿಂತಲೂ ಹೆಚ್ಚು ನಿಲ್ಲುವಂತಿಲ್ಲ. ಅಪ್ಪಿತಪ್ಪಿ ಏನಾದರೂ ನೋಡುತ್ತಾ ನಿಂತರೆಂದರೆ ತಿರುಪತಿ ತಿಮ್ಮಪ್ಪನ ಮುಂದೆ ನೂಕುವುದಕ್ಕಿಂತಲೂ ಅಸಹ್ಯವಾಗಿ ಕತ್ತುಹಿಡಿದು ಆಚೆಗೆ ದಬ್ಬುತ್ತಾರೆ. ಇನ್ನೂ ಒಂದು ಗುಂಪು ಬಂದವರನ್ನು ಮಾತಿಗೆಳೆದು ಚಿತ್ರವಿಚಿತ್ರ ಕತೆ ಹೇಳಿ ನಂಬಿಸಲೆತ್ನಿಸುತ್ತದೆ. ಆದರೆ ಬಾಬು ಹುಟ್ಟು ಹಾಕಿದ ಈ ಪವಾಡ ಪ್ರಕರಣಕ್ಕೆ ಮತ್ತೊಂದು ಮಗ್ಗುಲು ಇದ್ದಂತಿದೆ. ಅದನ್ನು ತಿಳಿಯಬೇಕೆಂದರೆ ಪವಾಡ ಘಟಿಸಿರುವ ಬಾಬು ಮನೆಯಿರುವ ಗವೀಪುರಂ ಗುಟ್ಟಹಳ್ಳಿಯ ಹರಿಹರನ ಗುಡ್ಡದ ಚರಿತ್ರೆ ತಿಳಿಯಬೇಕು.

ಹರಿಹರನ ಗುಡ್ಡ ಎಂದು ಕರೆಯಲ್ಪಡುವ ಈ ಪ್ರದೇಶದಲ್ಲಿ ಪುರಾಣ ಪ್ರಸಿದ್ಧ ಗವಿಗಂಗಾಧರೇಶ್ವರನ ಗುಡಿಯಿದೆ. ಇದನ್ನು ದಕ್ಷಿಣ ಕಾಶಿ, ಗೌತಮ ಕ್ಷೇತ್ರ ಅಂತಲೂ ಕರೆಯುತ್ತಾರೆ. ಅನಾದಿಕಾಲದಿಂದಲೂ ಇರುವ ಇದನ್ನು ಕೆಂಪೇಗೌಡನ ಆಳ್ವಿಕೆಯಲ್ಲಿ ಜೀರ್ಣೋದ್ಧಾರ



ಕೋಣೆಯ ಸಂದಿಯ ಶಿರಡಿ ಬಾಬಾ

ಮಾಡಲಾಯಿತಂತೆ. ತದನಂತರ 1976 ರಲ್ಲಿ ಇದನ್ನು ಧರ್ಮಸೇವಾ ಪ್ರವೀಣ, ದಾನಚಿಂತಾಮಣಿ ಮಗಜಿ ಧೋಂಡೂಸಾ ಎಂಬುವರ ಪತ್ನಿ ಮುನ್ನಾಬಾಯಿ ಆಧುನೀಕರಿಸಿದರಂತೆ. ಮರಾಠಿಗರಾದ ದೋಂಡೂಸಾ ಇದೇ ಗುಡ್ಡದಲ್ಲಿ ಮರಾಠರ ಗೋಸಾಯಿಗಳಿಗೆಂದು ಒಂದು ಮಠ ಸಹ ಕಟ್ಟಿಸಿದ್ದಾರೆ. ಕಾಲಕ್ರಮೇಣ ಗವಿ ಗಂಗಾಧರೇಶ್ವರ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿತಾದರೂ ದೋಂಡೂಸಾ ಕಟ್ಟಿಸಿದ್ದ ಮಠ ಮಾತ್ರ ಹಾಗೇ ಶಿಥಿಲಾವಸ್ಥೆಯಲ್ಲೇ ಉಳಿದುಹೋಯಿತು.

ಬಹುಶಃ ಗವಿಗಂಗಾಧರೇಶ್ವರ ದೇವಸ್ಥಾನದ ನಂತರ, 1903 ರಲ್ಲಿ ನಿರ್ಮಿಸಲ್ಪಟ್ಟ ಗೋಸಾಯಿ ಮಠವೇ ಈ ಗುಡ್ಡದ ಅತೀ ಪುರಾತನ ಕಟ್ಟಡ. ಆನಂತರ ಈ ಗುಡ್ಡದ ಮೇಲೆ ನೆಲಗಳ್ಳರ ಆಕ್ರಮಣವಾಗಿದೆ. ಗುಡ್ಡದ ಒಂದು ಭಾಗವನ್ನು ಜಿಗಣಿಯ ವಿವೇಕಾನಂದ ಕೇಂದ್ರದವರ ಬಿಲ್ಡಿಂಗು, ಅದರ ಹಿಂಭಾಗದಲ್ಲಿ ಮಾಜಿ ಕೇಂದ್ರ ಸಚಿವ ಸಂಸದ ಅನಂತ್‌ಕುಮಾರ್‌ರ 'ಗಿರಿಜಾ ಶಾಸ್ತ್ರಿ ಮೆಮೋರಿಯಲ್ ಟ್ರಸ್ಟ್‌ನ ಅದಮ್ಯ ಚೇತನ' ಸಂಸ್ಥೆಯ ಕಟ್ಟಡ, ಒಂದು ಸರ್ಕಾರಿ ಪ್ರಾಥಮಿಕ ಶಾಲೆ ಕಟ್ಟಡಗಳು ತಲೆ ಎತ್ತಿವೆ. ಗುಡ್ಡದ ಮೇಲ್ಭಾಗದಲ್ಲಿ ಎರಡು ಖಾಸಗಿ ಕಲ್ಯಾಣ ಮಂಟಪಗಳು ಹುಟ್ಟಿಕೊಂಡಿವೆ. ಈ ಎರಡೂ ಕಲ್ಯಾಣ ಮಂಟಪಗಳ ಮಧ್ಯದ್ದೆ ಭಕ್ತ ಬಾಬುವಿನ ಮನೆ ಅರ್ಥಾತ್ ಸೋಕಾಲ್ಡ್ ಶಿರಡಿ ಮಂದಿರ!

ಹದಿನೆಂಟು ಎಕರೆ ವಿಸ್ತಾರವಾಗಿರುವ ಈ ಗುಡ್ಡದ ಅರ್ಧಭಾಗದಲ್ಲಿ ಮಹಾನಗರ ಪಾಲಿಕೆಯ ತಿಮ್ಮೇಶ್ ಪ್ರಭು ಪಾರ್ಕಿದೆ. ಉಳಿದಂತೆ ಗಂಗಾಧರೇಶ್ವರ ದೇವಸ್ಥಾನದ ಸುತ್ತಲಿನ ಪ್ರದೇಶವನ್ನು ಪುರಾತತ್ವ ಇಲಾಖೆ ಸಂರಕ್ಷಿತ ಪ್ರದೇಶ ಎಂದು ಅಲ್ಲಲ್ಲಿ ಬೋರ್ಡು ಬರೆಸಿ ಹಾಕಿಸಿರುವುದೂ ಕಾಣಿಸುತ್ತದೆ. ತಮಾಷೆಯೆಂದರೆ ಈ 'ಸುಂರಕ್ಷಿತ ಪ್ರದೇಶ' ಎಂಬ ಬೋರ್ಡಿನ ಪಕ್ಕದಲ್ಲೇ ಗಂಗಾಧರೇಶ್ವರ ದೇವಾಲಯದ ನಟೋರಿಯಸ್ ಅರ್ಚಕ ಸೋಮಸುಂದರ ದೀಕ್ಷಿತ್ ಸೇರಿದಂತೆ ದೇವಾಲಯದ ಹಲವು ಉದ್ಯೋಗಿಗಳ ಬಂದೋಬಸ್ತಿನ ಬಿಲ್ಡಿಂಗುಗಳೂ ಎದ್ದು ನಿಂತಿವೆ.

ಹೀಗೆ ಸರ್ಕಾರಿ ಶಾಲೆ, ಆಕ್ರಮಿಸಿಕೊಂಡವರ ಮನೆ, ಸಂಘ-ಸಂಸ್ಥೆಗಳ ಆಫೀಸು, ಮಠ, ದೇವಸ್ಥಾನ ಎಲ್ಲವೂ ಸೇರಿ ಈ ಜಾಗ ಸರ್ಕಾರದ್ದೋ? ಖಾಸಗಿಯವರದ್ದೋ? ಅಥವಾ ಮಠದ್ದೋ? ಎಂಬುದೇ ಅನುಮಾನವಾಗುತ್ತದೆ.

ಸದರಿ ಗುಡ್ಡದ ಮೇಲೆ ಇಷ್ಟೆಲ್ಲಾ ಕಟ್ಟಡಗಳಿದ್ದಾಗ್ಯೂ ಶಿರಡಿ ಬಾಬಾ ಕಣ್ತೆರೆದ ಬಾಬು ಮನೆಯ ಎದುರು ಒಂದೆಕರೆ ಪ್ರದೇಶ ಖಾಲಿ ಬಿದ್ದಿದೆ. ಮುಖ್ಯರಸ್ತೆಯ ಪಕ್ಕದಲ್ಲೇ ಇರುವ ಈ ಜಾಗಕ್ಕೆ ಇವತ್ತು ಕೋಟ್ಯಂತರ ರೂಪಾಯಿ ಬೆಲೆಯಿದೆ. ಈ ಜಾಗವನ್ನು ಲಪಟಾಯಿಸಲೇನಾದರೂ ಬಾಬು ಇಂಥ ಆಟ ಕಟ್ಟಿದ್ದಾನಾ? ಕೆಲವು ಸ್ಥಳೀಯರ ಪ್ರಕಾರ ಇದು ಹೌದು. ಆದರೆ ಲಪಟಾಯಿಸಲು ಹೊರಟವನು ಬಾಬು ಮಾತ್ರವೇ ಅಲ್ಲ, ಈ ಸಂಚಿನ ಹಿಂದೆ ದೊಡ್ಡ ಕೈಗಳಿವೆ. ಆ ಕೈಗಳು ಬಾಬುವನ್ನು ದಾಳವಾಗಿ ಬಳಸಿಕೊಂಡು ಬಾಬಾನ ಪವಾಡ ಆಡಿಸುತ್ತಿದ್ದಾರೆ. ಜನ ಒಮ್ಮೆ ಇದನ್ನು ನಂಬಿಬಿಟ್ಟರೆ ಅಲ್ಲೊಂದು ಶಿರಡಿ ಮಂದಿರ ಎಬ್ಬಿಸಿ, ಅದಕ್ಕೊಂದು ಟ್ರಸ್ಟ್ ಅಥವಾ ಸಮಿತಿ ರಚಿಸಿ ಬಿಟ್ಟರೆ ಕೋಟ್ಯಂತರ ರೂಪಾಯಿ ಆಸ್ತಿ ಯಾರದೋ ಪಾಲಾಗಿಬಿಡುತ್ತದೆ.

ಈಗಾಗಲೇ ಈ ಜಾಗದ ಸೌಮ್ಯಕ್ಕಾಗಿ ಗೋಸಾಯಿ ಮಠದವರು ಕೇಸು ಹಾಕಿದ್ದಾರೆ. ಸಂಖ್ಯೆ 786/96 ರ ಈ ಕೇಸು ಇತ್ಯರ್ಥವಾಗುವಷ್ಟರಲ್ಲಿ ಜನರಲ್ಲಿ ಭಕ್ತಿ ಕೆರಳಿಸಿ ಜಾಗವನ್ನು ಹೊಡೆಯುವುದು ಇವರ ಹುನ್ನಾರ. ಇದೇ ವಿವಾದಿತ ಜಾಗದಲ್ಲೇ ಬಾಬುವಿನ ಮನೆಯೂ ಇದೆ. ಇನ್ನೆರಡು ತಿಂಗಳಲ್ಲಿ ತೀರ್ಪು ಹೊರಬಿತ್ತೆಂದರೆ ಬಾಬು ಮನೆ ಖಾಲಿ ಮಾಡಲೇಬೇಕು. ತನ್ನ ಮನೆಯನ್ನೂ ಉಳಿಸಿಕೊಂಡು ಮುಂದಿನ ಒಂದೆಕರೆಯನ್ನೂ ಲಪಟಾಯಿಸುವ ಜಂಟಿ ಕಾರಸ್ಥಾನ ಒಂದೆಡೆಯಾದರೆ ಮತ್ತೊಂದೆಡೆ ಭಕ್ತರ ದಕ್ಷಿಣೆ ಮತ್ತು ಫೋಟೋ ಮಾರಿದ ದುಡ್ಡಿನಿಂದ ತನ್ನ ಸಾಲವನ್ನೂ ತೀರಿಸಬಹುದು.

ಇದು ಪಾಖಂಡಿ ಬಾಬುವಿನ ಮಸಲತ್ತು. ಸದ್ಯ ಆತನ ಬೆಂಗಾವಲಿಗೆ ನಿಂತ ಹಳೇ ರೌಡಿ ಮಾಚ ಮತ್ತು ಕೇಬಲ್ ಗೋವಿಂದ ಇಬ್ಬರೂ ಗವಿಗಂಗಾಧರೇಶ್ವರ ದೇವಸ್ಥಾನದ ಅರ್ಚಕ ಸೋಮಸುಂದರ ದೀಕ್ಷಿತನ ಬಂಟರೆ. ಇಂಥ ಪ್ರಚಂಡ ಐಡಿಯಾಗಳನ್ನು ಕೊಡುವುದರಲ್ಲಿ ದೀಕ್ಷಿತನದು ಎತ್ತಿದ ಕೈ. ಬಾಬಾ ಒಂದೇ ಕಣ್ಣನ್ನು ಏಕೆ ಬಿಟ್ಟ? ತನ್ನ ಕಾರ್ಯಕ್ಷೇತ್ರ ಶಿರಡಿಯನ್ನು ಬಿಟ್ಟು ಬೆಂಗಳೂರಿಗೆ ಏಕೆ ಬಂದ? ಕಣ್ಣನ್ನೇ ಬಿಟ್ಟವನಿಗೆ ಮಾತಾಡುವುದು ಏನು ಕಷ್ಟ? ಎರಡೂ ಕಣ್ಣು ಬಿಡಬಹುದಿತ್ತಲ್ಲ? ಬಿಟ್ಟಿದ್ದ ಒಂದೇ ಕಣ್ಣಾದರೂ ಅದೇಕೆ ಚಲಿಸುತ್ತಿಲ್ಲ? ಪವಾಡ ತೋರುವುದೇ ಆಗಿದ್ದಲ್ಲಿ ಇನ್ನೂ ಸ್ಪಷ್ಟವಾಗಿ, ಅನುಮಾನಕ್ಕೆಡೆಯಿಲ್ಲದೇ ನೇರವಾಗಿ ಹೇಳಬಹುದಿತ್ತಲ್ಲ?

ಹೀಗೆ ಬಾಬಾ ವಿಗ್ರಹದ ಸುತ್ತ ಒಂದರ ಮೇಲೊಂದು ಪ್ರಶ್ನೆಗಳೇಳುತ್ತಲೇ ಇವೆ. ಹಕೀಕತ್ತೇನೆಂದರೆ ಬಾಬಾ ವಿಗ್ರಹವಿರುವುದು ಬಾಬು ಮನೆಯ ಪುಟ್ಟ ಕೋಣೆಯೊಂದರ ಅರೆಕತ್ತಲಲ್ಲಿ, ನೋಡುವವರು ಕೋಣೆಯ ಹೊರಗಿನಿಂದಲೇ ಆತುರಾತುರವಾಗಿ ನೋಡಬೇಕು. ಎಲ್ಲರೂ ತೆರೆದ ಎಡಗಣ್ಣನ್ನೇ ನೋಡುತ್ತಾರೆ. ಮುಚ್ಚಿದ ಬಲಗಣ್ಣಿನ ಮೇಲೆ ಯಾರ ದೃಷ್ಟಿಯೂ ಬೀಳುವುದಿಲ್ಲ, ಬಹುಶಃ ಯಾರೂ ಗಮನಿಸದ ಒಂದು ಅಂಶವೇನೆಂದರೆ ಮುಚ್ಚಿದ ಬಲಗಣ್ಣಿನ ಮೇಲೆ ಉದ್ದೇಶಪೂರ್ವಕವಾಗಿ ಸೀಮೆಂಟ್ ಅಥವಾ ಪ್ಲಾಸ್ಟರ್ ಆಫ್ ಪ್ಯಾರೀಸ್ ಮೆತ್ತಿರುವುದು!

ಪೊಲೀಸರಾಗಲಿ, ಸರ್ಕಾರದ ವಿಜ್ಞಾನ ತಂತ್ರಜ್ಞಾನ ಇಲಾಖೆಯಾಗಲಿ ಈ ವಿಗ್ರಹವನ್ನು ಪರೀಕ್ಷಿಸಿಬಿಟ್ಟರೆ on the spot ಸತ್ಯ ಬಯಲಾಗುತ್ತದೆ. ಯಾರೇ ಪ್ರಜ್ಞಾವಂತರು ಹೋಗಿ ಪರೀಕ್ಷಿಸಿದರೂ ಬಾಬು ಬಣ್ಣ ಬಯಲಾಗುತ್ತದೆ. ಹಿಂದಾದರೆ ಎಚ್. ನರಸಿಂಹಯ್ಯನವರಿದ್ದರು. ವಿಚಾರವಾದಿವೇದಿಕೆಗಳಿದ್ದವು. ಈಗಿರುವುದು ವೈದಿಕ ಸರ್ಕಾರ!

ಇದೇನೇ ಇರಲಿ "ಭಕ್ತರ ಗಲಾಟೆ, ಪತ್ರಿಕೆ ಮತ್ತು ಟೀವಿ ಚಾನಲ್‌ಗಳಿಂದ ಸಿಕ್ಕಾಪಟ್ಟೆ ತೊಂದರೆ ಆಗಿದೆ ಸಾರ್, ಎಲ್ಲಿ ಬಾಬಾ ಬೇಜಾರ್ ಮಾಡ್ಕಂಡು ಮತ್ತೆ ಕಣ್ಣು ಮುಚ್ಚಿಬಿಡ್ತಾನೋ ಅಂತ ನಂಗೇ ಭಯ ಆಗ್ತಿದೆ' ಎಂದು ಅಲವತ್ತು ಕೊಳ್ಳುವ ಭಕ್ತಾಗ್ರೇಸರ ಬಾಬುವಿನ ಮಾತು ಕೇಳಿದರೆ, ಆತ ಈ ವರದಿ ಪ್ರಕಟವಾಗುವಷ್ಟರಲ್ಲಿ ಬಾಬಾನ ಕಣ್ಣು ಮುಚ್ಚಿಸುವ ಸಂಭವವೂ ಇದೆ ಅಥವಾ ಮತ್ತೊಂದು ಕಣ್ಣು ಬಿಟ್ಟರೂ ಅಚ್ಚರಿಯಿಲ್ಲ. ಒಟ್ಟಿನಲ್ಲಿ ಈ ಹಿಂದೆ ಹಾಲು ಕುಡಿದ ಗಣೇಶನೆದುರು ಸಾಷ್ಟಾಂಗ ಬಿದ್ದಿದ್ದ ಮುಗ್ಧ ಭಕ್ತರು ಈ ಬಾರಿ ಕಣ್ತೆರೆದ ಶಿರಡಿ ಬಾಬಾನ ಮುಂದೆ ಕೈಮುಗಿದು ನಿಂತಿದ್ದಾರೆ. ಗುಟ್ಟಳ್ಳಿ ಪವಾಡದಿಂದ ಉತ್ತೇಜಿತಳಾದ ಇನ್ನಾರೋ ಯಲಹಂಕದ ಹೆಂಗಸೊಬ್ಬಳು ತನ್ನ ಮನೆಯಲ್ಲಿ ಬಾಬಾ ಬಲಗಣ್ಣು ಬಿಟ್ಟಿದ್ದಾನೆಂದು ಮತ್ತೊಂದು ಕತೆ ಕಟ್ಟಿದ್ದಾಳೆ. ಅಲ್ಲೂ ಮೂರ್ಖರು ಸಾಲು ಕಟ್ಟಿ ನಿಂತಿದ್ದಾರೆ.

ಸದ್ಯ ಬೆಂಗಳೂರಿನಲ್ಲಿ ನಡೆಯುತ್ತಿರುವುದು 'ಹುಚ್ಚು



ಹಚ್ಚು ರೊಕ್ಕಾ ಬಾಚು' ಎಂಬುದಷ್ಟೇ. ಇದೊಂಥರದ ಕಣ್ ಹೊಡಿಯೋ ಸಾಯಿಬಾಬಾನ ಕತೆಯಾಯ್ತು. ಹೀಗೆ ಯಾರೆಲ್ಲ ಕಣ್‌ಕಟ್ಟು ಮಾಡಿ ಜನರನ್ನು ಮುಂಡಾಯಿಸುತ್ತಿದ್ದಾರೋ ಅಂಥ ಒಬ್ಬನನ್ನು ಹಿಡಿದು ಪೊಲೀಸರು ಲಾಕಪ್ಪಿಗೆ ದಬ್ಬಲಿ. ಬಾಬಾ ಪವಾಡವೂ ನಿಲ್ಲುತ್ತದೆ. ಒಕ್ಕಣ್ಣ ಬಾಬಾ ಹೆಸರಲ್ಲಿ ಮುಕ್ಕುವ ಖದೀಮರೂ ಬಾಲ ಮುದುರಿಕೊಳ್ಳುತ್ತಾರೆ. ಕನಿಷ್ಠ ಪೊಲೀಸ್ ಕಮೀಷನರ್ ಶಂಕರ್ ಬಿದರಿಯವರಾದರೂ ಈ ನಿಟ್ಟಿನಲ್ಲಿ ಯೋಚಿಸಬೇಕು.

ಹಾಗೊಂದು ವೇಳೆ ಪವಾಡ ನಿಜವೇ ಆಗಿದ್ದರೆ ಲಾಕಪ್ಪು ಸೇರಿದ ತನ್ನ ಭಕ್ತನನ್ನು ಬಾಬಾ ಖಂಡಿತ ಬಿಡಿಸಿಕೊಳ್ಳುತ್ತಾನೆ. ಕಲ್ಲಿನಲ್ಲೇ ಕಣ್ಣು ಬಿಟ್ಟವನಿಗೆ ಲಾಕಪ್ಪಿನಿಂದ ಭಕ್ತನನ್ನು ಬಿಡಿಸುವುದು ಯಾವ ಮಹಾ? ■

ಶಿರಡಿ ಸಾಯಿಬಾಬಾ ಜನಸಾಮಾನ್ಯರ ಸಂತ

▶▶▶

ಇಟ್ಟುಕೊಳ್ಳದೆ ಸಾಯಿಬಾಬಾ ಇಸ್ಲಾಮ್, ಸೂಫಿಸಂ ಹಾಗೂ ಹಿಂದೂ ಪರಂಪರೆಯನ್ನು ಸಮನ್ವಯಗೊಳಿಸಿದ ಮೌಲ್ಯಗಳನ್ನು ಹಾಗೂ ಜೀವನ ಪದ್ಧತಿಯನ್ನು ಪ್ರತಿಪಾದಿಸಿದ. ಪ್ರಧಾನವಾಗಿ ಈತ ಸೂಫಿ ಹಾಗೂ ನಾಥ ಪರಂಪರೆಯ ಸಂತ. ಶಿರಡಿ ಸಾಯಿಬಾಬಾ 1918 ರಲ್ಲಿ ದೇಹ ತ್ಯಜಿಸುವ ವೇಳೆಗೆ ಭಾರತದಾದ್ಯಂತ ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್ ಹಾಗೂ ಜೋರಾಷ್ಟ್ರಿಯನ್ ಧರ್ಮದ ಅನುಯಾಯಿಗಳು ಹಾಗೂ ಆರಾಧಕರನ್ನು ಪಡೆದಿದ್ದರು. ಹಿಂದೂಗಳು ಬಾಬಾರನ್ನು ಶಿವನ ಅವತಾರ, ದತ್ತಾತ್ರೇಯ ಎಂದು ಭಾವಿಸಿದರೆ ಮುಸ್ಲಿಮರು ಆತನೊಬ್ಬ ಫಕೀರ, ಹಜರತ್ ಎಂದೇ ನಂಬಿ ಆರಾಧಿಸುತ್ತಿದ್ದರು. ತನ್ನ ಜೀವನವಿಡಿ ಶಿರಡಿಯ ಹಳೇ ಮಸೀದಿಯೊಂದರಲ್ಲೇ ಬದುಕಿದ ಸಾಯಿಬಾಬಾ ಸತ್ತಾಗ ಆತನ ಅಪೇಕ್ಷೆಯಂತೆ ಹಿಂದೂ ಪದ್ಧತಿಯ ಸಮಾಧಿ ಮಂದಿರ ನಿರ್ಮಿಸಿ ದೇಹ ಹೂಳಲಾಯಿತು.



ಶಿರಡಿ ಸಾಯಿಬಾಬಾ ತನ್ನ ಶಿಷ್ಯರೊಂದಿಗೆ...


ಶಿರಡಿ ಸಾಯಿಬಾಬಾರ ಬಹುತೇಕ ಚಿತ್ರಗಳಲ್ಲಿ ಅವರ ಬಳಿ ನಾಯಿಯೊಂದು ಇರುವುದು ಕಾಣಸಿಗುತ್ತದೆ. ನಾಥಪಂಥೀಯರಾದ ಗುರು ಗೋರಖನಾಥ, ಬಾಬಾಬುಡನ್‌ಗಿರಿಯ ದತ್ತಾತ್ರೇಯ ಸೂಫಿ ಇವರೂ ಅದೇ ತರಹದವರೆ. ಆದರೆ ಇತ್ತೀಚೆಗೆ ಶಿರಡಿ ಸಾಯಿಬಾಬಾರನ್ನು ಕೇಸರಿಕರಣಗೊಳಿಸುವ ಹುಂಬ ಪ್ರಯತ್ನಗಳಾಗುತ್ತಿವೆ. ಸಾಯಿಬಾಬಾರ ಶ್ವಾನಪ್ರೀತಿ ಎಷ್ಟಿತ್ತೆಂದರೆ ಅವರ ಪ್ರೀತಿಯ ನಾಯಿ ಸತ್ತಾಗ ಅದರ ಹೆಸರಲ್ಲೇ 'ಶ್ರೀ ಭೈರವರ್ ಸಾಯಿ ಟೆಂಪಲ್' ಒಂದನ್ನು ನಿರ್ಮಿಸಲಾಗಿದೆ.

ಶಿರಡಿ ಸಾಯಿಬಾಬಾ ವಾಸವಿದ್ದ ಮಸೀದಿಯಲ್ಲಿ ಸದಾ ಬೆಂಕಿ ಉರಿಯುತ್ತಿದ್ದು ನೆರವು ಯಾಚಿಸಿ ಬರುವ ಜನರಿಗೆ ಬಾಬಾ ಕೈಲಾದ ಸಹಾಯ ನೀಡಿ ಜೊತೆಗೆ ಸ್ವಲ್ಪ ಬೂದಿಯನ್ನೇ ಪ್ರಸಾದವೆಂಬಂತೆ ನೀಡಿ ಕಳುಹಿಸುತ್ತಿದ್ದರು. ಸತ್ತಾಗ ಅವರ ಬಳಿ ಬರೀ 16 ರೂಪಾಯಿ ಇತ್ತಂತೆ! ಬದುಕಿದ್ದಾಗ ಹಾಗೂ ಸತ್ತ ನಂತರವೂ ಶಿರಡಿ ಸಾಯಿಬಾಬಾ ಸಾವಿರಾರು ಪವಾಡಗಳನ್ನು ನಡೆಸಿದರೆಂದು ಸುದ್ದಿಯಾಗುತ್ತಲೇ ಇರುತ್ತದೆ. ಈಗ ಬೆಂಗಳೂರಲ್ಲಿ ಕಣ್ಣು ತೆರೆದರೆಂಬ ಹಾಸ್ಯಾಸ್ಪದ ರೂಮರ್ ಹೊರತುಪಡಿಸಿದರೆ ಉಳಿದ ಬಹುತೇಕವು ಬಡವರಿಗೆ ನೊಂದವರಿಗೆ ಆತ್ಮಸ್ಥೈರ್ಯ ನೀಡುವ, ಸಾಂತ್ವನ ನೀಡುವಂತ ಪವಾಡ ಕತೆಗಳವು. ನಂತರ ಏನಾಯಿತೆಂದರೆ 1918 ರಲ್ಲಿ ಶಿರಡಿ ಸಾಯಿಬಾಬಾ ತೀರಿಕೊಂಡಾಗ ಅವರಿಗೆ ದೇಶಾದ್ಯಂತ ಲಕ್ಷಾಂತರ ಅನುಯಾಯಿಗಳಿದ್ದರು. ಅದನ್ನು ಉಪಾಯವಾಗಿ ಬಳಸಿಕೊಂಡು ಲಾಭ ಮಾಡಿಕೊಂಡವನೆ ಆಂಧ್ರದ ಸತ್ಯನಾರಾಯಣ ರಾಜು ಎಂಬ ಖದೀಮ. 1926 ರಲ್ಲಿ ಹುಟ್ಟಿದ ಈ ಸತ್ಯ 1943 ರಲ್ಲಿ ಆಂಧ್ರದ ಉರುಮ ಗೊಂಡಂನಲ್ಲಿ 'ನಾನೇ ಶಿರಡಿ ಸಾಯಿಬಾಬಾನ ಪುನರಾವತಾರ' ಎಂದು ಕಿರುಚಿಕೊಂಡ. ವಿಕಾರವಾಗಿ ಕೂದಲು ಬೆಳೆಸಿಕೊಂಡು, ಹತ್ತಿರ ಬಂದ ಜನರಿಗೆ ಬೂದಿ ಕೊಟ್ಟು, ಶಿರಡಿ ಸಾಯಿಬಾಬಾರ ಕೆಲ ಜನಜನಿತ ಬೋಧನೆ, ವರ್ತನೆಗಳನ್ನು ಅನುಕರಣೆ ಮಾಡತೊಡಗಿದ. ಕ್ರಮೇಣ ದುಡ್ಡೂ ಮಾಡಿಕೊಂಡ, ಆಶ್ರಮ, ಲ್ಯಾಂಡ್ ಡೀಲ್, ವೇಪನ್ಸ್ ಡೀಲ್,-ಹತ್ಯೆ ರಾಜಕಾರಣ, ಸಮಾಜ ಸೇವೆ ಎಲ್ಲವನ್ನು ಬೆರೆಸಿಕೊಂಡು ಬೆಳೆದೂ ಬೆಳೆದು...

ಈಗ ಪುಟ್ಟಪರ್ತಿ ಸಾಯಿಬಾಬಾ ಎನಿಸಿಕೊಂಡಿದ್ದಾನೆ.

ಆದರೂ ಜನ ಪೂರ್ತಿಯಾಗಿ ಇವನನ್ನು ನಂಬಲಿಲ್ಲ. ಹಾಗಾಗಿಯೇ ಶಿರಡಿ ಸಾಯಿಬಾಬಾರ ಕಳಂಕರಹಿತ ಸರ್ವಧರ್ಮ ಸಮನ್ವಯದ ಪ್ರಸಿದ್ಧಿ ಈಗಲೂ ಉಳಿದುಕೊಂಡಿದೆ.

■ ಪಾರ್ವತೀಶ್



ಕೊಳ್ಳೇಗಾಲ: ಸತ್ಯಭಾಮ ಎಂಬ ಸರ್ವಾಧಿಕಾರಿಣಿ!

ಈಯಮ್ಮನ ಹೆಸರು ಸತ್ಯಭಾಮ. ಕೊಳ್ಳೇಗಾಲದ ಉಪವಿಭಾಗಾಧಿಕಾರಿ. ರೂಪ ಮತ್ತು ಗಾತ್ರವನ್ನು ಹೋಲಿಸಿದರೆ ಸಿಟ್ಟು ಸೆಡಕಿನಲ್ಲಿ ಮಾರಿಮುತ್ತುವನ್ನೇ ಹೋಲುತ್ತಾರೆ. ಇತ್ತೀಚೆಗಂತೂ ಅದ್ಯಾಕೆ ಹಂಗೆ ಕುಂಡಿಗೆ ಚೇಳು ಕಡಿದಂತೆ ಆಡುತ್ತಿದ್ದಾರೋ ಗೊತ್ತಿಲ್ಲ. ಬಂದಾದಮೇಲೊಂದರಂತೆ ಕಿತಾಪತಿ ಮಾಡಿಕೊಂಡು ಈಗ ಕೊಳ್ಳೇಗಾಲ ನ್ಯಾಯಾಲಯದ ವಕೀಲರು ಇವರನ್ನು ಬಹಿಷ್ಕರಿಸಿಬಿಟ್ಟಿದ್ದಾರೆ.

ಭ್ರಷ್ಟಾತಿಭ್ರಷ್ಟನಾಗಿದ್ದ ಈ ಹಿಂದಿನ ಉಪವಿಭಾಗಾಧಿಕಾರಿ ಶಂಕರಪ್ಪ ಲೋಕಾಯುಕ್ತರ ಬಲೆಗೆ ಬಿದ್ದು ವಿಲವಿಲ ಒದ್ದಾಡಿ ಸಸ್ಪೆಂಡ್ ಆದ ನಂತರವಾದರೂ ಈ ಸ್ಥಾನಕ್ಕೆ ಒಳ್ಳೆಯ ಅಧಿಕಾರಿಯೊಬ್ಬರು ಬರುತ್ತಾರೆಂದು ಕೊಳ್ಳೇಗಾಲದ ಜನ ಆಶಿಸಿದ್ದರು. ಆದರೆ ಬಂದಿದ್ದು ಈ ಸತ್ಯಭಾಮ ಎಂಬ ಸರ್ವಾಧಿಕಾರಿಣಿ. [illegible]ದೋದು ಬಿಟ್ಟು ಬಾರಿಸೋದು [illegible]ಗೊಂಡಂತಾಗಿದೆ ಕೊಳ್ಳೇಗಾಲ ಜನರ ಸ್ಥಿತಿ.

ಅಜ್ಞಾನದ ಮಹಾತ್ಮೆ!

ಉಪವಿಭಾಗಾಧಿಕಾರಿಯಾಗಿರುವ ಸತ್ಯಭಾಮ ಎಕ್ಸಿಕ್ಯೂಟಿವ್ ಜಡ್ಜ್ ಕೂಡ ಹೌದು. ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್‌ಆರ್‌ಟಿ ಪ್ರಕರಣಗಳು ಸಾಲುಗಟ್ಟಿ [illegible]ತಿವೆ. ಈಯಮ್ಮ ಬಂದು ಕುಳಿತಾಗಿನಿಂದ ಈತನಕ [illegible]ಟ್ಟಿಗೆ ಒಂದು ಪ್ರಕರಣವೂ ಇತ್ಯರ್ಥವಾಗಿಲ್ಲ. ಪ್ರಕರಣಗಳನ್ನು [illegible]ಗೆಹರಿಸುವ ಕಡೆಗೆ ಗಮನ ಕೊಡುವುದನ್ನು ಬಿಟ್ಟು ಸುಮ್ಮನಿರಲಾರದೇ ಅದೇನನ್ನೋ ಕೆರೆದುಕೊಂಡು ಹುಣ್ಣು ಮಾಡಿಕೊಂಡರು ಅಂತಾರಲ್ಲ ಹಾಗೆ ಒಂದಲ್ಲಾ ಒಂದು [illegible]ವಾದವನ್ನು ಸೃಷ್ಟಿಸುತ್ತಿದ್ದಾರೆ.

ವಕಾಲತ್ತು ವಹಿಸಬೇಕಾದ ವಕೀಲರು ಒಂದು ವೇಳೆ [illegible]ರುಹಾಜರಾದಲ್ಲಿ ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರ ಪ್ರತಿನಿಧಿಯಾಗಿ ಅವರ ಜಾಗದಲ್ಲಿ ಮತ್ತೊಬ್ಬ ವಕೀಲರು [illegible]ಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ಅವಕಾಶವಿದೆ. ಆದರೆ ಸತ್ಯಭಾಮಗೆ ಈ ದೇಶದ ಕಾನೂನನ್ನು, ಸಂವಿಧಾನವನ್ನು [illegible]ರವಿಸುವ ಕನಿಷ್ಠ ಜವಾಬ್ದಾರಿಯಿಲ್ಲ. ಆದ್ದರಿಂದಲೇ ವಕೀಲರುಗಳ ವಿರುದ್ಧವೇ ಸಿಡಿಮಿಡಿಗೊಂಡು ಹರಿಹಾಯು[illegible]ತ್ತಾಳೆ. ಇವಳ ಬಾನಗಡಿಗಳನ್ನು ಈತನಕ ಸಹಿಸುತ್ತಾ [illegible]ಬಂದಿರುವ ಕೊಳ್ಳೇಗಾಲ ಮತ್ತು ಚಾಮರಾಜನಗರಗಳ ಬಾರ್ ಅಸೋಸಿಯೇಶನ್‌ಗಳ ವಕೀಲರುಗಳು ಮೊನ್ನೆ ಜೂನ್ 28ರಂದು ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸತ್ಯಭಾಮ ಕೊಳ್ಳೇಗಾಲದಲ್ಲಿ ಉಪವಿಭಾಗಾಧಿಕಾರಿಯಾಗಿರುವತನಕ ಅವರ ನ್ಯಾಯಾಲಯದ ಕಾರ್ಯಕಲಾಪಗಳಿಗೆ ಹಾಜರಾಗದಿರುವ ನಿರ್ಧಾರ ಮಾಡಿದ್ದಾರೆ. ಅಂದರೆ ವಾಸ್ತವದಲ್ಲಿ ಸತ್ಯಭಾಮರನ್ನು ಬಹಿಷ್ಕರಿಸಿದ್ದಾರೆ.

ಅಸಲಿಗೆ ಸತ್ಯಭಾಮಾಗೆ ಉಪವಿಭಾಗಾಧಿಕಾರಿಯಾಗುವ [illegible] ಎಕ್ಸಿಕ್ಯೂಟಿವ್ ಜಡ್ಜ್ ಆಗಿ ಕಾರ್ಯನಿರ್ವಹಿಸುವ [illegible] ಅರ್ಹತೆಯೂ ಇಲ್ಲ. ಜಡ್ಜ್ ಆಗುವುದಕ್ಕಿಂತ [illegible]ದಾದರೊಂದು ರಾಜಕೀಯ ಪಕ್ಷದ ಏಜೆಂಟರಾಗಿ [illegible] ಮಾಡುವುದಕ್ಕೆ ಚೆನ್ನಾಗಿದ್ದಾರೆ.

ವಕೀಲರಿಗೇ 'ಗೆಟ್‌ಔಟ್' ಆದೇಶ!

ಚಾಮರಾಜನಗರ ಮತ್ತು ಕೊಳ್ಳೇಗಾಲದ ಜನ ಈಕೆಯ [illegible]ರುದ್ಧ ಇನ್ನೊಂದು ಸಿಡಿದೇಳುವುದಕ್ಕೆ ಇನ್ನೂ ಒಂದು [illegible]ವಿದೆ. ಈಯಮ್ಮ ಈ ದೇಶದ ಕಾನೂನು, ಸಂವಿಧಾನಗಳನ್ನು ಹೇಗೆ ತುಚ್ಛವಾಗಿ ಕಾಣುತ್ತಾಳೋ [illegible] ರೀತಿಯಲ್ಲಿ ತಮ್ಮದುರಿಗಿರುವ ವಕೀಲರನ್ನೂ ನೋಡುತ್ತಾಳೆ. ಮೊನ್ನೆ ನಡೆದ ಒಂದು ಘಟನೆಯನ್ನೇ ನೋಡಿ. ನ್ಯಾಯಾಲಯದ ಆವರಣದಲ್ಲಿಯೇ ವಕೀಲರೊಬ್ಬರಿಗೆ 'ಗೆಟ್ ಔಟ್' ಎಂದು ಗದರಿಸಿದ್ದಾಳೆ. ಈಕೆಯ ಈ ಸರ್ವಾಧಿಕಾರಿ ವರ್ತನೆಯ ವಿರುದ್ಧ ಈಗಾಗಲೇ ಕಂದಾಯ ಮಂತ್ರಿ, ಕಂದಾಯ ಇಲಾಖೆಯ ಮುಖ್ಯ ಕಾರ್ಯದರ್ಶಿ ಮತ್ತು ಜಿಲ್ಲಾಧಿಕಾರಿಗಳಿಗೆ ದೂರು ನೀಡಲಾಗಿದೆ. ಮೇಲಧಿಕಾರಿಗಳು ಮತ್ತು ಮಂತ್ರಿಗಳೇನಾದರೂ ಇದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದೇ ಆದಲ್ಲಿ ಸತ್ಯಭಾಮ ಕೊಳ್ಳೇಗಾಲದಿಂದ ಎತ್ತಂಗಡಿಯಾಗುವುದು ಗ್ಯಾರಂಟಿ. ಆಗಲಾದರೂ ಜನಕ್ಕೆ, ವಕೀಲರಿಗೆ ಒಂದಿಷ್ಟು ನೆಮ್ಮದಿ ಸಿಕ್ಕೀತು.

ದಲಿತ ವಿರೋಧಿ!

ಸತ್ಯಭಾಮರ ಭಾನಗಡಿಗಳು ಒಂದೆರಡಲ್ಲ. ಸೋಕಾಲ್ಡ್ ಉನ್ನತ ಜಾತಿಯಲ್ಲಿ ಹುಟ್ಟಿದ್ದೇ ಅವಳಿಗೆ ಕೋಡು ಬಂತಂತಾಗಿಬಿಟ್ಟಿದೆ. ಕೆಳ ಅಧಿಕಾರಿಗಳು, ವಕೀಲರು, ಆರೋಪಿಗಳು ಕೆಳಜಾತಿಯವರಾದರಂತೂ ಅವರಿಗೆ ಪಕ್ಷಪಾತಿ ಅನ್ಯಾಯ ತಪ್ಪಿದ್ದಲ್ಲ. ಕಳೆದ ತಿಂಗಳು ನಡೆದ ಒಂದು ಘಟನೆಯನ್ನೇ ನೋಡಿ. ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲ ಗ್ರಾಮ ಲೆಕ್ಕಾಧಿಕಾರಿ ಮಹಾದೇವು ಅವರು ದಲಿತ ಜಾತಿಗೆ ಸೇರಿದವರು ಎಂಬ ಒಂದೇ ಕಾರಣಕ್ಕೆ ಅವರ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ಸಸ್ಪೆಂಡ್ ಮಾಡಿದ್ದರು. ಆತ ಈ ಆದೇಶದ ವಿರುದ್ಧ ಜಿಲ್ಲಾಧಿಕಾರಿ ನ್ಯಾಯಾಲಯದ ಮೆಟ್ಟಿಲೇರಿ ನ್ಯಾಯ ಪಡೆದುಕೊಂಡಿದ್ದರು.

ಅಷ್ಟೇ ಅಲ್ಲ, ಮಹಾದೇವು ಅವರು ಸತ್ಯಭಾಮ ತನ್ನನ್ನು ದಲಿತ ನೌಕರನೆಂದು ನಿಂದಿಸಿ ಸರ್ವಾಧಿಕಾರಿಯಂತೆ ದೌರ್ಜನ್ಯ ನಡೆಸುತ್ತಿದ್ದಾರೆಂದು ಎಸ್‌ಸಿ/ಎಸ್‌ಟಿ ಇಲಾಖೆಗೆ ದೂರು ನೀಡಿದ್ದಾರೆ. ದಲಿತನೆಂಬ ಕಾರಣಕ್ಕೆ ಮಹಾದೇವು ಅವರಿಗೆ ಸತ್ಯಭಾಮ ಕಿರುಕುಳ ನೀಡುತ್ತಿರುವುದರ ವಿರುದ್ಧ ಜನ ಕೂಡ ಅವಳ ವಿರುದ್ಧ ಕೆಂಡಕಾರುತ್ತಿದ್ದಾರೆ. ಒಟ್ಟಿನಲ್ಲಿ ಅವರೆಲ್ಲ ಸೇರಿ ಸತ್ಯಭಾಮಗೆ ಗ್ರಹಚಾರ ಬಿಡಿಸುವುದಂತೂ ಗ್ಯಾರಂಟಿ.



ಶಂಕರಪ್ಪ



ವಿಶ್ವನಾಥರೆಡ್ಡಿ



ನಾಗರಾಜ್

ತಹಶೀಲ್ದಾರ್‌ಗೂ ಕಿರುಕುಳ!

ಸತ್ಯಭಾಮ ಅವರ ಸ್ವಜನಪಕ್ಷಪಾತಿ ಕಿತಾಪತಿಗಳನ್ನು ಕೆದಕುತ್ತಾ ಹೋದರೆ ಅದೇ ಒಂದು ಉದ್ಗ್ರಂಥವಾಗಿಬಿಡುತ್ತದೆ. ಕೊಳ್ಳೇಗಾಲದ ತಹಶೀಲ್ದಾರ್ ಆಗಿದ್ದ ದಕ್ಷ ಅಧಿಕಾರಿ ಎ.ನಾಗರಾಜ್ ತನ್ನ ಆಣತಿಯಂತೆ ಕುಣಿಯದ ಕಾರಣ ಅವರಿಗೆ ಈಕೆ ಕೊಟ್ಟ ಕಿರುಕುಳ ಅಷ್ಟಿಷ್ಟಲ್ಲ. ಕೊನೆಗೆ ಇತ್ತೀಚೆಗಷ್ಟೇ ರಾಜ್ಯ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾಗಿ ವರ್ಗವಾಗಿ ಹೋಗಿರುವ ಚಾಮರಾಜನಗರ ಜಿಲ್ಲಾಧಿಕಾರಿ ವಿಶ್ವನಾಥ ರೆಡ್ಡಿಯ ಕಿವಿಕಚ್ಚಿ ನಾಗರಾಜ್ ಅವರನ್ನು ಎತ್ತಂಗಡಿ ಮಾಡಿಸಿ ತನ್ನ ಸೇಡನ್ನು ತೀರಿಸಿಕೊಂಡೇ ಬಿಟ್ಟಳು. ಇಡೀ ಆಡಳಿತ ಯಂತ್ರಾಂಗ ತನ್ನ ಆಜ್ಞೆಯಂತೆ ಕುಣಿಯಬೇಕೆಂಬ ಹುಚ್ಚುತನವನ್ನು ನೆತ್ತಿಗೇರಿಸಿಕೊಂಡಿರುವ ಈಕೆಯ ಉಪಟಳಕ್ಕೆ ಬಳಲದ ಅಧಿಕಾರಿಗಳಿಲ್ಲ. ಈಗ ಬಾರ್ ಅಸೋಸಿಯೇಶನ್ ಆಕೆಯ ವಿರುದ್ಧ ಸಿಡಿದೆದ್ದಿರುವುದು ಅವರೆಲ್ಲರಿಗೂ ಖುಷಿ ನೀಡಿದ್ದು ಮಾತ್ರವಲ್ಲ ಸತ್ಯಭಾಮ ವಿರುದ್ಧದ ಹೋರಾಟದಲ್ಲಿ ಅವರೆಲ್ಲರೂ ಕೈಜೋಡಿಸುತ್ತಿದ್ದಾರೆ.

ಎಸಿ ಸತ್ಯಭಾಮ ಅವರು ಕೇವಲ ದರ್ಪ-ದೌರ್ಜನ್ಯಕ್ಕೆ ಮಾತ್ರ ಹೆಸರಾದವರಲ್ಲ. ಜೊತೆಗೆ, ಅಗಾಧವಾಗಿ ಸಾರ್ವಜನಿಕ ಹಣವನ್ನು ಕೊಳ್ಳೆಹೊಡೆಯುವುದರಲ್ಲೂ ನಿಸ್ಸೀಮರಾದವರು. ತನ್ನ ಸಂಬಂಧಿ ಆಹಾರ ಇಲಾಖೆಯ ಉಪನಿರ್ದೇಶಕ ರಾಮೇಶ್ವರಪ್ಪನ ಜೊತೆ ಸೇರಿ ದಲಿತ ರೈತರ ಭೂಮಿಯನ್ನು ಪಿಟಿಸಿಎಲ್ ಕಾಯಿದೆಯನ್ನು ಉಲ್ಲಂಘಿಸಿ ಪರಭಾರೆ ಮಾಡಿರುವುದು ಅವರ ದಲಿತ ವಿರೋಧಿತನವನ್ನು ಮಾತ್ರವಲ್ಲ ಅವರ ಮೇಯುವಿಕೆಯನ್ನೂ ಎತ್ತಿತೋರಿಸುತ್ತದೆ. ಈ ಒಂದು ಪ್ರಕರಣದಲ್ಲಿಯೇ ಅವರಿಬ್ಬರೂ ಸೇರಿ ಕೋಟ್ಯಂತರ ರೂ.ಗಳನ್ನು ಕೊಳ್ಳೆಹೊಡೆದು ಕೊಬ್ಬಿದ್ದಾರೆ. ತನ್ನ ಹುಟ್ಟೂರಾದ ಮಧುಗಿರಿಯಲ್ಲಿ ಕಡಿಮೆ ಎಂದರೂ 80 ಲಕ್ಷ ರೂ. ಬೆಲೆಬಾಳುವ ಭವ್ಯ ಬಂಗಲೆಯನ್ನು ನೆಟ್ಟಿದ್ದಾರೆಂದರೆ ಇವರ ಮೇಯುವಿಕೆಯನ್ನು ಯಾರಾದರೂ ಅರ್ಥಮಾಡಿಕೊಳ್ಳಬಹುದು. ಒಟ್ಟಿನಲ್ಲಿ ಸತ್ಯಭಾಮ ಅವರ ಪಾಪದ ಕೊಡ ತುಂಬಿದಂತಿದೆ. ಅವರನ್ನು ಲೋಕಾಯುಕ್ತ ಬಲೆಗೆ ಕೆಡವಲು ಇವರಿಂದ ದೌರ್ಜನ್ಯ ವಂಚನೆಗೊಳಗಾದ ಜನ ಹೊಂಚು ಹಾಕಿಕುಳಿತಿರುವುದು ಸುಳ್ಳೇನಲ್ಲ. ಸತ್ಯಭಾಮರನ್ನು ಅದ್ಯಾರು ಕಾಪಾಡುತ್ತಾರೋ?

■ ಕೊಳ್ಳೇಗಾಲ ಮಾಳಿಗೆ


ಪಶು ವೀವಿ ಜಾತಿಯ ಮೃಗಗಳಿಗೆ ದಲಿತರೇ ಆಹಾರ

ಪಶುಗಳಿಗಿಂತಲೂ ಅಸಹ್ಯವಾಗಿ ಕಚ್ಚಾಡುವವರನ್ನು, ಜಾತಿ ವೈಷಮ್ಯಕ್ಕೆ ಬಿದ್ದು ಒಬ್ಬರನ್ನೊಬ್ಬರು ತುಳಿಯುವವರನ್ನು, ಪಶುಗಳ ರೋಗರುಜಿನದ ಹೆಸರಲ್ಲಿ ದೋಚುವವರನ್ನು, ಪಶುಗಳೇ ನಾಚುವಷ್ಟು ಕೀಳಾದ ಮನುಷ್ಯ ಪ್ರಾಣಿಗಳನ್ನು ನೋಡಬೇಕೆ?

ಅದರ ಹೆಸರು ಪಶು ವೈದ್ಯಕೀಯ ವಿಶ್ವವಿದ್ಯಾಲಯ! ಇಲ್ಲಿಗೆ ಮೂರುವರೆ ವರ್ಷದ ಹಿಂದೆ ಸರ್ಕಾರ ಪಶುವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯ (KUAFSU) ಎಂಬ ವೀವಿಯೊಂದನ್ನು ಉತ್ತರ ಕರ್ನಾಟಕದ ಬೀದರ್‌ನಲ್ಲಿ ಸ್ಥಾಪಿಸಿದ ಉದ್ದೇಶ ಏನಿತ್ತೋ? ಇದರಿಂದ ಕರ್ನಾಟಕದ ಯಾವ-ಪಶುಪ್ರಾಣಿಗೆ ಲಾಭವಾಯಿತೋ? ಆದರೆ ಮೃಗಗಳು ಕೂಡ ನಾಚುವಂಥ ಜಾತಿಭೇದ, ಸ್ವಜನಪಕ್ಷಪಾತ ಮತ್ತು ಭ್ರಷ್ಟಾಚಾರ ಭುಗಿಲೆದ್ದಿರುವುದಂತೂ ಸತ್ಯ.




ಪ್ರಥಮ ಕುಲಪತಿಗಳಾದ ಡಾ. ಆರ್.ಎನ್. ಶ್ರೀನಿವಾಸಗೌಡ ಹೇಳಿಕೇಳಿ ಹುಟ್ಟಾ ದಲಿತ ವಿರೋಧಿ. ನಿವೃತ್ತಿಯಾಗುವುದಕ್ಕೂ ಮುನ್ನ ತನ್ನ ಕೈಗೊಂಬೆ ಡಾ. ಎಂ. ದೇವರಾಜ್ ಎಂಬ 'ಕುಂಚಿಟಿಗ' ಕುಲಬಾಂಧವರನ್ನೇ ಕುಲಸಚಿವ ಗಾದಿಗೆ ತಂದರು. ಆತನಕ ಕನಿಷ್ಠ ವಕ್ಕಲಿಗ ವೀವಿಯಾಗಿದ್ದ ಪಶುವೀವಿ ಡಾ. ಎಂ. ದೇವರಾಜನಿಂದಾಗಿ ಕುಂಚಿಟಿಗರ ಕೊಂಪೆಯಾಯಿತು. ಮಂಗಳೂರು ಮೀನುಗಾರಿಕೆ ಕಾಲೇಜಿನಲ್ಲಿದ್ದ ಕುಲಬಾಂಧವ ಶಿವಾನಂದ ಮೂರ್ತಿಯನ್ನು ತಂದು ವಿಸ್ತರಣಾ ನಿರ್ದೇಶಕನನ್ನಾಗಿಸಿ, ಮತ್ತೊಬ್ಬ ಜಾತಿವಂತ ಮತ್ತು ಸಂಬಂಧಿ ಎಂ.ಜಿ. ಗೋವಿಂದಯ್ಯನನ್ನು ಶಿವಮೊಗ್ಗದ ಪಶು ವೈದ್ಯಕೀಯ ಕಾಲೇಜಿನ ಡೀನ್ ಹುದ್ದೇಗೇರಿಸಿದ. ಕ್ರಮೇಣ ಗೋವಿಂದಯ್ಯನನ್ನು ವಿಶೇಷ ಕರ್ತವ್ಯಾಧಿಕಾರಿ ಹುದ್ದೆಗೇರಿಸಿ ಆ ಜಾಗಕ್ಕೆ ನರಸಿಂಹಮೂರ್ತಿ ಎಂಬ ಇನ್ನೊಬ್ಬ ಕುಲಸಂಜಾತನನ್ನು ನೇಮಿಸಿದ. ಪ್ರೊಫೆಸರ್ ಆಫ್ ಸರ್ಜರಿಗೆ ರಂಗನಾಥ್ ಉರ್ಫ್ ಬಕೆಟ್‌ರಂಗ, ಫಾರ್ಮ ಕಾಲೇಜಿಗೆ ಜೈಕುಮಾರ್, ಅಸೋಸಿಯೇಟ್ ಪ್ರೊಫೆಸರ್ ಆಗಿ ಹೊನ್ನಪ್ಪ- ಹೀಗೆ ಒಂದೇ ಜಾತಿಯವರೆಲ್ಲ ಪಶು ವೈದ್ಯಕೀಯ ವೀವಿಯ ಆಯಕಟ್ಟಿನಲ್ಲಿ ಜಮೆಗೊಂಡ ಫಲವಾಗಿ ಅನಾಹುತಕಾರಿ ಜಾತಿ ವೈಷಮ್ಯವೊಂದು ಹೆಡೆಯೆತ್ತಿತ್ತು.



ಶ್ರೀನಿವಾಸಗೌಡ



ಯಾರ್‍ಯಾರು ತನ್ನ ಜಾತಿವಂತ ಶಿಕ್ಷಕರ ಬಡ್ತಿಗೆ ಅಡ್ಡಿಯಾಗುತ್ತಾರೋ ಅಂಥವರನ್ನೆಲ್ಲ ಹಿಂಸಿಸಿ ಕಾಟಕೊಡುವುದು, ತನ್ನ ಜಾತಿಬಂಧುಗಳನ್ನೆಲ್ಲ ಬೆಂಗಳೂರಿನಲ್ಲಿ ತಂಪಾಗಿರಿಸಿ ದಲಿತರನ್ನೆಲ್ಲ ಬೀದರ್‌ನ ಬೇಗೆಗೆ ಅಟ್ಟುವುದು, ಸ್ವಜಾತಿ ವಿದ್ಯಾರ್ಥಿಗಳಿಗೆ ಬೇಕಾಬಿಟ್ಟಿ ರಿಯಾಯಿತಿ ಕೊಟ್ಟು ಡಿಗ್ರಿಕೊಡುವುದು, ದಲಿತ ವಿದ್ಯಾರ್ಥಿಗಳನ್ನು ವಿನಾಕಾರಣ ಅಲೆದಾಡಿಸಿ ತನ್ನ ಜಾತಿಯವರ ಮೂಲದಾಖಲೆಗಳನ್ನು ತಿದ್ದಿ ಅನುಕೂಲ ಕಲ್ಪಿಸುವುದು- ಹೀಗೆ ಶುರುವಾದ ಜಾತಿಮೋಹ ಇಡೀ ಪಶುವೀವಿಯನ್ನೇ ಕುಲಗೆಡಿಸಿತು.



ಡಾ.ಎಂ.ದೇವರಾಜ್

ಶ್ರೀನಿವಾಸಗೌಡರ ನಂತರ ಕುಲಪತಿ ಹುದ್ದೆಗೆ ಬಂದ ಜಿ.ಎಸ್. ಭಟ್ ಇದ್ದದ್ದು ಕೇವಲ ಮೂರೇ ತಿಂಗಳು. ಆನಂತರ ಡಾ.ಮಲ್ಲಿಕಾರ್ಜುನಪ್ಪ ಕುಲಪತಿಯಾದರು. ಡಾ. ಜಮುನಾ ಎಂಬ ದಲಿತ ಹೆಣ್ಣು ಮಗಳಿಗೆ ಸಿಗಬೇಕಿದ್ದ ಪ್ರೊಫೆಸರ್ ಬಡ್ತಿಯನ್ನು ವಿನಾಕಾರಣ ತಡೆಹಿಡಿದು ಕಾಟಕೊಟ್ಟ ದೇವರಾಜ್ ವಿರುದ್ಧ ರಾಜ್ಯಪಾಲರ ಕಾರ್ಯದರ್ಶಿಗಳೇ ನೋಟೀಸು ಕೊಟ್ಟಿದ್ದರು. ಜೊತೆಗೆ ಹಿಂದೆ ಕುಲಪತಿಗಳಾಗಿದ್ದ ಭಟ್ ಮತ್ತು ಹಾಲೀ ಕುಲಪತಿ ಮಲ್ಲಿಕಾರ್ಜುನಪ್ಪ ಇಬ್ಬರೂ ಅನ್ಯಾಯ ಸರಿಪಡಿಸುವಂತೆ ಆದೇಶಿಸಿದ್ದರು. ಇಷ್ಟಾಗ್ಯೂ ಡಾ.ಜಮುನಾರಿಗೆ ಬಡ್ತಿ ಕೊಡದಂತೆ ದೇವರಾಜ್ ಅಡ್ಡಗಾಲಿಡುತ್ತಲೇ ಇದ್ದಾನೆ.

ಡೈರಿ ಕಾಲೇಜಿನ ಡಾ.ನಾರಾಯಣಪ್ಪ ಎಂಬ ಮತ್ತೊಬ್ಬ ದಲಿತ ವಿಜ್ಞಾನಿಗೆ ಪ್ರೊಫೆಸರ್‌ಗಿರಿ ತಡೆಹಿಡಿದದ್ದು, ಶಸ್ತ್ರಚಿಕಿತ್ಸಾ ವಿಭಾಗದ ಡಾ.ಬಿ.ಎಸ್.ನಾಗರಾಜ್ ಎಂಬ ದಲಿತ ಶಿಕ್ಷಕರಿಗೆ ಬ್ಯಾಕ್‌ಲಾಗ್ ಮೂಲಕ ಬರಬೇಕಿದ್ದ ಬಡ್ತಿ ನಿಲ್ಲಿಸಿದ್ದು, ಯಲಹಂಕದ ಪಶು ಆಸ್ಪತ್ರೆಯ ನಾಗರಾಜ್ ಎಂಬ ಇನ್ನೊಬ್ಬ ದಲಿತ ವಿಜ್ಞಾನಿಗೆ ಸಿಗಬೇಕಿದ್ದ ಪ್ರೊಫೆಸರ್‌ಗಿರಿಯನ್ನು ತಡೆಗಟ್ಟಿದ್ದು ಇತ್ಯಾದಿಗಳೆಲ್ಲ ರಿಜಿಸ್ಟ್ರಾರ್ ದೇವರಾಜನ ದಲಿತದ್ವೇಷಕ್ಕೆ ಕೆಲ ಉದಾಹರಣೆಗಳಷ್ಟೆ.

ಹೀಗೆ ಯಾರೆಲ್ಲ ದಲಿತ ವಿಜ್ಞಾನಿಗಳಿಗೆ ದೇವರಾಜ್ ಬಡ್ತಿ ತಡೆಹಿಡಿದಿದ್ದಾನೋ ಅವರೆಲ್ಲರೂ ಪ್ರತಿಭಾವಂತರೆ. ಇವರಿಗೇನಾದರೂ ಬಡ್ತಿಕೊಟ್ಟರೆ ಆವರ ನಂತರದ ಸರದಿಯಲ್ಲಿರುವ ತನ್ನ ಜಾತಿಬಂಧುಗಳಿಗೆ ತೊಂದರೆಯಾಗುತ್ತದೆಯಲ್ಲ; ಹಿಂದಿದ್ದ ಕುಲಪತಿ ಶ್ರೀನಿವಾಸಗೌಡ ಮತ್ತು ರಿಜಿಸ್ಟ್ರಾರ್ ದೇವರಾಜ್ ಸೇರಿಯೇ ದಲಿತರ ವಿರುದ್ಧ ಕತ್ತಿ ಮಸೆಯುತ್ತಿದ್ದಾರೆ.

ವಿಚಿತ್ರವೆಂದರೆ ತಮ್ಮದೇ ಜಾತಿಯವನಾದರೆ ಆತ ಅದೆಷ್ಟೇ ಭ್ರಷ್ಟಾಚಾರ ನಡೆಸಿದರೂ ತಪ್ಪಲ್ಲ. ಯಾವ ಡಾ.ಎಂ.ಜಿ.ಗೋವಿಂದಯ್ಯನನ್ನು ಪಶುವಿವಿಯ ವಿಶೇಷ ಕರ್ತವ್ಯಾಧಿಕಾರಿಯನ್ನಾಗಿ ನೇಮಿಸಲಾಯಿತೋ ಆತ ಈ ಹಿಂದೆ ಧಾರವಾಡದಲ್ಲಿದ್ದಾಗ ಎಮ್ಮೆ ಫಾರ್ಮ್‌ನಲ್ಲಿದ್ದ ಎಮ್ಮೆಗಳನ್ನು ಕದ್ದು ಕಟುಕರಿಗೆ ಮಾರಿಕೊಂಡಿದ್ದ. ಈತ ಮತ್ತು ಮಾಜಿ ಕುಲಪತಿ ಶ್ರೀನಿವಾಸಗೌಡ ಸೇರಿಕೊಂಡು ಕೃಷಿ ವಿವಿ ಹೌಸಿಂಗ್ ಸೊಸೈಟಿಯ ದುಡ್ಡು ಹೊಡೆದು 'ಡಿ'ಗ್ರೂಫ್ ನೌಕರರಿಂದ ಒದೆ ತಿಂದರು. ಶಿವಮೊಗ್ಗದ ಪಶು ವೈದ್ಯಕೀಯ ಕಾಲೇಜಿನಲ್ಲಿ ಒಂದೂಕಾಲು ಲಕ್ಷದ ಭ್ರಷ್ಟಾಚಾರವೆಸಗಿ ರೆಡ್‌ಹ್ಯಾಂಡ್ ಸಿಕ್ಕಿಬಿದ್ದವನು ಇದೇ ಗೋವಿಂದಯ್ಯ. ತಮಾಷೆಯೆಂದರೆ ತನ್ನ ಸಂಬಂಧಿ ಗೋವಿಂದಯ್ಯನ ಭ್ರಷ್ಟಾಚಾರದ ತನಿಖೆಗೆಂದು ರಿಜಿಸ್ಟ್ರಾರ್ ದೇವರಾಜ್ ನೇಮಿಸಿದ್ದು ಕೋಳಿಫಾರಂ ಕೊಳ್ಳೇಹೊಡೆದ ನರಸಿಂಹಮೂರ್ತಿಯನ್ನು!

ಏಕೆಂದರೆ ಕುಲಬಾಂಧವರಷ್ಟೇ ಕದ್ದವರೊಂದಿಗೆ ಅಡ್ಜೆಸ್ಟಾಗಲು ಸಾಧ್ಯ ಎಂಬುದು ರಿಜಿಸ್ಟ್ರಾರ್ ದೇವರಾಜನ ನಂಬಿಕೆ. ಸದ್ಯ ಕುಲಪತಿಯಾದ ಮಲ್ಲಿಕಾರ್ಜುನಪ್ಪ, ಜಾತಿಯಲ್ಲಿ ಲಿಂಗಾಯತರಾದರೂ ರಿಜಿಸ್ಟ್ರಾರ್ ದೇವರಾಜ್ ಮತ್ತು ಆತನ ಜಾತಿ ಕ್ಯಾಕಸ್ ವಿರುದ್ಧ ನಿಲ್ಲುವಷ್ಟು ಧೈರ್ಯವಂತನಲ್ಲ. ಬೇರೆ ಯಾರೇ ಕುಲಪತಿಯಾದರೂ ಮಾಜಿ ಕುಲಪತಿ ಶ್ರೀನಿವಾಸ ಗೌಡರ ಗ್ಯಾಂಗ್ ಇರಕೊಡುವುದಿಲ್ಲ. ರಿಜಿಸ್ಟ್ರಾರ್ ದೇವರಾಜ್ ತೊಲಗುವ ತನಕ ಪಶುವಿವಿಯ ದಲಿತರ ಗೋಳು ನಿಲ್ಲುವುದಿಲ್ಲ.

ಮಾಜಿ ಕುಲಪತಿ ಶ್ರೀನಿವಾಸಗೌಡರ ಕಪಿಮುಷ್ಟಿಯಲ್ಲಿರುವತನಕ ಪಶುವಿವಿ ಉದ್ಧಾರವಾಗುವುದು ಸಾಧ್ಯವಿಲ್ಲ. ಈಗಲೂ ಕಾಲಮಿಂಚಿಲ್ಲ. ರಿಜಿಸ್ಟ್ರಾರ್ ದೇವರಾಜನ ಸ್ವಜನಪಕ್ಷಪಾತ, ಭ್ರಷ್ಟಾಚಾರ ಮತ್ತು ದಲಿತರ ದಮನದ ವಿರುದ್ಧ ತನಿಖೆ ನಡೆಯಬೇಕು. ಈ ನಿಟ್ಟಿನಲ್ಲಿ ದಲಿತರಾದ ಪಶು [illegible] ಮಂತ್ರಿ ಬೇಗನೆ [illegible] ಹೋದರೆ ಪಶು ವಿವಿಗೂ ಉಳಿಗಾಲವಿಲ್ಲ, ಪಶುಸಂಪತ್ತೂ ಉಳಿಯೋಲ್ಲ

■ ವರದಿಗಾರ



ಇಂದು ಕರ್ನಾಟಕದಲ್ಲಿ ಮುಸ್ಲಿಮರೆಂದರೆ ಜಮಾಅತೆ ಇಸ್ಲಾಮಿಗಳೆಂಬ ತಪ್ಪು ಕಲ್ಪನೆ ಮುಸ್ಲಿಮೇತರರಲ್ಲಿದೆ. ಹೀಗಾಗಿ ಈ ಕುರಿತು ಒಂದು ವಿವರಣೆ ನೀಡಬೇಕಾಗಿದೆ

ಬೆತ್ತಲುಗೊಂಡ ಜಮಾಅತೆ ಇಸ್ಲಾಮಿಯ ಮುಖವಾಡಗಳು

ಕಳೆದ ಮೇ ತಿಂಗಳ ಕೊನೆಯಲ್ಲಿ ದಿಯೊ ಬಂದ್ ಧರ್ಮಗುರುಗಳು ದೆಹಲಿಯಲ್ಲಿ ಸಭೆ ನಡೆಸಿ ಬಾಂಬ್ ಸ್ಫೋಟಿಸಿ ಅಮಾಯಕರ ಕೊಲೆ ಮಾಡುವಂತಹ ಭಯೋತ್ಪಾದನೆಯನ್ನು ಖಂಡಿಸಿ ಫತ್ವಾ ಹೊರಡಿಸಿದರು. ಈ ರೀತಿ ಅಮಾಯಕರನ್ನು ಕೊಲೆ ಮಾಡುವ ಕೃತ್ಯ ಇಸ್ಲಾಂ ತತ್ವಗಳಿಗೆ ವಿರುದ್ಧವಾಗಿದ್ದು ಇಂತಹ ಭಯೋತ್ಪಾದಕರನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಬೇಕು ಹಾಗೂ ಇವರನ್ನ ಜಾತಿಭ್ರಷ್ಟರಾಗಿಸಬೇಕೆಂದು ಧರ್ಮಗುರುಗಳು ಫತ್ವಾ ಹೊರಡಿಸಿದ್ದಾರೆ. ಈಗಲಾದರೂ ಧರ್ಮಗುರುಗಳು ಎಚ್ಚೆತ್ತುಕೊಂಡು ಇಂತಹ ಒಂದು ಹೆಜ್ಜೆ ಇಟ್ಟದ್ದು ಅಭಿನಂದನಾರ್ಹವಾಗಿದೆ.

ಇಸ್ಲಾಂ ಎಂದರೇನೇ ಶಾಂತಿ. ಹೀಗಿರುವಾಗ ಸಾಮಾನ್ಯ ಮುಸ್ಲಿಮರೂ, ವಿಜ್ಞಾನಿಗಳೂ ಮತಾಂಧರಾಗಿ ಭಯೋತ್ಪಾದಕರಾಗಲು ಏನು ಕಾರಣ? ಇದರ ಹಿಂದಿರುವ ಪ್ರಚೋದನೆ ಅಥವಾ ಮೆದುಳು ಯಾರದು? ಮುಂತಾದ ವಿಷಯಗಳೆಡೆಗೆ ಆಳವಾಗಿ ಅಧ್ಯಯನ ಮಾಡಲೇಬೇಕಾದ ಒಂದು ಸಂದರ್ಭ ಈಗ ಬಂದಿದೆ. ಈ ಕುರಿತು ಚಿಂತಿಸುವಾಗ ಜಮಾಅತೆ ಇಸ್ಲಾಮಿ ಎಂಬ ಸಂಘಟನೆಯ ತತ್ವಾದರ್ಶಗಳು ನಮ್ಮ ಕಣ್ಣೆದುರು ಬಂದು ನಿಲ್ಲುತ್ತವೆ.

ಇಂದು ಕರ್ನಾಟಕದಲ್ಲಿ ಮುಸ್ಲಿಮರೆಂದರೆ ಜಮಾಅತೆ ಇಸ್ಲಾಮಿಗಳೆಂಬ ತಪ್ಪು ಕಲ್ಪನೆ ಮುಸ್ಲಿಮೇತರರಲ್ಲಿದೆ. ಹೀಗಾಗಿ ಈ ಕುರಿತು ಒಂದು ವಿವರಣೆ ನೀಡಬೇಕಾಗಿದೆ. ಮುಸ್ಲಿಮರಲ್ಲಿ ಸುನ್ನಿ ಮತ್ತು ಶಿಯಾ ಎಂಬ ಎರಡು ಪ್ರಧಾನ ಪಂಗಡಗಳಿವೆ. ಪ್ರವಾದಿ ಮುಹಮ್ಮದರ ಜೀವಿತ ಕಾಲದಲ್ಲಿ ಎಲ್ಲರೂ ಇಸ್ಲಾಂ ಧರ್ಮಾನುಯಾಯಿಗಳೆಂದೇ ಹೆಸರು ಪಡೆದಿದ್ದರೂ ಅವರ ಮರಣಾನಂತರ ಆದದ್ದು ಅಧಿಕಾರಕ್ಕಾಗಿ ಹೋರಾಟ. ಪ್ರವಾದಿಗಳ ಪತ್ನಿ ಆಯಿಷಾ, ತಮ್ಮ ತಂದೆ ಅಬೂಬಕ್ಕರ್ ಸಿದ್ದೀಖ್ ಎಂಬವರಿಗೆ ನಾಯಕತ್ವ ದೊರೆಯಬೇಕೆಂದಾಗ ಪ್ರವಾದಿಗಳ ಮಗಳು ಫಾತಿಮ್ಮ ತನ್ನ ಗಂಡ ಅಲಿಯವರಿಗೆ ಈ ಅಧಿಕಾರ ದೊರೆಯಬೇಕೆಂದು ಆಶಿಸಿದರು. ಹೀಗಾಗಿ ಈ ಧರ್ಮ, ಹುಟ್ಟಿದ ನೂರು ವರ್ಷಗಳೊಳಗೆ ಎರಡು ಭಾಗವಾಗಿ ಅಬೂಬಕ್ಕರ್ ಅವರ ಅನುಯಾಯಿಗಳು ಸುನ್ನಿಗಳೆಂದೂ, ಅಲಿಯವರ ಅನುಯಾಯಿಗಳು ಶಿಯಾಗಳೆಂದೂ ಗುರುತಿಸಲ್ಪಟ್ಟರು. ಕರ್ಬಲಾ ಯುದ್ಧ ಈ ಎರಡು ಪಂಗಡಗಳೊಳಗೆ ನಡೆದು ಫಾತಿಮ್ಮ ಅವರ ಮಕ್ಕಳು ಹಸನ್ ಮತ್ತು ಹುಸೈನ್ ಎಂಬವರು (ಪ್ರವಾದಿಗಳ ಮೊಮ್ಮಕ್ಕಳು) ಈ ಯುದ್ಧದಲ್ಲಿ ಮೃತರಾದರು.

ಸುನ್ನಿ ಮುಸ್ಲಿಮರಲ್ಲಿ ಶಾಫಿ, ಹನಫಿ, ಹಂಬಲಿ, ಮಾಲಿಕಿ ಎಂಬ ನಾಲ್ಕು ವಿಭಾಗಗಳಿವೆ. ಕಳೆದ ಶತಮಾನದ ಆರಂಭದಿಂದಲೇ ಈ ಎಲ್ಲ ಪಂಗಡಗಳೂ ಖುರ್‌ಆನಿಗೆ ಹೊಸ ವ್ಯಾಖ್ಯಾನಗಳನ್ನೂ, ಹೊಸ ಚಿಂತನೆಗಳನ್ನೂ ಸೇರಿಸತೊಡಗಿ ಇಂದು ಹಲವು ವಿಭಾಗಗಳಾಗಿ ರೂಪೀಕರಿಸಲ್ಪಟ್ಟಿವೆ. ಜಮಾಅತೆ ಇಸ್ಲಾಮಿ, ತಬ್ಲೀಗ್ ಜಮಾಅತ್, ಸಲಫಿ ಅಥವಾ ಮುಜಾಹಿದ್ ಹಾಗೂ ಮೂಲ ರೂಪದ ಸುನ್ನಿ ಮುಂತಾಗಿ ಬೇರೆಬೇರೆ ಪಂಗಡಗಳಾಗಿ ಒಡೆದಿವೆ. ಹಿಂದೆಲ್ಲಾ ಮುಸ್ಲಿಮರ ಮಸೀದಿ ಎನ್ನುತ್ತಿದ್ದುದು ಇಂದು ಜಮಾಅತೆ ಇಸ್ಲಾಮಿಗಳ ಮಸೀದಿ, ಸಲಫಿಗಳ ಮಸೀದಿ, ಸುನ್ನಿಗಳ ಮಸೀದಿ ಎಂಬಲ್ಲಿಯವರೆಗೆ ಈ ಭಿನ್ನತೆ ಇದೆಯೆನ್ನಲಾಗುತ್ತಿದೆ ಹಾಗೂ ಈ ಅಭಿಪ್ರಾಯ ಭೇದದಿಂದಾಗಿ ಮಸೀದಿಯೊಳಗೇ ಹೊಡೆದಾಟವಾದ ಉದಾಹರಣೆಗಳಿವೆ. ಈ ಹೊಸ ಗುಂಪುಗಳು ಪುನರುತ್ಥಾನವಾದಿಗಳ ವಿವಿಧ ಗುಂಪುಗಳಾಗಿವೆ. ಈ ಹಿನ್ನೆಲೆಯಲ್ಲಿ ಜಮಾಅತೆ ಇಸ್ಲಾಮಿ ಎಂಬ ಸಂಘಟನೆಯ ಧೋರಣೆ ಮತ್ತು ತತ್ವ ಸಿದ್ಧಾಂತಗಳನ್ನು ಎಲ್ಲರೂ ಸಮನಾಗಿ ತಿಳಿದುಕೊಳ್ಳಬೇಕಾಗಿದೆ. ಜಮಾಅತೆ ಇಸ್ಲಾಮಿಗಳೆಂದರೆ ಯಾರು? ಈ ಸಂಘಟನೆಯ ಸ್ಥಾಪಕರು ಯಾರು? ಈತನ ಉದ್ದೇಶವೇನು? ಮುಂತಾದ ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡಲೇಬೇಕಾಗಿದೆ.



ಕೇರಳದಲ್ಲಿ ಈ ಕುರಿತು ಕೆಲವು ಕೃತಿಗಳು ಪ್ರಕಟವಾಗಿವೆ. 'ಮತರಾಷ್ಟ್ರವಾದ' ಎಂಬ ಕೃತಿಯೊಂದು ಕಳೆದ ವರ್ಷ ಪ್ರಕಟಗೊಂಡಿದ್ದು 'ಜಮಾಅತೆ ಇಸ್ಲಾಮಿ ಪ್ರಶ್ನಿಸಲ್ಪಡುತ್ತಿದೆ' ಎಂದು ಪುಸ್ತಕದ ಹೆಸರಿನ ಕೆಳಗೆ ನಮೂದಿಸಲಾಗಿದೆ. ಇದರಲ್ಲಿ ಎರಡು ಭಾಗಗಳಿದ್ದು ಒಟ್ಟು ಹತ್ತೊಂಭತ್ತು ಲೇಖಕರು ಬರೆದ ಲೇಖನಗಳಿವೆ. ಪ್ರೊ. ಎಂ.ಎನ್. ಕಾರಶ್ಶೇರಿ ಹಾಗೂ ಇತರ ಮುಸ್ಲಿಂ ಬುದ್ಧಿಜೀವಿಗಳ ಈ ಲೇಖನಗಳಲ್ಲಿ ಜಮಾಅತೆ ಇಸ್ಲಾಮಿನ ಎಲ್ಲ ಮುಖವಾಡಗಳನ್ನೂ ಬಯಲಿಗೆಳೆಯಲಾಗಿದೆ. ಎಂ.ಎ. ಕಾರಪ್ಪಂಜೇರಿ ಎಂಬುವರು ಈ ಕೃತಿಯ ಸಂಪಾದಕರಾಗಿದ್ದಾರೆ.

1941 ರ ಆಗಸ್ಟ್ 26 ರಂದು ಲಾಹೋರ್‌ನಲ್ಲಿ ಮೌಲಾನಾ ಸಯ್ಯದ್ ಅಬುಲ್ ಆಲಾ ಮೌದೂದಿ (1903-1979) ಎಂಬವರು 'ಜಮಾಅತೆ ಇಸ್ಲಾಮಿ ಹಿಂದ್' ಎಂಬ ಸಂಘಟನೆಯನ್ನಾರಂಭಿಸಿದರು. ಇಂಡಿಯಾ ಉಪಭೂಖಂಡದಲ್ಲಿ 'ಹುಕುಮತ್ತೆ ಇಲಾಹಿ' ಅಂದರೆ ದೇವರ ಆಡಳಿತ ಸ್ಥಾಪಿಸುವುದು ಈ ಸಂಘಟನೆಯ ಉದ್ದೇಶವಾಗಿತ್ತು, 1947 ರಲ್ಲಿ ಈ ಸಂಘಟನೆಯು 'ಇಂಡಿಯಾ ಜಮಾಅತೆ ಇಸ್ಲಾಮಿ' ಹಾಗೂ 'ಪಾಕಿಸ್ತಾನ ಜಮಾಅತೆ ಇಸ್ಲಾಮಿ' ಎಂದು ಎರಡು ಭಾಗವಾಯಿತು. 1973 ರಲ್ಲಿ 'ಬಾಂಗ್ಲಾ ಜಮಾಅತೆ ಇಸ್ಲಾಮಿ'ಯೂ ಪ್ರಾರಂಭವಾಯಿತು.

ಜಮಾಅತೆ ಇಸ್ಲಾಮಿಯ ಮುಖ್ಯ ತತ್ವಸಿದ್ಧಾಂತಗಳು ಈ ರೀತಿಯಾಗಿವೆ:

"ಇಸ್ಲಾಂ ಬದುಕಿನ ಗುರಿ ಆಡಳಿತ ಹಾಗೂ ಇಸ್ಲಾಂ ಆಳ್ವಿಕೆಯ ಸರ್ಕಾರಕ್ಕಾಗಿ ಪ್ರಯತ್ನಿಸಬೇಕಾದುದು ಮುಸ್ಲಿಮರ ಕರ್ತವ್ಯ. ಜಾತ್ಯತೀತತೆ, ಪ್ರಜಾಪ್ರಭುತ್ವ, ರಾಷ್ಟ್ರೀಯತೆ ಇವು ಮೂರೂ ಧರ್ಮ ಸಮ್ಮತವಲ್ಲ. ಈ ಭೂಮಿಯನ್ನು ಸೃಷ್ಟಿಸಿದವನು ದೇವರು (ಅಲ್ಲಾಹ್). ದೇವರು ಸೃಷ್ಟಿಸಿದ ಭೂಮಿಯಲ್ಲಿ ದೇವರ ನಿಯಮಗಳು ಮಾತ್ರ ಅನುಷ್ಠಾನಗೊಳ್ಳಬೇಕು. ಈ ನಿಯಮಗಳು ಶರಿಯತ್ ನಿಯಮಗಳು. ಹೀಗಾಗಿಯೇ ಪ್ರಜಾಪ್ರಭುತ್ವವೆಂಬುದು ಧರ್ಮ ವಿರೋಧವಾಗಿದೆ. ಧರ್ಮ ಮತ್ತು ಜಾತ್ಯತೀತತೆ ಪರಸ್ಪರ ವಿರುದ್ಧವಾಗಿದೆ" ಎಂದರಲ್ಲದೆ ಸ್ವಾತಂತ್ರ್ಯ ಹೋರಾಟವನ್ನು ಅಪಹಾಸ್ಯ ಮಾಡುತ್ತಾ ಈ ರೀತಿ ವಿವರಿಸುತ್ತಿದ್ದರು:


"ಸ್ವಾತಂತ್ರ್ಯಕ್ಕಾಗಿ ಮಾಡುವ ಈ ಹೋರಾಟ ವಿದೇಶಿ ದೇವರುಗಳನ್ನು ಒಕ್ಕಲೆಬ್ಬಿಸಿ ಸ್ವದೇಶಿ ದೇವರುಗಳನ್ನು ಪ್ರತಿಷ್ಠಾಪಿಸುವುದಷ್ಟೇ ಆಗಿದೆ. ಮುಸ್ಲಿಮರಿಗೆ ಸಂಬಂಧಪಟ್ಟಂತೆ ಇವೆರಡೂ ಒಂದೇ ಆಗಿವೆ. ಓರ್ವ ಕಳ್ಳ ದೇವರ ಬದಲಿಗೆ ಇನ್ನೋರ್ವ ಕಳ್ಳ ದೇವರು ಬರುತ್ತಾರಷ್ಟೇ. ಇಂಗ್ಲಿಷರಾದ ಮುಸ್ಲಿಮರಲ್ಲದವರಿಂದ ಇಂಡಿಯಾದವರಾದ ಇನ್ನೋರ್ವ ಅಮುಸ್ಲಿಮರ ಕೈಗೆ ಆಳ್ವಿಕೆ ಬದಲಾಗುತ್ತದೆ ಎಂಬುದು ಮಾತ್ರ ಈ ಸ್ವಾತಂತ್ರ್ಯದ ಅರ್ಥ. ಮುಸ್ಲಿಮರಿಗೆ ಸಂಬಂಧಪಟ್ಟಂತೆ ಇಂತಹ ಒಂದು ಹೋರಾಟ 'ಹರಾಂ' (ನಿಷೇಧಿಸಲ್ಪಟ್ಟದ್ದು) ಆಗಿದೆ. ಮಾತ್ರವಲ್ಲ ಇಂತಹ ಹೋರಾಟವನ್ನು ನೋಡುತ್ತಾ ನಿಲ್ಲುವುದೂ ಕೂಡಾ 'ಹರಾಂ' ಆಗಿದೆ! (ತಹರೀಕೇ ಆಜಾದೀ ಔರ್ ಮುಸಲ್ಮಾನ್ ಎಂಬ ಪುಸ್ತಕದಲ್ಲಿ ಪುಟ 81)

ಸರ್ಕಾರಿ ಉದ್ಯೋಗ 'ಹರಾಂ' ಎಂದು ಮೌದೂದಿ ವಾದಿಸಿದ್ದು ಈ ದೇಶದ ಮುಸ್ಲಿಮರಿಗೆ ಮಾಡಿದ ಮಹಾ ದ್ರೋಹವೆನ್ನುತ್ತಾರೆ ಪ್ರೊ. ಕಾರಶ್ಶೇರಿ. "ನೀವು ಬೇರೆ ಧಾರ್ಮಿಕ ವ್ಯವಸ್ಥೆಯಲ್ಲಿ ಸೇವೆ ಮಾಡುತ್ತಾ ಅದರಿಂದ ದೊರೆಯುವ ಆಹಾರ ಸೇವನೆ ಮಾಡುತ್ತಾ ಸುಖಜೀವನ ನಡೆಸುವುದು ಸರಿಯಲ್ಲ" ಎಂದದ್ದನ್ನು ಕೇರಳದ 'ಪ್ರಭೋಧನಂ' ಎಂಬ ಪತ್ರಿಕೆ ಎತ್ತಿ ಹಿಡಿಯಿತು. "ಇಸ್ಲಾಂ ವಿರುದ್ಧವಾದ ಒಂದು ಸರ್ಕಾರದ ಅಡಿಯಲ್ಲಿ ಉದ್ಯೋಗಕ್ಕಾಗಿಯಾಗಲಿ, ಮಕ್ಕಳ ಸೀಟುಗಳಿಗಾಗಿಯಾಗಲಿ ಆಶಿಸುವುದು ಅಥವಾ ಕಟ್ಟಾಡುವುದು ಎಂಬುದು ಚಿಂತಿಸುವುದಕ್ಕೂ ಸಾಧ್ಯವಿಲ್ಲದಂತಹ ನೀಚವಾದ ಒಂದು ಅವಸ್ಥೆಯಾಗಿದೆ. (ಪ್ರಭೋಧನಂ 1953, ಡಿಸೆಂಬರ್ 15).

▶▶▶

ಭ್ರಮೆ: ಬದುಕಿನ ಅನನ್ಯತೆಯ ದಟ್ಟ ಹುಡುಕಾಟ

ಅಪ್ಪ ಅವ್ವ ಬಿಡುತ್ತಿದ್ದ ನಿಟ್ಟುಸಿರ ಮಾತುಗಳ ಪ್ರೇರಣೆಯಿಂದ ಕಥೆ ಬರೆಯಲು ಪ್ರಾರಂಭಿಸಿದ ಟಿ.ಎಸ್. ಗೊರವರ ನಮ್ಮ ಸಂದರ್ಭದ ಮುಗ್ಧ ಮುಕ್ತ ಮನಸ್ಸಿನ ಗಂಭೀರ ಕಥೆಗಾರ. ಬತ್ತದ ಜೀವನೋತ್ಸಾಹವನ್ನು ಅಂತಸ್ಥವಾಗಿಸಿಕೊಂಡು; ನೋವಿನ ಮಳೆಯಲ್ಲಿ ತೊಯ್ದ ಮಾತುಗಳನ್ನಾಡುವ ಅಪ್ಪ ಚಂದಿರನ ತೋರಿಸಿ ಹಾಡು ಹೇಳದೇ, ತನ್ನ ಅವಮಾನಗಳನ್ನು ಸ್ವಗತಿಸಿದ ಅವ್ವ, ಬರೆಯಿಸಿದ, ಅಂತರಂಗವೇ ಪದಗಳಾದ ಸೋಜಿಗವೇ 'ಭ್ರಮೆ.'



ಕನ್ನಡ ಸಾಹಿತ್ಯ ಪರಂಪರೆಯ ಕಥನ ಕ್ರಮ ವಿಭಿನ್ನ ಆಯಾಮಗಳಿಗೆ ತನ್ನನ್ನು ತೆರೆದುಕೊಳ್ಳುತ್ತ ಓದುಗನನ್ನು ತಲ್ಲಣಿಸಿದ, ಭಾವ ಸಮೀಕರಿಸಿದ ಕೊನೆಯಲ್ಲಿ ಕಥೆಯಲ್ಲಿಯೇ ವಿಕೀಭವಿಸುವಷ್ಟರ ಮಟ್ಟಿಗೆ ಸಾಧ್ಯತೆಗಳನ್ನು ವಿಸ್ತರಿಸುತ್ತಾ ಬಂದಿದೆ. ಇದಕ್ಕೆ ಕೆಲವರನ್ನ ಮಾತ್ರ ಸಾಕ್ಷಿಯಾಗಿಸಿದರೆ ಸಾಧುವಾಗಲಾರದು. ಇಂಥ ಮತ್ತೊಂದು ಅನನ್ಯ ಪ್ರಯತ್ನವೇ ಟಿ.ಎಸ್. ಗೊರವರವರ ಕಥೆಗಳು. ಇಲ್ಲಿನ ಯಾವ ಕಥೆಗಳನ್ನೂ ಅರ್ಥೈಸಿಕೊಳ್ಳುವಲ್ಲಿ ದ್ವಂದ್ವಗಳಿಲ್ಲ, ನಿರೂಪಣೆಯಲ್ಲಿ ಉದಾಸೀನತೆಯಿಲ್ಲ, ಬದಲಾಗಿ ಕಥೆಯೇ ತನ್ನೊಳಗೆಳೆದುಕೊಳ್ಳುವ ಭಾವಶಕ್ತಿಯ ಆಯಸ್ಕಾಂತತೆ ಇದೆ. ಇದೆಲ್ಲೂ ಫ್ಯಾಂಟಸಿಯಾಗಿಲ್ಲವೆಂಬುದು ವಿವೇಚನೆಗೆ ಪರಿಗಣಿಸಬೇಕಾದ ವಿಚಾರ. ಕ್ರಮ ಸಾಧ್ಯತೆಗಳನ್ನು ಚೆನ್ನಾಗಿ ಬಲ್ಲಂತಿರುವ ಗೊರವರ ಬದುಕನ್ನು ಆಳವಾಗಿ ಅನುಭವಿಸಿದವರು ಮತ್ತ ಬದುಕಿನ ಅನುಭವಗಳಲ್ಲಿನ ಅನನ್ಯತೆಯ ಹುಡುಕಾಟದಲ್ಲಿ ಧ್ಯಾನಸ್ಥರಾದವರು. ಈ ಕಾರಣದಿಂದಲೇ 'ಚಮರಿ ಮಾರೊ ದುಗ್ಗಿ ಕಥೆ' ಬರೆಯಲು ಸಾಧ್ಯವಾಯಿತೆನ್ನಿಸುತ್ತದೆ.

"ಮಬ್ಬುಗತ್ತಲು ಬೆಳಕನ್ನು ತನ್ನೊಳಗೆ ಆಪೋಷನ ಮಾಡಿಕೊಳ್ಳತೊಡಗಿತ್ತು, ದುಗ್ಗಿಯ ಜೋಪಡಿಯೊಳಗೆ ಚಂಜೆಯ ಮಬ್ಬು ಕವಿಯಿತು. ಚಿಮಣಿ ಬುಡ್ಡಿಗೆ ದೀಪ ಹೊತ್ತಿಸಿ, ಉರಿಯೋ ದೀಪದ ಬೆಳಕಿನಲ್ಲಿ ಮಗುವನ್ನು ದಿಟ್ಟಿಸಿದಳು. ಅದು ಹೇತು ಅದರಾಗೆ ಬೆರಳಾಡಿಸುತ್ತ ಆಟವಾಡತೊಡಗಿತ್ತು, ಅವಳ ಮನಸ್ಸಿಗೆ ಇಸ್ಸೀ ಅನಿಸಿದರೂ ಮಗುವಿನ ಗಲ್ಲಕ್ಕೊಂದು ಮುತ್ತಿಕ್ಕಿ ಹೇಲು ಬಳಿದು, ಮಗುವಿನ ಮುಕಳಿ ತೊಳೆದು ಮೂಲೆಯಲ್ಲಿ ಬಿದ್ದಿದ್ದ ಹಳೆಯ ಸೀರೆಯ ಚುಂಗಿನಿಂದ ಮಗುವನ್ನು ಒರೆಸಿ ನೀಟಾಗಿಸಿದಳು." ಮನುಷ್ಯ ಜೀವನದ ಶ್ರೇಷ್ಠ ಹಾಗೂ ಕನಿಷ್ಠತೆಯನ್ನು ನಮ್ಮ ಸಾಹಿತ್ಯ ಮರುವ್ಯಾಖ್ಯಾನಿಸುವತ್ತ ಆಲೋಚನೆಗಳನ್ನು ಹೊರಳಿಸುತ್ತವೆ ಈ ಸಾಲುಗಳು. ಕಣ್ಣಾಡಿಸಿದರೆ ಮನದಾಳಕ್ಕೆ ಎರಗುವ ಇಲ್ಲಿನ ಭಾವನವೀಯತೆ ಒಂದು ಪರಿಸರದ ಸೂಕ್ಷ್ಮಗ್ರಾಹಿ ಅವಲೋಕನ ಟಿ.ಎಸ್. ಗೊರವರನ್ನು ಬಹಳ ಮುಖ್ಯರನ್ನಾಗಿಸುತ್ತವೆ. ಬರೆದ ಅಕ್ಷರ ವಿಧಾನ ವಿಶಿಷ್ಟವೆನಿಸುವುದೂ ಈ ಕಾರಣದಿಂದಲೆ.

"ಚವರಿಯಿಂದ ಅನ್ನ ಪಡೆಯುವ ಕಾತರದಲ್ಲಿದ್ದ ದುಗ್ಗಿಗೆ ಚವರಿಯೇ ಕೈಯಲ್ಲಿದ್ದ ತುಪ್ಪ ಸವರಿದ ರೊಟ್ಟಿಗೆ ತಾಗಿ, ರೊಟ್ಟಿ ಮಣ್ಣು ಪಾಲಾಗುವುದು" ಬದುಕಿಗೊದಗುವ ಆಘಾತಗಳ ಬಹುದೊಡ್ಡ ರೂಪಕ. ಈ ರೀತಿಯ ದುರಂತಗಳ ವಿಭಿನ್ನ ಮುಖಗಳನ್ನು ವ್ಯವಸ್ಥೆಗೆ ತೆರೆದಿಡುತ್ತಾ, ನಾವು ಬದುಕುತ್ತಿರುವ ರೀತಿಯನ್ನು ಪ್ರಶ್ನಿಸುವಂತೆ ಮಾಡುತ್ತಾರೆ. ನಮ್ಮ ಆಲೋಚನೆಗಳಲ್ಲಡಗಿನ ಜಾಡ್ಯವನ್ನು ಬಡಿದೋಡಿಸುವ ಪ್ರಯತ್ನಗಳು ಇಲ್ಲಿವೆ.

ಪುಸ್ತಕ ವಿಮರ್ಶೆ

'ಭ್ರಮೆ' ಟಿ.ಎಸ್. ಗೊರವರ	ಪ್ರಕಾಶಕರು : ಕನ್ನಡ ಪ್ರಕಾಶನ ಪುಟ : 60 ಬೆಲೆ : 60/-

'ಕಾಡುಕುಸುಮ'ದ ರಾವಣ ನಮ್ಮ ಸಾಂಸ್ಕೃತಿಕ ಅಗತ್ಯಗಳು ಹೇಗೆ ಮನುಷ್ಯರನ್ನು ರೂಪಿಸುತ್ತವೆ ಹಾಗೂ ಘನತೆಯನ್ನು ತಂದುಕೊಡುತ್ತವೆ ಎನ್ನುವುದಕ್ಕೆ ಜೀವಂತ ಸಾಕ್ಷಿ. 'ರಾವಣ'ನ ಸಾಂಕೇತಿಕತೆ ಪ್ರತಿ ಊರಿನ ಖುಷಿಯ, ದಣಿವು ನಿವಾರಿಸುವ ರೂಪಗಳನ್ನು ಸೂಚಿಸುತ್ತದೆ. ಹೀಗೆ ಗೊರವರ ಬದುಕಿನ ಸಾಂಸ್ಕೃತಿಕ ಶೋಧಕ್ಕೆ ತೊಡಗುವುದರಿಂದ ಸಮಕಾಲೀನ ಬರಹಗಾರರಿಗೆ ಉತ್ತಮ ಮಾದರಿಯಾಗಬಲ್ಲರೆನಿಸುತ್ತಾರೆ.

ಭಾವತನ್ಮಯತೆಯ ನವೀನ ಪ್ರಯೋಗಗಳಾಗಿ ಮೌನ ಮುರಿಯುವ ಮುನ್ನ, ಕೆರೆಯ ದಂಡೆಯ ಮೇಲೆ ಕುಳಿತು, ಓದುಗನಿಗೆ ವಿಶೇಷ ಅನುಭೂತಿ ನೀಡುತ್ತವೆ. ಇಲ್ಲಿನ 'ಪ್ರೀತಿ'- ಮಳೆಯ ಹನಿಗಳು ಕೊಡುವ ಆಹ್ಲಾದಕರ ಮುದ ನೀಡಿ ಮನಸ್ಸನ್ನು ನಿರಾಳವಾಗಿಸುತ್ತವೆ. "ಹೊರಗಡೆ ಮಳೆ ಹುಯ್ಯುತ್ತಿರುವಾಗ, ಎದೆಯೊಳಗೆ ನಿನ್ನ ನೆನಪುಗಳ ಜಿಟಿ ಜಿಟಿ ಮಳೆ" ಎಂದೋದುವಾಗ ನಮ್ಮೊಳಗೇ ನಾವಿಲ್ಲದ ಅನುಭವ. "ನಲ್ಲೆಯ ನೆನಪುಗಳು ಕೊರಳಪಟ್ಟಿ ಹಿಡಿದು ಜಗ್ಗುತ್ತವೆ" ಎನ್ನುವ ಸಾಲು ಅಂತರಂಗದಲ್ಲೇ ಖುಷಿಯ ತಳಮಳದ ಜಗಳ ಶುರುವಾಗಿ ಲೋಕ ಮರೆಸುತ್ತವೆ. ಮಳೆಹನಿಗಳನ್ನು ಕೆರೆ ಬೊಗಸೆಯೊಡ್ಡಿ ಜತನದಿಂದ ಹಿಡಿಯತೊಡಗಿತ್ತು ಎಂಬುದು ಎಲ್ಲ ಆರೋಗ್ಯವಂತ ಮನಸ್ಸುಗಳನ್ನೊಳಗೊಳ್ಳುವ ಅನುಭವ ಸಾರ್ವತ್ರೀಕರಣ.

ಮಾನವೀಯತೆ ಮರೆತಿರುವ ಮನಸ್ಸುಗಳಿಗೆ ಗಂಭೀರ ಎಚ್ಚರ ಈ ಸಂಕಲನ. ಇಲ್ಲಿನ ಪ್ರತಿ ಹಳ್ಳಿಯೂ ವ್ಯವಸ್ಥೆಯ ಅಸಮಾನತೆಯ ಪ್ರತೀಕಗಳು. ಇಲ್ಲಿ ದೌರ್ಜನ್ಯವಿದೆ,

ನಿಸ್ಲಾಮಿ ಸರ್ಕಾರದ ಉದ್ಯೋಗಕ್ಕಾಗಿ ನಮ್ಮಲ್ಲಿ ಕೆಲವರು ತ್ಸುಕರಾಗಿದ್ದಾರೆ. ಇವರು ಇಸ್ಲಾಮಿನಿಂದ ಹಿಂತಿರು ಗುತ್ತಿದ್ದಾರೆ ಎಂಬುದು ಇದರ ಅರ್ಥ. (ಪ್ರಬೋಧನಂ 1959, ಜನವರಿ 15). ಈ ಬೋಧನೆಗನುಸಾರವಾಗಿ ಈ ಸಂದರ್ಭದಲ್ಲಿ ಕೆಲವರು ಉತ್ತಮವಾದ ಬ್ಯಾಂಕ್ ಉದ್ಯೋಗಗಳಿಗೂ ರಾಜೀನಾಮೆ ನೀಡಿದ್ದರು! ಚುನಾವಣೆಯಲ್ಲಿ ಭಾಗವಹಿಸುವುದನ್ನು ಮೌದೂದಿ ವಿರೋಧಿಸಿದ್ದರು. ಪ್ರಜಾಪ್ರಭುತ್ವವೇ ಅನಿಸ್ಲಾಮಿಕ್ ಎನ್ನುವವರು ಚುನಾವಣೆಯನ್ನು ಒಪ್ಪಿಕೊಳ್ಳುತ್ತಾರಾ? ಹೀಗಾಗಿಯೇ 60 ಮತ್ತು 70 ರ ದಶಕಗಳಲ್ಲಿ ಈ ಜಮಾಅತೆಗಳು ಚುನಾವಣೆಯಲ್ಲಿ ಮತ ನೀಡುತ್ತಿರಲಿಲ್ಲ. ಈಗ ಮುಸ್ಲಿಂ ಅಭ್ಯರ್ಥಿಗಳಿಗೆ ಮತ ನೀಡಿ ಅವರನ್ನು ಗೆಲ್ಲಿಸಬೇಕೆಂಬಲ್ಲಿಯವರೆಗೆ ಇವರು ಬದಲಾಗಿದ್ದಾರೆ. ದೇವರ ರಾಷ್ಟ್ರದಲ್ಲಿ ದೇವರ ಸರ್ಕಾರ ಎಂಬ ಇವರ ನಿಲುವಿನಲ್ಲಿ ಬದಲಾವಣೆ ಇಲ್ಲ!

ಇಸ್ಲಾಮಿನ ದೃಷ್ಟಿಕೋನದಿಂದ ಇಸ್ಲಾಂ ಚಿಂತನೆಗಳನ್ನು ಮೈಗೂಡಿಸಿಕೊಳ್ಳುವುದನ್ನು ಬಿಟ್ಟು ಜಿಹಾದ್ ಮೂಲಕ ...ಸಲು ಪ್ರಯತ್ನಿಸಿದ್ದು ಮೌದೂದಿಗೆ ಆದ ಮಹತ್ತರ ...ದ ತಪ್ಪು ಕಲ್ಪನೆ. ವಾಸ್ತವದಲ್ಲಿ ಜಿಹಾದಿನ ಕುರಿತು ಮೌದೂದಿಯ ಕಲ್ಪನೆ ಇಂಡಿಯಾದಲ್ಲಿ ಮತ ರಾಜಕಾರಣಕ್ಕೆ ...ತ್ತಿಕ ಅಡಿಪಾಯ ಹಾಕಿತು. ಇಸ್ಲಾಮಿನ ಗುರಿ ಆಡಳಿತ ಮಾತ್ರವಲ್ಲ. ಇಂಡಿಯಾದಂತಹ ಒಂದು ಇಸ್ಲಾಮೇತರ ರಾಷ್ಟ್ರದಲ್ಲಿ ಅಲ್ಲಿನ ನಿಯಮಕ್ಕೆ ವಿಧೇಯರಾಗಿ ಬದುಕಲು ಮುಸ್ಲಿಮರು ಜವಾಬ್ದಾರರಾಗಬೇಕಾಗಿಲ್ಲ ಎಂಬ ಸಿದ್ಧಾಂತ ವನ್ನೂ ಮೌದೂದಿ ಹೊರ ಹಾಕಿದರು. ಧಾರ್ಮಿಕ ಬೋಧನೆ ಮಾತ್ರವಲ್ಲ' ಇವರ ಆಳದಲ್ಲಿ ರಾಜಕೀಯ ಶಕ್ತಿ ಇತ್ತೆಂದೂ, ಜಮಾಅತೆ ಇಸ್ಲಾಮಿ ಸಂಘಟನೆ ಧಾರ್ಮಿಕ ಸಂಘಟನೆಯಾಗಿರದೆ ಅದು ಒಂದು ರಾಜಕೀಯ ಸಂಘಟನೆಯಾಗಿದೆಯೆಂದೂ ಲೇಖಕರೊಬ್ಬರು ಹೇಳಿದ್ದಾರೆ.

ಪಾಕಿಸ್ತಾನದ ಅಧ್ಯಕ್ಷ ರಾಗಿದ್ದ ಅಯ್ಯೂಬ್ ಖಾನರು ಒಮ್ಮೆ ಮೌದೂದಿಯ ವಿರುದ್ಧ ಸಿಟ್ಟಾಟಗೊಂಡರು. "ಆ ಮುಲ್ಲಾಗೆ ಬೇಕಾಗಿರುವುದು ನನ್ನ ಕುರ್ಚಿ!" ಎಂದಿದ್ದರು. ಮೌದೂದಿಗೆ ಬೇಕಾಗಿದ್ದುದು ಅಧಿಕಾರವೇ ಹೊರತು ಧರ್ಮವಲ್ಲ, ಆತ ಧರ್ಮ ಚಿಂತಕನಲ್ಲ, ರಾಜಕಾರಣಿ ಯಾಗಿದ್ದಾನೆ. ರಾಜಕೀಯದ ಎಲ್ಲ ಮಗ್ಗುಲುಗಳೊಡನೆ ಧರ್ಮವನ್ನು ಬೆರೆಸಿಕೊಂಡು ಜನರ ಮುಂದಿಟ್ಟು ಜನರನ್ನು ಸಂಕುಗೊಳಿಸಿದ ಕಾರಣ ಮೌದೂದಿ ಓರ್ವ ಧಾರ್ಮಿಕ ...ತ್ತಿ ಎಂದು ಹಲವರಿಗೆ ಅನ್ನಿಸಿಬಿಟ್ಟಿತ್ತು. ಆಧುನಿಕ ...ಕ್ಷಣದಿಂದ ವಂಚಿತರಾಗಿ, ಶೈಕ್ಷಣಿಕವಾಗಿ ಬಹಳ ಹಿಂದುಳಿದಿದ್ದ ಸಮಾಜವನ್ನು ಈ ರೀತಿ ಹಾದಿ ತಪ್ಪಿಸುವುದು ಬಹಳ ಸುಲಭ ತಾನೇ?

ಮೌದೂದಿಯವರ ಕೆಲವು ವಾದಗಳು ಈ ರೀತಿಯಾಗಿವೆ:


"ದೇವರ ಸೃಷ್ಟಿಯಾದ ಭೂಮಿಯ ಮೇಲೆ ಜನರು ಅಧಿಕಾರ ಸ್ಥಾಪಿಸಲು ಭೂಮಿಯ ಮೇಲೆ ಗೆರೆ ಎಳೆದು ಬೇರೆಬೇರೆ ರಾಜ್ಯ ಸ್ಥಾಪಿಸಿಕೊಂಡರು. ಆದರೆ ಇದು ದೇವರ ಅಧಿಕಾರದ ವಿರುದ್ಧದ ಕಾರ್ಯವಾಗಿದೆ. ಧಾರ್ಮಿಕ ವಿಶ್ವಾಸ ದೇವರ ಗಡಿ ನಿರ್ಮಾಣ ಮಾಡುತ್ತದೆಯೇ ಹೊರತು ದೇಶದ ಭೌಗೋಳಿಕ ಗಡಿಯನ್ನಲ್ಲ, ಯಾವ ದೇಶದವನಾದರೂ ಜಗತ್ತಿನಲ್ಲೆಲ್ಲಿದ್ದರೂ ಮುಸ್ಲಿಮರೆಲ್ಲರೂ ಒಂದೇ ರಾಷ್ಟ್ರದವರಾಗುತ್ತಾರೆ. ಇದನ್ನು ಜಾಗತಿಕ ಇಸ್ಲಾಮಿಸಂ (Pan Islamism) ಎನ್ನಲಾಗುತ್ತದೆ. ಮುಸ್ಲಿಂ ರಾಷ್ಟ್ರಗಳೆಲ್ಲವೂ ಸೇರಿ ಒಂದು ಮುಸ್ಲಿಂ ಒಕ್ಕೂಟ ರೂಪಿಸಲ್ಪಡಬೇಕು. ಇಲ್ಲಿ ರಾಷ್ಟ್ರೀಯತೆ ಎಂಬು ದಿಲ್ಲ, ಇಲ್ಲಿ ಮುಸ್ಲಿಂ, ಅಮುಸ್ಲಿಂ ಎಂಬ ವ್ಯತ್ಯಾಸ ಮಾತ್ರವಿರಬೇಕು. ನಿಷ್ಠೆ ತೋರಿಸಬೇಕಾದುದು ತಾವು ಹುಟ್ಟಿ ಬೆಳೆದ ರಾಷ್ಟ್ರಕ್ಕಲ್ಲ; ಹುಟ್ಟಿ ಬೆಳೆದ ಧರ್ಮಕ್ಕೆ ನಿಷ್ಠೆ ತೋರಿಸಬೇಕು. ಅಧಿಕಾರ ಜನರಿಗಿರುವುದಲ್ಲ; ಅದು ಏಕದೇವನಾದ ಅಲ್ಲಾಹು ವಿಗೆ ಮಾತ್ರ ಇರಬೇಕಾದುದು. ಎಲ್ಲಾ ಜೀವ ಜಾಲಗಳೂ ದೇವರ ಗುಲಾಮರು. ಆದುದರಿಂದ ಅವರನ್ನಾಳಲು ದೇವರಿಗೆ ಮಾತ್ರ ಅಧಿಕಾರವಿದೆ. ಪ್ರಪಂಚವನ್ನಾಳಲು ದೇವರು ನಿಯಮಗಳನ್ನು ರೂಪಿಸಿದ್ದಾನೆ. ಅದು ಇಸ್ಲಾಂ ನಿಯಮ. ಇಸ್ಲಾಂ ವ್ಯವಸ್ಥೆಗಳು ಪ್ರಪಂಚದಲ್ಲಿ ಅನುಷ್ಠಾನಗೊಳ್ಳಬೇಕು." ಒಸಾಮಾ ಬಿನ್ ಲಾಡೆನ್‌ನ ವಾದ ಕೂಡಾ ಇದೇ ತಾನೇ?

ಮೌದೂದಿಯವರ ಈ ವಾದಕ್ಕೆ ಪ್ರೊ. ಕಾರಶ್ಯೇರಿ ಯವರು ಈ ರೀತಿ ಉತ್ತರಿಸುತ್ತಾರೆ: "ಈ ದೇವರ ಆಡಳಿತವೆಂಬುದು ಎಷ್ಟೊಂದು ಅಪ್ರಾಯೋಗಿಕ ಮತ್ತು ಅಪಾಯಕಾರಿಯಾಗಿದೆಯೆಂಬುದನ್ನು ಚಿಂತಿಸಿ ನೋಡಿ. ವಾಸ್ತವತೆ ಏನೆಂದು ತಿಳಿಯದೆ ಇವರು ಹೀಗೆಲ್ಲ ಚಿಂತಿಸುತ್ತಾರೆ. ಬದುಕು ಕೂಡಾ ಧಾರ್ಮಿಕ ವಿಶ್ವಾಸದಂತೆ ಪ್ರಾಮುಖ್ಯವಾದುದೇ ಆಗಿದೆಯಲ್ಲವೇ? ಭೂಪ್ರಕೃತಿ, ಕಾಲಮಾನ, ಜೀವನ, ಸಂಪಾದನೆ, ಭಾಷೆ, ವೇಷ, ಆಹಾರ, ಕಲಾರೂಪಗಳು, ವಂಶ, ಪರಂಪರೆ, ಗೃಹ ನಿರ್ಮಾಣ ಮುಂತಾದ ಎಲ್ಲಾ ವಿಷಯಗಳೂ ವೈವಿಧ್ಯತೆಯಿಂದ ಕೂಡಿರುವ ಮನುಷ್ಯ ಸಮೂಹವನ್ನು ಕೇವಲ ಧರ್ಮದಿಂದ ಮಾತ್ರ ಒಂದು ರಾಷ್ಟ್ರವಾಗಿಸಲು ಸಾಧ್ಯವಾ? ಮುಸ್ಲಿಮರಿಗಾಗಿ ಸ್ಥಾಪಿಸಲ್ಪಟ್ಟ, ಜಗತ್ತಿನ ಪ್ರಥಮ ರಾಷ್ಟ್ರವಾದ ಪಾಕಿಸ್ತಾನ ಮೂರು ದಶಕಗಳೊಳಗೆ ಎರಡು ಭಾಗಗಳಾಗಿ ವಿಭಜಿಸಲ್ಪಟ್ಟಿತಲ್ಲಾ? ಪೂರ್ವ ಪಾಕಿಸ್ತಾನ ಬಾಂಗ್ಲಾ ದೇಶವೆಂಬ ಹೆಸರಿನಲ್ಲಿ ವಿಭಜಿಸಲ್ಪಟ್ಟದ್ದು ಪ್ರಾದೇಶಿಕತೆ ಹಾಗೂ ಬಂಗಾಳಿ ಭಾಷೆಯ ಹೆಸರಿನಲ್ಲಾಗಿತ್ತು, ಅಲ್ಲದೆ ಅವರಾರೂ ಧಾರ್ಮಿಕ ವಿಶ್ವಾಸವನ್ನು ಕೈಬಿಟ್ಟದ್ದರಿಂದ ಅಲ್ಲ. ಧರ್ಮವನ್ನೆತ್ತಿಕೊಂಡು ಅನುಯಾಯಿಗಳನ್ನು ಭಾವಾವೇಶಕ್ಕೊಳಗಾಗಿಸುವುದಲ್ಲದೆ ಇಸ್ಲಾಮಿನ ಈ ಜಾಗತೀಕರಣದಿಂದ ಬೇರೆ ಪ್ರಯೋಜನವೇನೂ ಇಲ್ಲ, ಅಮೆರಿಕದ ಯಜಮಾನನ ಜಾಗತೀಕರಣವನ್ನು ವಿರೋಧಿಸುವಾಗ ಜಮಾಅತೆಗಳಿಗೆ ತಾವು ಮೈಗೂಡಿಸಿ ಕೊಂಡ ತಮ್ಮ ಇಸ್ಲಾಂ ಜಾಗತೀಕರಣ ನೆನಪಿರು ವುದಿಲ್ಲ!"

"ಪ್ರಜಾಸತ್ತೆಗೆ ಬದಲಾಗಿ ಜಮಾಅತೆ ಇಸ್ಲಾಂ ಮುಂದಿಡುವ ದೈವಿಕ ಆಳ್ವಿಕೆ ಎಂದರೇನು? ದೇವರ ಆಡಳಿತ ಎಂದರೂ ದೇವರು ನೇರವಾಗಿ ಎದುರಿಗೆ

ವಿಶೇಷ ಲೇಖನ

■ ಡಾ. ಸಾರಾ ಅಬೂಬಕ್ಕರ್




ಬಂದು ಆಡಳಿತ ನಡೆಸುವುದಿಲ್ಲ ಎಂಬುದು ನಿಶ್ಚಿತ. ಆಗಲೂ ಅಧಿಕಾರ ಚಲಾಯಿಸುವುದು ಮನುಷ್ಯರು ತಾನೇ? ದೇವರ ನಿಯಮಗಳನ್ನು ಕಂಠಪಾಠ ಮಾಡಿದ ಕೆಲವರಿಗೆ ಅಂದರೆ ಪುರೋಹಿತರಿಗೆ ಆಡಳಿತದ ಅಧಿಕಾರ ನೀಡಬೇಕು. ಅವರು ದೇವರ ಆಡಳಿತ ನಡೆಸುವವರಷ್ಟೆ ಹೊರತು ಜನರ ಆಡಳಿತ ನಡೆಸುವವರಲ್ಲ, ಇವರನ್ನು ಪ್ರಶ್ನಿಸಲು ಜನರಿಗೆ ಯಾವ ಅಧಿಕಾರವೂ ಇಲ್ಲದೆ ಪ್ರಶ್ನಿಸುವವರು ದೇವರ ಶತ್ರುಗಳಾಗುತ್ತಾರೆ. ಅವರ ತಲೆ ತೆಗೆಯಲು ಆಮೇಲೆ ಯಾರನ್ನೂ ಕೇಳಬೇಕಾಗಿಲ್ಲ! ಜನರ ಜವಾಬ್ದಾರಿ ಇಲ್ಲದೆ ಇದು ಪುರೋಹಿತರು ಜನರನ್ನು ಆಳುವ ಸ್ವೇಚ್ಛಾಧಿಪತ್ಯವೇ ಆಗಿರುತ್ತದೆ. ಸ್ವೇಚ್ಛಾಧಿಪತ್ಯವನ್ನೂ ದೈವಿಕತೆಯ ಹೆಸರಿನಲ್ಲಿ ನ್ಯಾಯೀಕರಿಸ ಬಹುದು!" ಅಫಘಾನಿಸ್ತಾನದಲ್ಲಿ ಒಸಾಮಾ ಬಿನ್ ಲಾಡೆನ್ ಮಾಡಲು ಹೊರಟದ್ದು ಇದೇ ತಾನೇ?

ಕಾರಶ್ಯೇರಿಯವರು ಮತ್ತೂ ಮುಂದುವರಿಸುತ್ತಾರೆ "ಇಸ್ಲಾಮಿ ಶರಿಯತ್ (ಕರ್ಮಶಾಸ್ತ್ರ) ಎಂಬುದು ಒಂದಲ್ಲ, ಮುಸ್ಲಿಂ ಸಮುದಾಯದ, ಸುನ್ನಿ ಹಾಗೂ ಶಿಯಾ ಮತ್ತು ಇವುಗಳಲ್ಲಿಯೇ ಹಲವು ಒಳಪಂಗಡಗಳು ಹಾಗೂ ಇತ್ತೀಚಿಗಿನ ಪುನರುತ್ಥಾನವಾದಿಗಳು ಎಂದು ಹಲವಾರು ಪಂಗಡಗಳಿದ್ದು ಇವರೆಲ್ಲರೂ ಒಂದೇ ರೀತಿಯ ಶರಿಯತ್ ನಿಯಮವನ್ನನುಸರಿಸದೆ ಇವುಗಳ ಅನುಷ್ಠಾನದಲ್ಲಿ ವ್ಯತ್ಯಾಸ ಗಳಿವೆ. ಪರಸ್ಪರರನ್ನು ಮುಸ್ಲಿಮರೆಂದು ಅಂಗೀಕರಿಸದವರೂ ಇದ್ದಾರೆ. ನಾಮಧಾರಿ ಮುಸ್ಲಿಮರು, ಅವಿಶ್ವಾಸಿಗಳು, ಹೊರಹೋದವರು ಎಂದು ಪರಸ್ಪರರನ್ನು ನಿಂದಿಸುತ್ತಾರೆ. ಸುನ್ನಿಗಳ ಒಂದು ವಿಭಾಗ ಶಿಯಾ ಸಮುದಾಯವನ್ನು ಇಸ್ಲಾಂ ಧರ್ಮಾನುಯಾಯಿಗಳೆಂದು ಒಪ್ಪಿಕೊಳ್ಳುವುದಿಲ್ಲ, ಹಾಗೆಯೇ ಅಹಮದೀ ಖಾದಿಯಾನಿ ಎಂಬ ಒಂದು ಚಿಕ್ಕ ಪಂಗಡವಾದ ಖಾದಿಯಾನಿ ಸಮುದಾಯವನ್ನು ಕಾಫಿರರೆಂದೇ ಕರೆಯುತ್ತಾರೆ. ಈ ವಿಭಾಗಗಳ ಮಸೀದಿಗಳನ್ನು ಕೆಡಹು ವುದು, ಅವರ ಮೇಲೆ ಆಕ್ರಮಣ ಮಾಡುವುದು, ಕೊಲೆ ಮಾಡುವುದೆಲ್ಲವೂ ನಡೆಯುತ್ತಲೇ ಇದೆ. ಮೊಹರ್ರಂ ಮೆರವಣಿಗೆಯ ಮೇಲೆ ಪಾಕಿಸ್ತಾನ ಮತ್ತು ನಮ್ಮ ದೇಶದ ಉತ್ತರ ಪ್ರದೇಶದಲ್ಲಿ ಆಕ್ರಮಣ ನಡೆಯುತ್ತಿರುವುದನ್ನು ಟಿ.ವಿ.ಗಳಲ್ಲಿ ನಾವು ನೋಡುತ್ತಲೇ ಇದ್ದೇವೆ. ಹೀಗಿರುವಾಗ ಯಾವ ಇಸ್ಲಾಮಿನ ಆಳ್ವಿಕೆಯನ್ನು ಮೌದೂದಿ ಅಂಗೀಕರಿಸುತ್ತಾರೆ? ಇವರು ಬೋಧಿಸುವ ಶರಿಯತ್ತನ್ನು ಇತರ ವಿಭಾಗಗಳು ಒಪ್ಪಿಕೊಳ್ಳುತ್ತವೆಯೇ? ಇಸ್ಲಾಂ ರಾಷ್ಟ್ರವೆಂಬುದು ಎಲ್ಲ ಮುಸ್ಲಿಮರಿಗೆ ಒಪ್ಪಿಗೆಯಾಗುವ ಒಂದು ರಾಷ್ಟ್ರವಾಗಲು ಎಂದಿಗೂ ಸಾಧ್ಯವಿಲ್ಲ, ಹಲ ವಾರು ವಿಷಯಗಳಲ್ಲಿ ಒಮ್ಮತವಿಲ್ಲದಿರುವಾಗ ಮೌದೂದಿ ಎಂತಹ ಇಸ್ಲಾಂ ರಾಷ್ಟ್ರವನ್ನು ಸ್ಥಾಪಿಸುತ್ತಾರೆ?" ಕಾರಶ್ಯೇರಿಯವರು ಮುಂದು ವರಿಸುತ್ತಾ, "ಇಸ್ಲಾಮಿಕ್ ರಾಷ್ಟ್ರ ಸ್ಥಾಪಿಸುವುದು ಮುಸ್ಲಿಮರ ಜವಾಬ್ದಾರಿ ಎಂದು ಹೇಳಿದವ ರಾರು? ಎಲ್ಲಿ ಹೇಳಿದರು? ಇಸ್ಲಾಮಿನ ಪವಿತ್ರ ಗ್ರಂಥವಾದ ಖುರ್‌ಆನಿನಲ್ಲಾಗಲಿ, ಪ್ರವಾದಿಯ ವರ ಬೋಧನೆಗಳಲ್ಲಾಗಲಿ ಅಂತಹ ಒಂದು ಆಶಯವಿಲ್ಲ, ಇಸ್ಲಾಮಿ ರಾಷ್ಟ್ರವೆಂಬ ಒಂದು ಸಂಕಲ್ಪ ಖುರ್‌ಆನಿನಲ್ಲಿಲ್ಲ." ಹೀಗೆ ಜಮಾಅತೆ ಇಸ್ಲಾಮಿಯ ಇನ್ನೂ ಅದೆಷ್ಟೊ ಮುಖವಾಡಗಳನ್ನು ಕೇರಳದ ಈ ಮುಸ್ಲಿಂ ಬುದ್ಧಿಜೀವಿಗಳು ಬಯಲಿಗೆಳೆಯುತ್ತಿದ್ದಾರೆ.

ನಮ್ಮ ಯುವ ಜನಾಂಗವನ್ನು ಈ ಮೌದೂದಿ ಹಿಂಬಾಲಕರು ಹಾದಿ ತಪ್ಪಿಸುತ್ತಲೇ ಇದ್ದಾರೆ. ಕೆಲವು ಯುವಜನರ ಮತಾಂಧತೆ ಎಲ್ಲಿಯವರೆಗಿದೆಯೆಂದರೆ ಪ್ರತಿಭೆಯಿಂದಲೇ ವೈದ್ಯಕೀಯದಲ್ಲಿ ಉಚಿತ ಸೀಟು ಪಡೆದ ವಿದ್ಯಾರ್ಥಿಯೋರ್ವನು ಆ ಶಿಕ್ಷಣವನ್ನು ತಿರಸ್ಕರಿಸಿ 'ಸತ್ತ ಬಳಿಕ ಸ್ವರ್ಗಕ್ಕೆ ಹೋಗುವ' ಧಾರ್ಮಿಕ ಶಿಕ್ಷಣ ಪಡೆಯಲು ದಿಯೊಬಂದ್‌ಗೆ ಹೋಗಿ ಸೇರಿಕೊಂಡಿದ್ದಾನೆ! ಕೇರಳದ ಕೆಲವು ಶ್ರೀಮಂತ ಮನೆತನದ ಮಕ್ಕಳನ್ನು, ಹೆತ್ತವರು ಧಾರ್ಮಿಕ ಶಿಕ್ಷಣ ಪಡೆಯಲು ದಕ್ಷಿಣ ಆಫ್ರಿಕಾಕ್ಕೆ ಕಳುಹಿಸಿದ್ದಾರೆ. ನಮ್ಮ ದೇಶದ ದಿಯೊಬಂದ್‌ನಲ್ಲಿಲ್ಲದ ಯಾವ ಧಾರ್ಮಿಕ ಶಿಕ್ಷಣ ದಕ್ಷಿಣ ಆಫ್ರಿಕಾದಲ್ಲಿದೆಯೆಂದು ನನಗಿನ್ನೂ ಅರ್ಥವಾಗಿಲ್ಲ, ಒಂದೆಡೆಯಲ್ಲಿ ಹೆತ್ತವರೇ ಮಕ್ಕಳನ್ನು ಈ ರೀತಿ ಮತಾಂಧತೆಯಲ್ಲಿ ಮುಳುಗಿಸುತ್ತಿದ್ದರೆ ಇನ್ನೊಂದೆಡೆಯಲ್ಲಿ ಮಕ್ಕಳೇ ತಮ್ಮ ಮತಾಂಧತೆಯಿಂದ ವಿದ್ಯಾಭ್ಯಾಸವನ್ನು ನಿರ್ಲಕ್ಷಿಸಿ, ಉದ್ಯೋಗಕ್ಕೂ ತಿಲಾಂಜಲಿ ಯಿತ್ತು ಹೆತ್ತವರಿಗೆ ಭಾರವಾಗಿ 'ಎಲ್ಲವನ್ನೂ ದೇವರು ಕೊಡುತ್ತಾನೆ' ಎಂದು ನಿಶ್ಚಿಂತೆಯಿಂದಿರುವುದೂ ಇದೆ! ಇಂತಹವರು ಈ ಮತಾಂಧತೆಯಿಂದ ಹೊರಬಂದು ಬದುಕು, ಬದುಕಗೊಡು ಎಂಬ ಆಶಯವನ್ನು ಮೈಗೂಡಿಸಿಕೊಂಡು ಈ ದೇಶದ ಉತ್ತಮ ಪ್ರಜೆಗಳಾಗಿ ಬದುಕಿ ಬಾಳಬೇಕೆಂದು ಈ ಯುವಕರೊಡನೆ ನನ್ನ ಕಳಕಳಿಯ ವಿನಂತಿ. ■

...ನುಷ್ಯತ್ವ ವಿರೋಧಿ 'ಜಾತಿ' ಕಳಂಕ ದಟ್ಟವಾಗಿದೆ, ...ಸಿದ ಹೊಟ್ಟೆಯಲ್ಲೂ ಬೇರೆಯವರ ನೋವಿಗೆ ...ಡಿಯುವ ಹೃದಯಗಳ ಸಂಕೀರ್ಣ ಸಂಬಂಧಗಳಿವೆ. ಈ ರೀತಿಯ 'ವಾಸ್ತವ'ಗಳನ್ನು ಗೊರವರ ಪ್ರಾಮಾಣಿಕವಾಗಿ ...ಸಿದ್ದಾರೆ. 'ಭ್ರಮೆ' 'ಲಾಟರಿ' 'ಕನಸು ಕರಗಿದಾಗ' ...ಗ್ರಾಢ ಬದುಕಿನ ತಲ್ಲಣಗಳಿಗೆ ಅವಶ್ಯಕವಲ್ಲದ ಬಣ್ಣ ...ಬುವ ಯತ್ನವಿಲ್ಲದೆ, ಸಹಜವಾಗಿ ಚಿತ್ರಿಸುವ ಕೌಶಲ ...ಎದ್ದುರಿಗಿದೆ.



"ಜೀವಿನ ಮರದಲ್ಲಿ ಗೂಡು ಕಟ್ಟಿದ್ದ ...ಕ್ಕಿ ತನ್ನ ಮರಿಗೆ ಗುಟುಕು ಕೊಡುವುದನ್ನು ...ನು ಬೆರಗಿನಿಂದ ದಿಟ್ಟಿಸುತ್ತಾ ನನ್ನ ಭುಜದ ...ಜೆ ಕೈಯಿಟ್ಟು ತೋರುಬೆರಳಿನಿಂದ ...ನನ್ನು ತೋರಿಸಿದ್ದಿ" ಎಂಬಲ್ಲಿ ಮೊದಲ ...ದ ಹಿತವನ್ನು ನೆನಪಿಸಿ ಇನ್ನಿಲ್ಲದ ...ಯಲ್ಲಿ ತೀಲುವಂತೆ ಮಾಡುವ ಮಾರ್ಮಿ ...ಸಿದೆ. ಮುಖ್ಯವಾಗಿ ಗಮನಿಸ ...ದದ್ದು "ಆ ಕ್ಷಣ, ಅಪ್ಪ ಕೊಡುತ್ತಿದ್ದ ...ಜ್ಜಿಗೆ ಕುಡಿದಾಗಿನ ನೆಮ್ಮದಿಯುಂಟಾ ...ತು" ಎನ್ನುವ ಸಮೀಕರಣ. ಜೀವದ ಗೆಳತಿ, ಜೀವ ...ನ ಅಪ್ಪನ ಮಧ್ಯ ಬದುಕಿನಲ್ಲಿ ಸಮತೋಲನ ...ವ ಸಾಧ್ಯತೆಗಳನ್ನು ಇಲ್ಲವಾಗಿಸಿ ಜೀವಪ್ರೀತಿಯನ್ನು ...ಷ್ಟವಾಗಿ ಕಟ್ಟಿಕೊಡುವ ಗೊರವರರಿಗೆ ಒದುಗನ ...ತಿ ಎಂದಿಗೂ ಸಿಗುತ್ತದೆ.

...ನ್ನ ಕೆಲವು, ಅನುಭವಗಳ ಅನಾವರಣದಲ್ಲಿ, ...ಕ್ಕ ಕುಸುರಿಗಳಿವೆ. 'ಎದೆಯಾಗಿನ ದುಃಖವನ್ನು, ...ಸುವ ಹುಡುಗಿಯ ಸಾಬೀತಿನಿಂದ ಸರಿಯಾಗಿ ಶರಣಾಗಿದ್ದ' ಎನ್ನುವ ನಿರ್ಣಯ ಲೇಖಕನ ಬದುಕಿನ ದೃಷ್ಟಿಕೋನದಲ್ಲಿ ಸಂಪೂರ್ಣತೆಯ ಕೊರತೆಯನ್ನು ತೆರೆದಿಡುತ್ತದೆ. "ಚಿಂತೆ ಮರೆಯಲು ಅಂವ ನಿತ್ಯವೂ ಸಾರಾಯಿ ಕುಡಿದೇ ರಾತ್ರಿಯ ಹೊಸ್ತಿಲೊಳಗೆ ಹೆಜ್ಜೆ ಇಡುತ್ತಾನೆ" ಎನ್ನುವ ಪೂರ್ವ ನಿರ್ಧಾರಿತ ನಿಲುವು ಕಥೆಗಾರನಿಗೆ ಅನವಶ್ಯಕ. ಬರವಣಿಗೆ ಒಂದು ಐಡೆಂಟಿ ಟಿಯ ಹೊರತಾಗಿ, ಬದುಕಿನ ಸ್ಥಿತ್ಯಂತರಗಳಲ್ಲಿ ಸಾಂದರ್ಭಿಕ ಅಗತ್ಯಕ್ಕೆ ತಕ್ಕಂತೆ ಪಾತ್ರಗಳನ್ನು ಮಾತ್ರ ಮಾತನಾಡಿಸುತ್ತಾ ಸುಮ್ಮನೆ ನಡೆಯುತ್ತಿರುವ ವಿವೇಕ ಕಥೆಗಾರನಿಗೆ ಬೇಕಿದೆ.

ಸಂಬಂಧದ ಸಂಕೀರ್ಣತೆ, ಹೊಸ ಅನುಭವಗಳಿಗೆ ಒಡ್ಡಿಕೊಳ್ಳುವಿಕೆ ಮುಖ್ಯ ವಾಗಬೇಕಾದರೂ, ಬದುಕಿನ ಪ್ರಗತಿಪರ ಬದ್ಧತೆ, ಸ್ಪಷ್ಟ ನಿಲುವು, ಖಚಿತ ತೀರ್ಮಾನ, ಅವಶ್ಯಕ ವಿಡಂಬನೆಯ ಮೂಲಕ ನಮ್ಮ ಸಾಧ್ಯತೆ ಹಾಗೂ ದೂರ ಗಾಮಿ ಸಾರ್ಥಕ್ಯವನ್ನು ಸಾಧಿಸುವತ್ತ ಅನುಭವ ಗಮ್ಯದೆಡೆಗೆ ಟಿ.ಎಸ್. ಗೊರ ವರ ಇನ್ನೂ ಹೆಚ್ಚಿನ ಶ್ರದ್ಧೆಯಿಂದ ನಡೆದರೆ ಭವಿಷ್ಯ ಇವರ ಪರವಾಗಿರುತ್ತದೆ. ಕಥೆಯ ಪಾತ್ರದ ಲಿಂಗವೇ ಬದಲಾಗುವಷ್ಟು ಅಕ್ಷರ ತಪ್ಪುಗಳಿಗೆ ಯಾರು ಹೊಣೆ?

"ನನ್ನ ಕಥೆ ಪ್ರಕಟವಾದಾಗಲೆಲ್ಲ ಎದೆಯಲ್ಲಿ ನೋವು ಮಿಸುಗಾಡುತ್ತದೆ; ಏಕೆಂದರೆ ನನ್ನ ತಂದೆತಾಯಿ ಓದಲು ಬಾರದವರು" ಎನ್ನುವ ಗೊರ ವರನ ಸಾಹಿತ್ಯ ಮತ್ತು ಬದುಕಿಗೆ ಶುಭಾಶಯ. ■

ಮಾಡೋ ಬಜೆಟ್ಟಿಗೂ, ನ್ಯಡಿಯೋ ಸರಕಾರಕ್ಕೂ ಸಮುಂದಿರದಿಲ್ಲ

ಜುಮ್ಮಿ ಮತ್ತು ಉಗ್ರಿ ಬರುವುದನ್ನೇ ಕಾದಿದ್ದ ಕಾಳಮಾವ,

"ಎಡೂರಪ್ಪ ಏನು ಬಜೆಟ್ಟು ಮಾಡಿದ್ದನ?" ಎಂದ

"ರೈತರಿಗೆ ದಳ್ಳದ್ನೆ ಮಾಡ್ಯವುನೆ ಕಣಮಾವ."

"ಏನು ಮಾಡಿದ್ದನೂ?"

"ಹಾಲು ಮಾರೋರಿಗೆ ಲೀಟ್ರುಗ್ಯರಡು ರೂಪಾಯಿ ಸಬಸಿಡಿ ಕೊಟ್ಟವುನೆ."

"ಅಪಟೀಪ ನಮ್ಮೂರಿಗೇನೂ ಉಪಯೋಗವಿಲ್ಲ

ಕಟ್ಟೆಪುರಾಣ

ಬಿ. ಚಂದ್ರೇಗೌಡ

ಕಂಡ್ರೆ" ಎಂದ ಸೀರ.

"ನೀನು ಹಾಲು ಕರದು ಡೈರಿಗೆ ಮಾರಬ್ಯಾಡ ಅಂತ ಯಾರಪ್ಪ ಹೇಳಿದ್ದರು? ಕರಾವಿನ ಯಮ್ಮೆ ದನನ್ಯಾಲ್ಲ ಮಾರಿಕಂಡು ಕೂತಿದ್ದಿರಿ. ಅದ್ಕೆ ಎಡೂರಪ್ಪನ ಯರಡು ರೂಪಾಯಿ ಕಳಂಕದ್ರಿ" ಎಂದ ಉಗ್ರಿ.

"ಸ್ತ್ರೀಸಗತಿಗೆ ಕಡಿಮೆ ಬಡ್ಡಿಲಿ ಸಾಲ ಕೊಟ್ಟನಂತೆ ಕಣಮಾವ" ಎಂದಳು ಜುಮ್ಮಿ.

"ಅಪೂ ನಮ್ಮೂರ ಮುಟ್ಟಗೆ ಉಪೇಗಿಲ್ಲ ಕಣೆ. ಇರೊ ಸ್ತ್ರೀಸಗತಿ ಸಂಗಡವ್ಯಲ್ಲ ಜಗಳಾಡಿಕಂಡು ತಲೆ ತರಕಂಡು ಕುಂತವೆ."

"ನಮ್ಮೂರಿಗಾಗದೆ ಇದ್ರೇನು, ಚನಾಗಿರೊ ಸಂಗಡೋರು ಉಪೇಗ ಮಾಡಿಕತ್ತರೆ ಬುಡ್ರಿ" ಎಂದಳು ಜುಮ್ಮಿ.

"ಅದ್ಯಾಲಿನ್ನೇನು ಕೊಟ್ಟದ್ದನ?"

"ಹತ್ತೆಚ್‌ಪಿ ಮಿಷನ್‌ಗೆ ಕರಂಟು ಫ್ರೀ."

"ಅಲ್ಲಾ ಕಂಢ್ಯ, ಕರೆಂಟು ಯಾವಾಗ ಬತ್ತದೆ. ಯಾವಾಗೋಯ್ತದೆ ಅನ್ನದೆ ಯಾರಿಗೂ ಗೊತ್ತಿಲ್ಲ. ಇನ್ನ ಫ್ರೀ ಕೊಡ್ತಾನೆ ಅಂದ್ರೆ ಅದ್ಯಾವಾಗ ಕೊಡ್ತಾನೆ?"

"ಏನಪ್ಪ, ಆಗಪ್ಪಿ, ಒಟಪನೇ ತಾರೀಕಿಂದ ಸ್ಟಾಟ್ ಮಾಡಿದ ಮಿಷನ್ನ ಯಾರೂ ಆಫ್ ಮಾಡಂಗೇ ಇಲ್ಲ, ಕರೆಂಟು ಬಂದಾಗ ನೀರ ವಡಕಂಡು ಅದೇ ಸುಮ್ಮನಾಯ್ತದೆ. ಆದ್ರು ಮೀಟ್ರಾಕ್ತನಂತೆ"

"ಫ್ರೀಯಾಗಿ ಕೊಟ್ಟ ಮ್ಯಾಲೆ ಮೀಟ್ರ್ಯಾಕೆ?"

"ಬಟ್ಟ ಉಪಯೋಗಿಸಿದ್ದೂ ಲ್ಯಕ್ಕ ಸಿಗಬೇಕಂತೆ."

"ಅದು ವಳ್ಳೆ ಇದೇ ಬುಡು, ಇನ್ನೇನು ಕೊಟ್ಟವುನೆ?"

"ಮೂರು ಪರಸೆಂಟ್ ಬಡ್ಡಿಗೆ ಸಾಲಕೊಟ್ಟನಂತೆ."

"ಮದ್ಲೇಟತ್ತು ಬಡ್ಡಿದರ?"

"ನಾಕು ಪರಸೆಂಟತ್ತು, ಒಂದು ಪರಸೆಂಟು ಇಳಿಸ್ಯವುನೆ ಅಷ್ಟೆಯ."

"ಆಸ್ರಯದ ಮನಿಗೆ ನಲವತ್ತ ಸವುರ ಕೊಟ್ಟನಂತೆ ಕಣಮಾವ" ಎಂದಳು ಜುಮ್ಮಿ.

"ಇಪ್ಪತ್ತು ಸವುರ ಇದ್ದಾಗ್ಲೇ ನಾಕು ಸವುರ ಹಿಡಕಂಡು ಕೊಡತಿದ್ರು ಸರಕಾರಿ ಜನ. ಈಗ ಎಂಟು ಸವುರ ಹಿಡಕಂಡು ಕೊಡ್ತರತ್ತಗೆ" ಎಂದ ಉಗ್ರಿ.

"ಎಂಟು ಸವುರ ಯಾಕಿಡಕಂಡರೂ?"

"ಲಂಚ ಅಂತ ಹಿಡಕತ್ತರೆ ಕಣಮಾವ ಸರಕಾರಿ ಅಧಿಕಾರಿಗಳು."

"ಅಲ್ಲಾ, ಆಸ್ರಯದ ಮನೆ ದುಡ್ಡು ಹಿಡಿತಕ ಅಂದ್ರೆ ಅದ್ವರಿನ್ನಂಥಾ ಕರುಬ ನನ್ನ ಮಕ್ಕಳು ಅಂತ" ಎಂದ ಕಾಳಮಾವ.

"ಅಂಥಾ ಜನ ರಿಟ್ಯರಾಗೋ ವಯಿಸ ಅರತ್ತೊರ್ಸ



ಮಾಡಿದನಲ್ಲ ಈ ಎಡೂರಪ್ಪ ಇದಕ್ಯೇನೇಳನಾ?"

"ಅರವತ್ತೊರ್ಸ ಮಾಡಿದ್ನೆ?"

"ಊ ಕಣ ಮಾವ. ಪರವಾಗಿಲ್ಲ ಏನೋ ಸುಮಾರಾಗಿ ಬಜೆಟ್ ಮಾಡ್ಯವುನೆ ಅನ್ನಕಳೊದತ್ಗೆ ಇದೊಂದು ಕ್ಯಟ್ಟ ಕೆಲಸ ಮಾಡಿಬುಟ್ಟ ಅತ್ಗೆ."

"ಇನ್ನು ಒಂದು ಕ್ಯಟ್ಟ ಕ್ಯಲಸ ಮಾಡ್ಯವುನೆ ಕಣೊ ಉಗ್ರಿ" ಎಂದುಕೊಂಡು ಪಾಟಿಸ್ಸೆ ಬಂದ.

"ಅದ್ಯಾವುದಪ್ಪ ನಾನು ಕಾಣದಂಗೆ?"

"ಲಿಕ್ಕರ್ ಶಾಪಿಗೆ ಹಿಸ್ಯಾಪಟ್ಟೆ ಲೈಸೆನ್ಸ್ ಕೊಡ್ತಾನಂತೆ."

"ಇನ್ನ ಮ್ಯಾಲೆ ಹತ್ತು ಬ್ರಾಂದಿ ಅಂಗಡಿ ಇರೊ ಜಾಗದಲ್ಲಿ ಇಪ್ಪತ್ತಾಯ್ತದೆ."

"ಅಲ್ಲಿಗೆ ಸರಾಪಿನಂಗಡಿ ಜಾಗದಲ್ಲಿ ಬ್ರಾಂದಿ ಅಂಗಡಿ ಇರತಪೇನ್ನ?"

"ಊ ಕಣಕ್ಕ, ತರಡ್‌ಕ್ಲಾಸ್ ಡ್ರಿಂಕ್ ಮಾಡೋರ್ಯಲ್ಲ ಇನ್ನ ಮ್ಯಾಲೆ ಸೆಕೆಂಡ್ ಕ್ಲಾಸಾದ್ರು."

"ನೀನ್ಯಾವ ಕಳಾಸು ಈಗ?"

"ಈಗ ಗಾಜಿನ ಗಳಾಸು ಕಣಕ್ಕ. ಮದ್ಲು ಪ್ಲಾಸ್ಟಿಕ್ ಚೀಲವ ಕುರುಕಿ ಗಂಟ್ಲಿಗೆ ಪಿಚಕಾರಿ ವಡಕತ್ತಿದ್ದೆ. ಈಗ ಗಾಜಿನ ಗ್ಲಾಸಲ್ಲಿ ಸಿಪ್ ತಗತಿನಿ. ಅಷ್ಟೆ ನೋಡು ಎಡೂರಪ್ಪನಿಂದಾದ ಬದ್ಲಾವಣೆ."

"ಅಂತೂ ಕ್ಯರೆ ನೀರ ಕ್ಯರಿಗೆ ಚೆಲ್ಲಿದಾ ಅನ್ನು" ಎಂದ ಕಾಳಮಾವ.

"ನೀನೇಳದು ಒಂಥರಾ ನಿಜ ದ್ವಡಪ್ಪ. ಎಡೂರಪ್ಪ ಶರಾಪಿಗೆ ಬಳಸೋ ಸ್ಪಿರಿಟ್ಟ ಬ್ರಾಂದಿಗೆ ಬಳಸಿ ರೇಟೇರಿಸಿಮದಿಗಿದ ಅತ್ಗೆ."

"ಏರಸಲಿ ಬುಡು. ಅದರಿಂದ ನನಿಗೇನಾದತು?"

"ಮುದ್ಲಿಂದ ನಿನಿಗೂ ಸರಕಾರದ ಬಜೆಟ್ಟಿಗೂ ಅಷ್ಟು ಸಮುಂಧವೇ ಇಲ್ಲ ದ್ವಡಪ್ಪ ಸರಕಾರದಿಂದ ದೂರನೆ ಉಳಕಂಡು ಬದುಕಿದೋನು ನೀನು. ಆದ್ರು ಎಡೂರಪ್ಪ ನಿನಿಗೂ ಒಂದು ಬೆನಿಫಿಟ್ ಕೊಟ್ಟವುನೆ."

ಸ್ಮಾಲ್ ಈಸ್ ಬ್ಯೂಟಿಫುಲ್

ಆ ದಯಾಮಯನಾದ ಭಗವಂತನ ಕೃಪಾದೃಷ್ಟಿ ಯಾವಾಗ ಯಾರ ಮೇಲೆ ಬೀಳುವುದೋ ಹೇಳಲಸದಳವಾದುದು. ಈಗಂತೂ ಅದು ಜನಪ್ರತಿನಿಧಿಗಳ ಮೇಲೆ ಹರಿದಿರುವಂತಿದೆ. ಎಲ್ಲೆಲ್ಲೂ ಅಭದ್ರ ಆಡಳಿತವನ್ನೇ ಕೃಪೆ ಮಾಡಿದ್ದಾನೆ. ಪ್ರತಿಯೊಬ್ಬ ಸಂಸದನಿಗೂ ಬೆಲೆ ಇದೆ ಎಂಬ ಪ್ರಜಾಪ್ರಭುತ್ವದ ನೀತಿಯನ್ನು ಸಾದರಗೊಳಿಸಿದ್ದಾನೆ.


ಈ ಹಿಂದೆ ಈ ನೀತಿ ಇರಲಿಲ್ಲವೆಂದು ಅಲ್ಲ, ಆದರಿಂದ ಸಂಸದರಿಗೆ ಹೆಚ್ಚಿನ ಉಪಯೋಗ ಆಗುತ್ತಿರಲಿಲ್ಲ, ಇದಕ್ಕೆ ಬಹುಮುಖ್ಯ ಕಾರಣ ಆಡಳಿತದ ಮುಂಚೂಣಿಯಲ್ಲಿದ್ದ ನಾಯಕರು. ಎಂತೆಂತಹ ಮೂರ್ಖ ಶಿಖಾಮಣಿಗಳಿಂದ ನಾವು ಆಳಲ್ಪಡುತ್ತಿದ್ದೇವೆಂದು ಈಗ ನೆನಸಿಕೊಂಡರೇ ಭಯಾನಕ ಎನಿಸುತ್ತದೆ.

1979 ರ ಸಮಯ. ಮೊರಾರ್ಜಿ ದೇಸಾಯಿ ಪ್ರಧಾನಿ ಆಗಿದ್ದರು. ಅವರ ಆಡಳಿತದಿಂದ ಬೇಸತ್ತ ಚರಣ್‌ಸಿಂಗ್ ಮಂತ್ರಿಮಂಡಳದಿಂದ ಹೊರಬಿದ್ದರು. ದೇಸಾಯಿ ಆಡಳಿತ ದೋಲಾಯಮಾನ ಸ್ಥಿತಿ ತಲುಪಿತು. ವಿರೋಧ ಪಕ್ಷದ ಕೆಲವರ ಬೆಂಬಲ ಅನಿವಾರ್ಯ ಅನ್ನುವ ಘಟ್ಟ ಮುಟ್ಟಿತು. ಅಂತಹ ಸಂಸದರೂ ಇದ್ದರಂತೆ. ಕೇವಲ ಎರಡೇ ಎರಡು ಲಕ್ಷ ರೂಪಾಯಿಗಳಿಗೆ ತಮ್ಮ ನಿಷ್ಠೆ ತೋರಿಸಲು ತಯಾರಾಗಿದ್ದರಂತೆ. ಆ ಪ್ರಧಾನಿ ಎಂತಹ ದಡ್ಡ ಅಂತೀರಿ. ಈ ವಿಷಯ ಕಿವಿಗೆ ಬಿದ್ದ ತಕ್ಷಣ 'ಎಳ್ಕೊ ಬನ್ನಿ ಅವರ್ನ' ಅನ್ನಬಾರದೆ. ಪರಂತು ಕುದುರೆ ವ್ಯಾಪಾರ ಕುದುರಿಸಿದ್ದವರನ್ನೇ ಕರೆದು 'ಎರಡು ಲಕ್ಷ ಅಲ್ಲ, ಒಂದೇ ಒಂದು ಪೈಸೆ ನೀಡಿದರೂ ನನ್ನ ನಿಷ್ಠುರಕ್ಕೆ ಗುರಿಯಾಗುತ್ತೀರಿ' ಅಂತು ಹಿತೈಷಿಗಳನ್ನೇ ಜಾಡಿಸೋದೆ! ಅಷ್ಟು ಮಾತ್ರ ಅಲ್ಲ, 'ಯಾರ್‍ಯಾರು ಇರ್ತಾರೋ ಇರಲಿ. ಹೋಗೋರು ಹೋಗ್ಲಿ' ಅಂತಾನು ಅಂದುಬಿಡೋದೆ!

ಪ್ರಧಾನಿ ಹೀಗಂದರೂ ಅವರ ಹಿತೈಷಿಗಳು ಸುಮ್ಮನೆ ಕೂರಲು ಸಾಧ್ಯವೆ. 'ಹೋಗೋರು ಹೋಗ್ಲಿ' ಅಂದರೆ ಎಲ್ಲಾನೂ ಕಂಬಿ ಕೀಳೋನೇಯ. ಗೆದ್ದೆತ್ತಿನ ಬಾಲ ಹಿಡಿಯೋದು ಜಾಯಮಾನ ತಾನೆ. ಈ ವಯ್ಸನ ಕಪಿಮುಷ್ಟಿ ಗೊತ್ತಿದ್ದ ಅವರೇನು ಮಾಡಿದರು ಅಂದರೆ ಕೈಕೈ ಹಿಸುಕುತ್ತಾ, ಹಲ್ಲು ಗಿಂಜುತ್ತ 'ನೀವೇ ಅವರನ್ನು ಖುದ್ದು ಕರೆಸಿ ಮಾತನಾಡ್ಸಿ' ಅಂದರು. ಅದಕ್ಕೆ ಪ್ರಪಂಚ ಜ್ಞಾನವೇ ಇಲ್ಲದ ಪ್ರಧಾನಿ ಅನ್ನಿಸ್ಕೊಂಡೋನು 'ಸದಸ್ಯರನ್ನು ಓಲೈಸಿಕೊಂಡು ಸರ್ಕಾರ ನಡೆಸಬೇಕಾ' ಅಂತ ದಬಾಯಿಸಿಬಿಡೋದ!

ಆನಂತರದಲ್ಲಿ ಇಂತಹ ಹುಚ್ಚು ಪ್ರಧಾನಿ ಬರಲಿಲ್ಲ ಅನ್ನೋದೆ ದೇಶದ ಸೌಭಾಗ್ಯ!

ಬರುತ್ತಾಬರುತ್ತಾ ಪ್ರಧಾನಿಯಾದವರಿಗೆ ಇಂತಹ ಹುಚ್ಚು ಇಳಿಯುತ್ತಾ ಹೋಯಿತು. ಪಿ.ವಿ. ನರಸಿಂಹ ರಾಯರು ಅಧಿಕಾರದ ಗದ್ದುಗೆ ಏರುವ ವೇಳೆಗೆ ಹೇಗಾದರೂ ಮಾಡಿ ಅಧಿಕಾರಕ್ಕೆ ಅಂಟಿಕೊಂಡೇ ಇರಬೇಕು ಅನ್ನುವ ಪ್ರಾಪಂಚಿಕ ಜ್ಞಾನ ಅಂಕುರಿಸಿತು. ಗಾಂಧಿ ಅನ್ನೋ ಆ ಮಹಾತ್ಮ ಹರಹರ ಅಂದು ನಲವತ್ತೆಂಟು ವರ್ಷ ಆಗಿತ್ತಲ್ಲವಾ. ನ್ಯಾಯ, ನೀತಿ, ಧರ್ಮ ಇಂತಹವೆಲ್ಲ ವರ್ಷೇವರ್ಷೇ ಸವಕಳಿ (depreciate) ಆಗುತ್ತಾ ಬರಲಾಗಿ ಅವುಗಳ ಲುಪ್ತ ಬೆಲೆ (salvage value)



ಹೆಚ್ಚುಕಡಿಮೆ ಸೊನ್ನೆ ಮಟ್ಟಕ್ಕೆ ಬಂದಿತ್ತು. ಇಂತಹ ಸಂದರ್ಭದಲ್ಲೇ ನರಸಿಂಹರಾಯರ ಕುರ್ಚಿನೆ ಅಲುಗಾಡೋಕೆ ಶುರುವಾಯ್ತು, ಇದು ಬೀಳಕೂಡದು ಅಂತ ವಿರೋಧ ಪಕ್ಷದ ಕೆಲವರು ಫೆವಿಕಾಲ್ ಆದರು. ಈ ಫೆವಿಕಾಲ್‌ಗೆ ಐಳರಿಂದ ಹತ್ತು ಲಕ್ಷದವರೆಗೂ ರೇಟು ಇತ್ತು ಅನ್ನುವುದು ಬೇರೆ ಮಾತು.

ಅಲ್ಲ ಈ ದೇಶದಲ್ಲಿ ಕಾನೂನು ಅಂತ ಒಂದು ಇದೆ. ನ್ಯಾಯಾಲಯ ಅಂತಾನೂ ಇದೆ. ಹಾಡುಹಗಲೇ ಇಂತಹ ದರೋಡೆ ನಡೆಯುತ್ತಿದ್ದರೂ ಬೆಕ್ಕು ಕಣ್ಣುಮುಚ್ಚಿ ಹಾಲು ಕುಡಿಯುವಂತೆ ಇವರು ಮಾಡಿದರಾ ಅನ್ನಿಸಬಹುದು. ಇಲ್ಲ ಇಲ್ಲ, ಕಾನೂನು ಚುರುಕಾಯಿತು. ಜಾರ್ಖಂಡ್ ಮುಕ್ತಿ ಮೋರ್ಚಾ ಸದಸ್ಯರು ಇಂತಹ ಭ್ರಷ್ಟಾಚಾರದಲ್ಲಿ ತೊಡಗಿದ್ದರು ಅಂತ ಸಿಬಿಐ ತನಿಖೆ ನಡೀತು. ಸುಪ್ರೀಂಕೋರ್ಟಿಗೂ ಕೇಸು ಬಂತು. ಆದರೇನು ಮಾಡುತ್ತೀರಿ. ಕಾನೂನಿನ ತೊಡಕು ಅಡ್ಡ ಬಂತು. ಏನು ತೊಡಕು ಅಂದ್ರೆ- ಬಹುಮತ ಸಾಬೀತು ಪಡೆಯುವ ಮುನ್ನ ಮಾನ್ಯ ಸಂಸತ್ ಸದಸ್ಯರ ಬ್ಯಾಂಕ್ ಅಕೌಂಟ್ ಯದ್ವಾತದ್ವಾ ಏರಿತ್ತು ಅನ್ನುವುದೂ ಖರೆ. ಅದೇ ಮಾನ್ಯರು ಸರ್ಕಾರದ ಪರವಾಗಿ ಮತ ನೀಡಿದರು ಎಂಬುದೂ ನಿಜ. ಆದರೆ... ಮಾನ್ಯ ಸದಸ್ಯರು ಹಣ ಪಡೆದೇ ಮತ ನೀಡಿದರು ಎಂಬುದಕ್ಕೆ ಪುರಾವೆ ಇರಲಿಲ್ಲ! ನೂರು ಜನ ಕಳ್ಳರಿಗೆ ಶಿಕ್ಷೆಯಾಗದಿದ್ದರೂ ಪರವಾಗಿಲ್ಲ ಆದರೆ ಒಬ್ಬ ಸಭ್ಯನಿಗೆ ಶಿಕ್ಷೆ ಆಗಕೂಡದು ಅನ್ನುವ ಕಾನೂನಿನರೀತ್ಯ ಯಾರಿಗೂ ಶಿಕ್ಷೆ ಆಗಲಿಲ್ಲ!

ಕೆಂಗಲ್ ಹನುಮಂತಯ್ಯನವರು ಒಂದು ಕಥೆ ಹೇಳುತ್ತಿದ್ದರು. ಹಳ್ಳಿಗಳ ಕಡೆ ಹಳೆಯ ಮನೆ ಬೀಳುವ ಸಂದರ್ಭ ಬಂದರೆ 'ಲೋ ಇಲ್ಲಿ ಬಿದ್ದೋಯ್ತಾ ಅದೆ. ಊರುಗೋಲು ಕೊಡೋ' ಅಂತ ದಡಬಡಾಯಿಸುತ್ತಿದ್ದರು. ಊರುಗೋಲು ಕೊಡುತ್ತಿದ್ದರು. ಬೇರೆ ಕಡೆ ಬೀಳೋಕೆ ಪ್ರಾರಂಭ ಆಗೋದು. ಅಲ್ಲಿಗೂ ಬಂದು ಊರುಗೋಲು ಕೊಡುತ್ತಿದ್ದರು. ಹೀಗೇ ಮನೆ ಬೀಳೋ ಕಡೆಗೆಲ್ಲ ಊರುಗೋಲು ಕೊಟ್ಟು ತಡೆಯೋರು. ಹೀಗಾಗಿ ಮನೆ ತುಂಬ ಊರುಗೋಲೇ ತುಂಬಹೋಗ್ತಿತ್ತು. ಹೊರಗಿನವರಿಗೆ ಮನೆ ಅಂತ ಕಾಣಿಸಿದ್ದರೂ, ಒಳಗೆ ಮನೆಯೇ ಇರುತ್ತಿರಲಿಲ್ಲ!

ಹಿಂಗೇ ನರಸಿಂಹರಾಯರೂ ಕಾಲ ತಳ್ಳಿದರು.

2008 ಅಂದರೆ ಗಾಂಧಿ ಸತ್ತು ಅರವತ್ತು ವರ್ಷಾನೆ ಆಯಿತಲ್ಲ. ಸತ್ಯ, ನ್ಯಾಯ, ಧರ್ಮ ಇಂತಹವುಗಳ ಲುಪ್ತ ಬೆಲೆ ಋಣಾಂಕ ತಲುಪಿರೋದು ಸಹಜವೇ. ಮನ-ಮೋಹನಸಿಂಗಜೀಯವರು ಫೆವಿಕಾಲ್ ಅಂಟಿಗೆ ಇಪ್ಪತ್ತೈದು ಕೋಟಿ ಅಂತ ಸರ್ಕಾರಿ ಸವಾಲು ಕೂಗ್ತಿದಾರಂತೆ. 'ಇಷ್ಟಕ್ಕೆಲ್ಲ ಆಗಕಿಲ್ಲ' ಅಂತ ಆಸೆ ಕಣ್ಣಿಂದ ಹಣದಚೀಲ ನೋಡ್ತಿರೋ ಫೆವಿಕಾಲ್‌ಗಳಿಗೆ 'ಮಂತ್ರಿ ಪದವಿ' ಆಸೇನೂ ತೂರಿಬಿಡ್ತಿದಾರಂತೆ! ಇಂತಹ ಆಮಿಷಗಳನ್ನು ಹುಲುಮಾನವರು ಅದುಮಿಟ್ಟುಕೊಳ್ಳುವುದು ಕಷ್ಟವೇಯ ಬಿಡಿ. ಇತರೇ ಕಡೆ ಇದಕ್ಕಿಂತ ಒಳ್ಳೆಯ ಆಫರ್‌ಗಳು ಇರೋದ್ರಿಂದಲೋ ಅಥವಾ ಜಾಯಮಾನದಲ್ಲೇ ಮೊಂಡು ಗುರಿಗಳಾಗಿರೋದರಿಂದಲೋ ಕೆಲವು ಫೆವಿಕಾಲ್‌ಗಳು ಇವಕ್ಕೂ ತಲೆ ಒಗ್ಗಿತಿದಾವಂತೆ. ಅಂತಹವಕ್ಕೆ ಮದ್ದು ಎಂದರೆ....

ಸಿಬಿಐ ಗುಮ್ಮ!

ಅಧಿಕಾರ ನಮ್ಮ ಕೈಲಿದೆ ಯಾವೋನು ಏನು ಮಾಡ್ತಾನೆ ಅಂತ ಕೆಲವರು ಮಾಡಬಾರದ ಹೊಲಸು ಕೆಲಸವನ್ನೆಲ್ಲ ಮಾಡಿದ್ದಾರೆ. ಕೆಲವರದ್ದು derived ಅಧಿಕಾರ. ಅರ್ಥಾತ್ ಅಧಿಕಾರಸ್ಥರ ಸಂಬಂಧದಿಂದ ಮೆರೆಯೋರು. ಗಾಡ್‌ಫಾದರ್‌ಗಳು ತಿರುಗಿಬಿದ್ದರೆ ಫಾದರ್ರೇ ಇಲ್ಲದ ಅಬ್ಬೇಪಾರಿಗಳಂತೆ ಬಾಯಿಬಾಯಿ ಬಿಡಬೇಕಾಯ್ತದೆ. ಮುಖೇಶ್ ಅಂಬಾನಿ ಪಾಡು ನಾಯಿಪಾಡಾಗಿದೆ. ಪ್ರಧಾನಿಗಳೇ ನನ್ನ ಜೇಬೊಳಗೆ ಇದಾರೆ ಅಂತ ಆ ಮಹಾಶಯರು ತಮ್ಮ ಧರ್ಮಪತ್ನಿಗೆ ಒಂದು ಏರ್‌ಬಸ್ ವಿಮಾನ ಕೊಂಡುಕೊಂಡಿದ್ದರಂತೆ. ಅದರಲ್ಲೇನೂ ಅಪರಾಧ ಇಲ್ಲ ಬಿಡಿ. ಇನ್ನು ಉಪಪತ್ನಿಯರಿಗೆ ಹೀಗೆ ಮಾಡಿದ್ದರೆ ರೋಚಕವಾದ ಸುದ್ದಿ ಬಾಯಿ ಚಪ್ಪರಿಸಲು ಸಿಗುತ್ತಿತ್ತು. ಯಡವಟ್ಟು ಎಲ್ಲಾಗಿತ್ತು ಅಂದರೆ ವಿಶ್ವದ ಕೋಟ್ಯಾಧೀಶರ ಪಟ್ಟಿಯಲ್ಲಿರುವ ಮಹಾಶಯರು ತೆರಿಗೆ ಕದಿಯೋಕೆ ಅಂತ ವಿಮಾನದ ಬೆಲೇನ ಕಂಡಾ ಬಟ್ಟೆ ಕಡಿಮೆ ತೋರಿಸಿದ್ದರಂತೆ.

ಅಣಕ

ಎಚ್.ಎಲ್. ಕೇಶವಮೂರ್ತಿ

ಅಲ್ಲ ಈ ದೇಶದಲ್ಲಿ ನಿಜವಾದ ಬೆಲೇನ, ಆದಾಯನ ತೋರಿಸಿ ಯಾರಾದರೂ ಕೋಟ್ಯಾಧೀಶರು ಆಗುವುದು ಉಂಟಾ! ಯಾವ ವ್ಯಾಪಾರಿ ಕೇಳಿದರೂ ಈ ಸತ್ಯ ತಿಳಿಸುತ್ತಾನೆ. ಅಷ್ಟಕ್ಕೇ ಈ ಮಹಾಶಯರ ಮೇಲೆ ತೆರಿಗೆ ವಂಚನೆ ಅನ್ನೋ ನೆಪದಲ್ಲಿ ಸಿಬಿಐ ತನಿಖೆ ನಡೀತದಂತೆ! ಎಲಾ ಎಲಾ ಇದೇನು ಕೋಟ್ಯಾಧೀಶನ ವಿರುದ್ಧ ಇಂತಹ ಜುಜುಬಿ ಕೇಸ್ ಜಡೀತಿದಾರೆ ಅಂದರೆ ಇದೆಲ್ಲ ಅವನ ತಮ್ಮನ ಕಾಟ ಅಂತೆ. ಅವ ಬೆಂಬಲಿಸುತ್ತಿರುವ ಸಮಾಜವಾದಿ ಪಕ್ಷ ಯಾವಾಗ ಕಾಂಗ್ರೆಸ್‌ಗೆ ಬೆಂಬಲ ನೀಡ್ತೀವಿ ಅಂತ ಮುಂದಕ್ಕೆ ಬಂತೋ ಹಳೇ ಅಂಬಾನಿಗೆ ಸಿಬಿಐನವರು ತಗುಲಿಕೊಂಡರಂತೆ. ಎಷ್ಟೇ ಆಗಲಿ ದೊಡ್ಡ ದೊಡ್ಡವರ ವಿಷಯ ಇದು. ಮುಖೇಶ್ ಅಂಬಾನಿ ಪ್ರಧಾನಿಗೆ 'ಸೌಜನ್ಯ ಭೇಟಿ' ಮಾಡಿ ಎಲ್ಲ ಸರಿಪಡಿಸಿಕೊಂಡಿದಾರೆ ಅನ್ನೋ ಗುಸುಗುಸು ಇದೆ.

"ಏನು ಕೊಟ್ಟಿದ್ವಾ?"

"ನಿನ್ನಂಥ ಒಬ್ಬ ಪರುಸನ್ನ ಎಲ್ಲಿಗಾರ ಹೋಗಿಬಂದರೆ ಸರಕಾರಿ ಬಸ್ನಲ್ಲಿ ಬೆನಿಫಿಟ್ ಕೊಟ್ಟವ್ರುನೆ."

"ಅಂಗಂತ ತಿರಗಹೋಯ್ತಿನ್ನ ನಾನು?"

"ಕಾಳಮಾವ ಓಡಾಡೊ ಜಾಗದಲ್ಲಿ ಗವುರಮೆಂಟ್ ಬಸ್ಸೇ ತಿರಗದಿಲ್ಲ ಹೋಗತ್ಲಾಗೆ. ಬರೀ ಗೇಜಾಟೋಗಳು ಓಡಾಡ್ತವೆ" ಎಂದಳು ಜುಮ್ಮಿ.

"ದ್ವದಪ್ಪ ಸರಕಾರದ ಬಜೆಟ್ನಿಂದ ನನಿಗೇನೂ ಬೆನಿಫಿಟ್ ಆಗಲಿಲ್ಲ ಅಂತ ಪೀಲು ಮಾಡಿಕೊ ...ದ. ಸರಕಾರನೇ ಬ್ಯಾರೆ, ಬಜೆಟ್ಟೆ ಬ್ಯಾರೆ. ಬಜೆಟ್ನಲಿರೊ ಮ್ಯಾಟ್ರಗೂ, ಅಧಿಕಾರಿಗಳಿಗೂ, ...ವಕಾರಣೆಗಳಿಗೂ ತುಂಬಾ ಕನಕ್ಷನ್ ಇರತದೆ. ಪರಿಗ್‌ಜಾಂಪಲ್ ಯಸ್ಸೆಂ ಕ್ರಿಷ್ಣನ ಟೈಮಲ್ಲಿ ಕ್ಯರೆ ...ಳು ತಗಿತಿವಿ ಅಂತ ಬಂದ್ರು. ಯಾವ ಕ್ಯರೆ ಹೂಳು ತಗುದ್ರು ದ್ವದಪ್ಪ? ಈಗ್ಲು ಅಂಗೆ ದ್ವದಪ್ಪ ...ಡೂರಪ್ಪನ ಸುತ್ತ ಇರೋ ಮಂತ್ರಿಗಳ ನೋಡಿದ್ರೆ ಎಡೂರಪ್ಪನೇ ಬ್ಯಾರೆ, ಅವ್ರುನ ಮಂತ್ರಿಗಳೇ ...ರೆ, ಸರಕಾರನೆ ಬ್ಯಾರೆ ಅನ್ನಂಗೆ ಕಾಣ್ತಾ ಆದೆ. ಅಲವೇನೊ ಉಗ್ರಿ?"

"ಅದೇನೇ ಆದ್ರು ಎಡೂರಪ್ಪ ಕ್ಯಲಸಗಾರ ಕಣೊ."

"ನಿಜ, ಈ ವಯಿಸಿನಲ್ಲೂ ಅವ್ರುನು ಕ್ಯಲಸಗಾರನಂಗೆ ಕಾಣ್ತನೆ ನೋಡವ್ರುಟ್! ನಾನು ಹೇಳಕ್ಕೆ ...ದ ಸುದ್ದಿನೆ ಮರತೆ. ಎಂ.ಪಿ.ಶಂಕರ್ ತೀರೋದನಂತೆ ದ್ವಡಪ್ಪ."

"ಪಾಪ ತೀರೋದ್ನೆ? ಯಂತಾ ಆಳು ಅಂತಿ. ಯದೆ ಚಿಕ್ಕೆ ಈಟಗಲ ಇರದು" ಎಂದು ...ಳಮಾವ ಎಂ.ಪಿ.ಶಂಕರ್ ಆಕಾರ ಹೊಗಳಿದ.

"ನೀನ್ಯಾವಾಗ ನೋಡಿದ್ದೆ ಮಾವ?"

"ಹರೀಚಂದ್ರ ಸಿನುಮದಲ್ಲಿ ನೋಡಿದ್ದೆ ಕಂಡ್ಯೆ. ಅಮ್ಯಾಲೆ ಬಂಗಾರದ ಮನ್ಸ ಸಿನುಮದಲ್ಲೂ ...ಡಿದ್ದ. ಅದರಲ್ಲೂ ಹರಿಚಂದ್ರ ಸಿನುಮದಲ್ಲಿ ಏನು ಪದ ಆಡಿದ್ದ ಅಂತೀ? ಪಾಪ ಹೋಗೇ ಬುಟ್ನೆ ...ಗರೆ?" ಎಂದು ಕಾಳಮಾವ ಲೊಚಗುಟ್ಟಿದ.

"ಯಲ್ಲ ಒಂದಿನ ಹೋಗದೆಯ, ನಾವೇನು ಇಲ್ಲಿದ್ದವೆ?" ಎಂದ ಸೀರ.

"ನಾವು ಸತ್ತ ಮ್ಯಾಲೆ ನೋಡಬೇಕು ಅಂದ್ರೆ ಸಿಗದಿಲ್ಲ, ಅವುರಾದ್ರೆ ನೋಡಬಹುದು" ಎಂದಳು ...ಮ್ಮಿ.

"ಅದ್ಯಂಗ್ನೆ?"

"ಸಿನುಮದಲ್ಲಿ ಇರತರೆ. ನೋಡಬೇಕು ಅಂದಾಗ ನೋಡಬಹುದು."

"ನೀನಂಗಂತಿ ಕಂಡ್ಯೆ, ಯಾರು ನೋಡಕ್ಕೋಗದಿಲ್ಲ.ಇದ್ದಾಗೇನಿತ್ತೊ ಅದೆಯ" ಎಂದ ಕಾಳಮಾವ

"ಎಜ್ಯಾಟ್ಲಿ ಕರಟ್ ದ್ವಡಪ್ಪ" ಎಂದ ಪಾಟಿಸ್ಲೆ. ■

'ಸ್ವಯಂಘೋಷಿತ ಆದಾಯ' ಅನ್ನೋದು ಈ ಸರ್ಕಾರ ತನಗಾಗದವರನ್ನ ಇಕ್ಕಟ್ಟಿಗೆ ಸಿಲುಕಿಸೋಕೆ ...ಸ್ತುವ ಅನುಮಾನ ಕಾಡುತ್ತಿರಬೇಕು-ದಲಿತ್ ಕ ಬೇಟೆಗೆ! ಯಾಕೆ ಅಂತೀರಾ? ಸರ್ಕಾರದ ...ತನ್ನು ನಂಬಿ ಮಾಯಾವತಿಯವರು ವಿವಿಧ ಬ್ಯಾಂಕುಗಳಲ್ಲಿ 13.18 ಕೋಟಿ ರೂಪಾಯಿ ...ಕೆ ಅಂತ ಸಾರಿಕೊಂಡರು. ಪಾಪ ಅದನ್ನೆಲ್ಲ ಅವರ ಅಭಿಮಾನಿಗಳು ಬಳುವಳಿಯಾಗಿ ...ದಿದ್ದಂತೆ! ಯಾವಾಗ ಬಹುಜನ ಸಮಾಜ ಪಕ್ಷ ಮನಮೋಹನ್ ಸಿಂಗ್ ಸರ್ಕಾರಕ್ಕೆ ವಿರುದ್ಧವಾಗಿ ...ತ ನೀಡಲು ನಿರ್ಧರಿಸಿತೋ ಸಿಬಿಐನವರು 'ಬಳುವಳಿ ನೀಡಿದವರು ಯಾರು' ಅಂತ ...ಮ್ಮುತ್ತಾ ಇದೆಯಂತೆ. ಭಾವೀ ಪ್ರಧಾನಿ ಇದಕ್ಕೆಲ್ಲ ಜಗ್ಗುವವರಲ್ಲ, ಹಣ ನೀಡಿದವರ ...ಟ್ಟಿಯನ್ನು ಕೊಟ್ಟರಂತೆ-ಇಷ್ಟಕ್ಕೇ ಆ ಹಾಳಾದವರು ಒಪ್ಪಿಕೊಳ್ಳಬಾರದಾ. ಪ್ರಧಾನಿ ಜೊತೆ ...ಷೋಡಿಸಿದ್ದರೆ ಒಪ್ಪಿಕೊಳ್ಳುತ್ತಿದ್ದರೋ ಏನೋ. ಆದರೆ ಅದಕ್ಕೆ ಅವರು ಸಮ್ಮತಿಸಲಿಲ್ಲವಾಗಿ ...ಂ ನೀಡಿದವರ ಬೇಟೆಗೆ ನಿಂತರಂತೆ. ಅವರಲ್ಲಿ ಮೂರು ಮಹಿಳೆಯರು 28 ಲಕ್ಷ ರೂಪಾಯಿ ...ಟ್ಟಿದ್ದರಂತೆ. ಎಲ್ಲಿಂದ ಬಂತು ಈ ಹಣ ಅಂತ ಅವರನ್ನು ಪ್ರಶ್ನಿಸಲಾಗಿ 'ನಮ್ಮ ತಂದೆಯವರಿಂದ' ...ನ್ನೋ ಉತ್ತರ ಬಂತಂತೆ. ಇಷ್ಟಕ್ಕೂ ಸುಮ್ಮನಾಗದ ಆ ಪಾಪಿಗಳು ಅವರು ಹೆಸರಿಸಿದ ...ದೆಯವರನ್ನೇ ಹಿಡಿದುಕೊಂಡು ನೋಡಿದರೆ... ಅವರೆಲ್ಲ ಭಿಕಾರಿಗಳಂತೆ! ಬೀದಿಯ ಭಿಕಾರಿಗಳೂ ...ಮ್ಮ ಹೆಣ್ಣುಮಕ್ಕಳಿಗೆ ಇಷ್ಟೊಂದು ಅಗಾಧ ಗಾತ್ರದ ಹಣ ನೀಡಿದರು ಎಂಬುದನ್ನು ಕಂಡು ...ರ್ಣಸಬೇಕಾದ ಸಿಬಿಐ ಕೇಸನ್ನು ಬಲಪಡಿಸಲು ಇದನ್ನು ಬಳಸುತ್ತಿರುವುದು ದುರಂತವೇ ಸರಿ! ...ದನ್ನು ಪ್ರತಿಭಟಿಸಿರುವ ಬೆಹನ್‌ಜೀ 'ನನ್ನ ಚಾರಿತ್ರ್ಯಹರಣಕ್ಕಾಗಿ ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ' ...ದು ಸರಿಯಾಗಿಯೇ ಪ್ರತಿಕ್ರಿಯಿಸಿದ್ದಾರೆ.

ಸ್ಮಾಲ್ ಈಸ್ ಬ್ಯೂಟಿಫುಲ್!

...ಅತಂತ್ರ ಸಂಸತ್ ಇದ್ದಾಗಲೆಲ್ಲ ಪ್ರಮುಖ ಪಕ್ಷಗಳ ಸಂಸದರಿಗೆ ಏನೇನೂ ಪ್ರಯೋಜನವಿಲ್ಲ. ... ತತ್ವ ಸಿದ್ಧಾಂತ ಅದರದಲ್ಲ ಕಾಟ. ಹಾಳು ಪಕ್ಷಾಂತರ ನಿಷೇಧ ಕಾಯ್ದೆ ಅನ್ನೋದು ...ಬರುತ್ತೆ, ಅದರಿಂದ ತಪ್ಪಿಸಿಕೊಳ್ಳಬೇಕಾದರೆ ಸುಮಾರು ಸಂಸದರು ಒಂದುಗೂಡಬೇಕಾಗುತ್ತದೆ. ...ು ಆಗದಹೋಗದ ಮಾತು. ಅದರಲ್ಲೂ ಕೆಲವರು ಚಾಣಾಕ್ಷರಿರುತ್ತಾರೆ. ಬಹುಮತ ...ಸಾಬೀತುಪಡಿಸುವ ದಿನ ಇವರಿಗೆ ಅದೆಂತಹದ್ದೋ ರೋಗ ಬಡಿದು ಮೇಲೇಳಲೂ ...ಸಾಧ್ಯವಾಗದಂತಹ ಸ್ಥಿತಿ ತಲುಪಿರುತ್ತೆ! ಪ್ರಮುಖ ಪಕ್ಷದ ಹಲವಾರು ಸದಸ್ಯರಿಗೆ ಏಕ್‌ದಂ ...ರೋಗಬಡಿದರೆ ಎಂತಹವರಿಗಾದರೂ ಅನುಮಾನ. ಬರುವುದು ಖಚಿತ. ಇಂತಹದ್ದಕ್ಕೆಲ್ಲ ಜಗ್ಗದ ...ಸಂಸದರು ಈ ಪ್ರಯೋಗಕ್ಕೆ ಸಿದ್ಧರಿದ್ದರೆ ಬ್ಯಾಂಕ್ ಖಾತೆಯ ಬಗ್ಗೆ ಚಿಂತಿಸಬೇಕಿಲ್ಲ!

...ಸಣ್ಣಪುಟ್ಟ ಪಕ್ಷಗಳ ಸಂಸದರಿಗೆ ಈ ಯೋಚನೆ ಇಲ್ಲ, ಜಾತ್ಯತೀತ ಜನತಾದಳ ನೋಡಿ. ...ಇರುವವರೇ ಮೂರು ಸಂಸದರು. ಯಾರು ಯಾರಿಗೆ ಬೇಕಾದರೂ ಬೆಂಬಲಿಸಬಹುದು. ...ಷ್ಟ್ಯೂ ಅವರ ಕೂದಲನ್ನು ಕೊಂಕಿಸಲಾರದು! ■

ಮರೆಯುವ ಮುನ್ನ



■ ಪಿ. ಲಂಕೇಶ್ ಅಕ್ಟೋಬರ್ 14,1990

ವಾರಾನ್ನ

ಈ ಶಿಕ್ಷಣವನ್ನು ಕುರಿತು ಮಾತಾಡುವಾಗ ನನಗೆ ಅದೇಕೋ ಒಮ್ಮೆ ಸಂಪ್ರದಾಯವೇ ಆಗಿದ್ದ ವಾರಾನ್ನದ ಪದ್ಧತಿ ನೆನಪಾಗುತ್ತಿದೆ. ಕತೆಗಾರ ಆನಂದ ಅವರು ಬರೆದ 'ಭವತಿ ಭಿಕ್ಷಾಂದೇಹಿ' ಎಂಬ ಕತೆ ವಾರಾನ್ನದ ಹುಡುಗನೊಬ್ಬನನ್ನು ಕುರಿತದ್ದು.

ವಾರಾನ್ನದ ಬಗ್ಗೆ ನೀವು ಕೇಳಿರಬಹುದು. ಕೊಂಚ ಅನುಕೂಲಸ್ಥರಾದ ಮನೆಯವರು ಐದೋ, ಆರೋ ಜನ ಹುಡುಗರಿಗೆ ನಿತ್ಯ ಊಟಕ್ಕಿಡುತ್ತಿದ್ದರು. ಒಬ್ಬ ಹುಡುಗನಿಗೆ ವಾರಕ್ಕೊಮ್ಮೆ ಈ ಮನೆಯಲ್ಲಿ ಊಟ; ಇನ್ನು ಆರು ದಿನ ಆರು ಬೇರೆಬೇರೆ ಮನೆಗಳಲ್ಲಿ ಊಟ. ಬಡಹುಡುಗರು ಹೀಗೆ ಉಂಡು ತಮ್ಮ ರೂಮಲ್ಲಿ ವಾಸಿಸುತ್ತ ಕಾಲೇಜಿಗೆ ಹೋಗುತ್ತಿದ್ದರು. ಹಾಸ್ಟೆಲ್‌ಗಳು ಹೆಚ್ಚಿದ್ದರಿಂದಲೋ, ವಾಣಿಜ್ಯ ಬುದ್ಧಿ ಜಾಸ್ತಿಯಾಗಿದ್ದರಿಂದಲೋ ಈ ಪದ್ಧತಿ ಈಗ ಇರುವಂತಿಲ್ಲ.




ಇದನ್ನು 'ಸಂಪ್ರದಾಯ' ಎಂದು ಕರೆದಿದ್ದೇನೆ. ಯಾವುದೇ ಒಂದು ಪದ್ಧತಿ ಸಂಪ್ರದಾಯದ ಮಟ್ಟಕ್ಕೇರಿದರೆ ಊಟ ಹಾಕುವವರು, ಊಟ ಮಾಡುವವರು ಒಂದು ಕ್ರಮಬದ್ಧ ವರ್ತನೆಗೆ ಒಳಗಾಗುತ್ತಾರೆ. ಬಡ ಹುಡುಗನ ಮನ ನೋಯಿಸಬಾರದು, ಆತ ಸಂಕೋಚಪಡುವಂತಾಗಬಾರದು, ಇಲ್ಲಿ ಉಂಡದ್ದು ಅವನಿಗೆ ಒಳ್ಳೆಯ ನೆನಪಾಗಬೇಕು...ಹಾಗೆಯೇ ಅನ್ನ ನೀಡುವವರ ಮನಸ್ಸು ಕಿರಿಕಿರಿ ಅನುಭವಿಸಬಾರದು, ಯಾವುದೇ ಕೆಟ್ಟ ನಡವಳಿಕೆ, ಪ್ರೀತಿಯ ದುರ್ಬಳಕೆ-ಯಾವುದೂ ಸಂಭವಿಸದಂತೆ ಹುಡುಗ ನಡೆದುಕೊಳ್ಳಬೇಕು. ಹೀಗೆಲ್ಲ ಇರುತ್ತಿತ್ತು.

ಪ್ರೀತಿ, ವಿಶ್ವಾಸವನ್ನೇ ಕಾಣದ ಜನಕ್ಕೆ ಈ ವಾರಾನ್ನ ನೆರವಾಗಬಲ್ಲದು. ಒಂದು ಪದ್ಧತಿ ಕಣ್ಮರೆಯಾದಾಗಲೂ ಒಂದು ಹೃದಯಸ್ಪಂದನವನ್ನು ಕಳೆದುಕೊಳ್ಳುತ್ತೇವೆ.

ಈ ಪದ್ಧತಿಯ ಒಂದು ದೋಷವೆಂದರೆ, ತಮ್ಮ ಜಾತಿಯ ಹುಡುಗರಿಗೆ ಮಾತ್ರ ಊಟ ನೀಡುತ್ತಿದ್ದುದು. ಅದನ್ನು ನಿವಾರಿಸಿಕೊಂಡು ಬಡ ಹುಡುಗರಿಗೆ ನೆರವಾದರೆ ಎಷ್ಟು ಚೆನ್ನಾ!

ಎಲ್.ಎಸ್.ಡಿ. ಅನುಭವ



ಹಳೇ ಪುಸ್ತಕಗಳಿಗೆ ಬೆನ್ನಿನ ಮೇಲೆ ಹೆಸರಿರುವುದಿಲ್ಲ... ಅವನ್ನು ಕಪಾಟಿನಿಂದ ತೆಗೆದೇ ನೋಡಬೇಕು. ಹೀಗೆ ಸುಮ್ಮನೆ ತೆಗೆಯುತ್ತ ಹೋದಾಗ ಪತ್ರಪುಸ್ತಕವೊಂದು ಸಿಕ್ಕಿತು. ಬಿ.ಜಿ.ಎಲ್. ಸ್ವಾಮಿಯವರ ಲೇಖನವೊಂದು ಕಂಡಿತು. ಇದನ್ನು ನಾನು ನೋಡಿರಲಿಲ್ಲ. ಲೇಖನದ ಹೆಸರು "ಚಟವನ್ನು ಕುರಿತು." ಬಿ.ಜಿ.ಎಲ್. ಸ್ವಾಮಿ ತಮ್ಮ ಹಾಸ್ಯಮಯ, ಗಂಭೀರ ಪ್ರಬಂಧಗಳ ಸಂಕಲನವಾದ 'ಪಂಚಕಳಶ ಗೋಪುರ'ವನು ಬಿಟ್ಟರೆ ಪೂರ್ತಿ ಸುಲಲಿತವಾಗಿ ಮತ್ತೆಲ್ಲೂ ಬರೆದಂತಿಲ್ಲ, "ಚಟವನ್ನು ಕುರಿತು" ಒಂದು ದೊಡ್ಡ ತಮಾಷೆಯ, ದ್ವಂದ್ವಮಯ ಪ್ರಬಂಧವಾಗಿತ್ತು; ಆದರೆ ಅನೇಕ ವಿಷಯ ತಿಳಿಸಲು ಯತ್ನಿಸಿ ಸ್ವಲ್ಪ ಮಂದವಾಗಿದೆ.

ಅನೇಕ ಚಟಗಳನ್ನು ವರ್ಣಿಸುತ್ತ ಸ್ವಾಮಿ ತಾವು ಮತ್ತು ತಮ್ಮ ಗೆಳೆಯರು ಅತ್ಯಂತ ಶಕ್ತಿಯುತ ಮದ್ದಾದ ಎಲ್.ಎಸ್.ಡಿ ಯನ್ನು ತೆಗೆದುಕೊಂಡ ಅನುಭವ ವರ್ಣಿಸುತ್ತಾರೆ. ಎಲ್.ಎಸ್.ಡಿ, ಕೊಕೇನ್, ಗಾಂಜಾ, ಮರಿಯಾನಾ... ವಿವಿಧ ರೀತಿಯಲ್ಲಿ ಮನುಷ್ಯನಿಗೆ ಅಮಲು, ಸಂತೋಷ ನೀಡುವ ಮದ್ದುಗಳು. ಸ್ವಾಮಿ ವಿವರಿಸುವ ಅನುಭವಗಳ ಪ್ಯಾರಾಗಳನ್ನು ಕೊಡುತ್ತೇನೆ:

ಈ ಡ್ರಗ್ಗಿನಲ್ಲಿ ಏನಿದೆಯೋ ನೋಡಿಯೇ ಬಿಡೋಣ ಎಂದು ನಾಲ್ಕೈದು ಗೆಳೆಯರು ತೀರ್ಮಾನಿಸಿಕೊಂಡೆವು. ಆದರೆ ಒಬ್ಬೊಬ್ಬನಿಗೂ ಏನಾಗಿಬಿಡುವುದೋ ಎಂಬ ಪುಕ್ಕಲು. ನಮ್ಮ ನಮ್ಮ ಹೆಂಡತಿಯರಿಗೆ ಈ ಸನ್ನಾಹ ತಿಳಿದರೆ ಅವರೇನು ಆತಂಕಗಳನ್ನು ತಂದೊಡ್ಡುತ್ತಾರೆಯೋ ಎಂಬ ಭಯ. ಒಂದು ವೇಳೆ ನಮಗೇನಾದರೂ ಆಗಬಾರದಂಥದ್ದು ಆಗಿ, ವಾರ್ತಾಪತ್ರಿಕೆಗಳಲ್ಲಿ ನಮ್ಮ ಹೆಸರು ಪ್ರಕಟವಾಗಿ, ಜನರ ಬಾಯಿಗೂ ಪೊಲೀಸಿನವರ ಕೈಗೂ ಸಿಕ್ಕಿಬಿದ್ದು ಬಿಡುವುವೇನೋ ಎಂಬ ಕಳವಳ. ಅಂತೂ ಮನಸ್ಸು ಮಾಡಿದೆವು. ಯಾವ ಯಾವುದೋ ಗಿಣಿಮಾತಿನ ಕಾರಣ ಹೇಳಿ ಹೆಂಡತಿಯರನ್ನು ತವರಿಗೆ ಕಳುಹಿಸಿದೆವು. ನಮ್ಮ ಬಳಿಯೇ ಇರುವಂತೆ ವೈದ್ಯನೊಬ್ಬನನ್ನು ಕೇಳಿಕೊಂಡೆವು.

ಸೇವನೆ ಆಯಿತು. ಹತ್ತು ನಿಮಿಷ ಕಳೆಯಿತು. ಒಂದು ಬಗೆಯ ಮೃದುವಾದ ಮಂಪರ ಬಂದಂತಾಯಿತು. ಆದರೆ ಸುತ್ತಮುತ್ತಲಿನ ಅರಿವು ಹೋಗಲಿಲ್ಲ, ತೂಕಡಿಕೆ ಬರಲಿಲ್ಲ, ಸಾಮಾನ್ಯವಾದ ರೀತಿಯಲ್ಲೇ ಸಂಭಾಷಣೆ ನಡೆಯುತ್ತಿತ್ತು. ಪುಸ್ತಕಗಳನ್ನಿಟ್ಟಿದ್ದ ಬೀರುವಿನ ಕಡೆ ನೋಡಿದೆ. ಬೈಂಡಿಗೆ ಉಪಯೋಗವಾಗಿದ್ದ ಕೆಂಪು ಬಣ್ಣದ ಚರ್ಮವೂ, ಸ್ವರ್ಣಾಕ್ಷರಗಳೂ ಪೆಂಪು ಪಡೆದವು. ಮರದ ಬೀರು ಚಿನ್ನದ್ದಾಯಿತು. ಬಿಳಿಯ ಸುಣ್ಣದ ಗೋಡೆ ಬೆಳ್ಳಿಯದಾಯಿತು. ಪುಸ್ತಕದ ಸಾಲು ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಚಲಿಸತೊಡಗಿತು. ಚಿನ್ನ, ಬೆಳ್ಳಿ, ಕೆಂಪು, ವಜ್ರ, ವೈಢೂರ್ಯಗಳು ಸಾಲುಸಾಲಾಗಿ ಪದರಪದರವಾಗಿ ಕುಲುಕುತ್ತಾ ಬಳುಕುತ್ತಾ ಸುರುಳಿ ಸುರುಳಿಯಾಗಿ ಸುತ್ತುತ್ತ ಲಾಸ್ಯವಾಡಿದವು.

ನನ್ನ ಎದುರಿಗೆ ಕುಳಿತಿದ್ದ ಶೀನ ಕಿಟಾರೆಂದು ಕಿರುಚಿದ. ವೈದ್ಯ ಅವನ ಬಳಿ ಬಂದು ಏನನ್ನೋ ಮೂಗಿನ ಬಳಿ ಹಿಡಿದುಕೊಂಡು ನಿಂತ. ಶೀನನ ಕಣ್ಣುಗಳು ಬಿರಿದಿದ್ದವು, ಏದುತ್ತಿದ್ದ ಭಯಂಕರವಾದ ಕನಸಂತೆ. ಆತ್ಮ ದೇಹದಿಂದ ಹೊರಕ್ಕೆ ಬಂದು ಅವನ ಮೂತಿ ತಿವಿದು "ಥೂ ದರಿದ್ರ ಮುಂಡೇದೇ! ನಾಶವಾಗುತ್ತಿದ್ದೀಯಲ್ಲೋ" ಎಂದು ಎಚ್ಚರಿಸಿತಂತೆ!

ಈ ಶೀನನ ಆಭಾಸದಿಂದ ಎಲ್ಲರಿಗೂ 'ಎಚ್ಚರಿಕೆ' ಯಾಗಿಬಿಟ್ಟಿತು. ಬಿಸಿಬಿಸಿ ಕಾಫಿ ಕುಡಿಯುತ್ತಿದ್ದಾಗ ಸಿದ್ದಯ್ಯ ಹೇಳಿದ: "ನನಗೆ ಆದದ್ದು ಕನಸಲ್ಲ' ಕಣ್ರೋ! ಎಚ್ಚರವಾಗಿಯೇ ಇದ್ದೆ. ಆದರೆ ನೀವು ಒಬ್ಬೊಬ್ಬರು ಕಿರೀಟವಿಟ್ಟುಕೊಂಡು ದೇವತೆಗಳಂತೆ ಕಾಣುತ್ತಿದ್ದಿರಿ. ನಿಮ್ಮ ಮುಖಭಾವವೂ ಹಾಗೆಯೇ ಇತ್ತು, ಆದರೆ ಆ ಭಾವದ ಹಿಂದೆ ಒಂದೊಂದು ದೆವ್ವ ಇಣುಕಿ ನೋಡುತ್ತಿತ್ತು!"

ರಂಗನಾಥ: "ಅದೇನೋಪ್ಪಾ ಅರ್ಥವಿಲ್ಲದ ಅನುಭವ! ಈ ಕಿಟಕಿ ಸಂದಿನಲ್ಲಿ ಬೆಳದಿಂಗಳು ಕಾಣುತ್ತೆ ನೋಡು. ಅದನ್ನೇ ನೋಡುತ್ತಿದ್ದೆ. ಹಾಗೆಯೇ ಹೊರಗೆ ಆಕಾಶವನ್ನು ನೋಡಿದೆ. ಚಂದ್ರಬಿಂಬವೆ ಒಡೆದುಹೋಗಿತ್ತು, ಚೂರುಗಳಿಗಾಗಿ ಪರದಾಟ. ಎಲ್ಲೆಲ್ಲಿಂದಲೋ ಚಿನ್ನದ ಬಣ್ಣದ ತೋಳಗಳು ಹಸಿರು ಬಣ್ಣದ ಗುಳ್ಳೆನರಿಗಳೂ ಬಂದು ಮುತ್ತಿಕೊಂಡವು. ಚಂದ್ರನ ಚೂರುಗಳಿಗಾಗಿ ಕಚ್ಚಾಡುತ್ತಿದ್ದವು. ಈ ಶೀನನಿಂದ ಎಚ್ಚರವಾಗಿಬಿಟ್ಟಿತು" ಎಂದ.

ಸುಬ್ಬನಿಗಾದ ಅನುಭವ ಇನ್ನೊಂದು ರೀತಿಯದು. ಸಪ್ತಸ್ವರಗಳು ಚೌಕ, ತ್ರಿಕೋನ, ಬಹುಕೋನ, ವರ್ತುಲ ಮೊದಲಾದ ಆಕಾರಗಳಲ್ಲಿ ಘನೀಭೂತವಾಗಿ ಬಂದಂತೆ. ತಕತ್ಯೆ, ತಕತ್ಯೆ ಮಾಡಿದವಂತೆ! ರೈಲಾಟ ಆಡಿದವಂತೆ! ಒಂದರ ಮೇಲೊಂದು ಹತ್ತಿ ಕುಪ್ಪಿ ಕುಣಿದು ಸರ್ಕಸ್ ಮಾಡಿದವಂತೆ!

ಇವುಗಳಿಗೆ ಅರ್ಥ ಕಲ್ಪಿಸಲು ಹೋದರೆ ಅನರ್ಥವಾಗುತ್ತದೆ. ■

...ಲೆಅಲೆಯ ದ್ರಾಕ್ಷಾಮೃತ...

...ಭಯದ ಜೊಟ್ಟಿರುವ ದುರ್ಗಮ ಕಣಿವೆಯಲಿ
...ಕುಣಿವ ಚಿಗುರು, ನಗುವ ಹೂವು, ಸಿಟ್ಟಾದ ಮೊಗ್ಗು
...ಟ್ಟ ಗರಿಕೆಯ ಮೇಲೆ ಇಬ್ಬನಿಗಳ ಮಿಂಚುಗಣ್ಣು ||

ಒಡಲಾಗ್ನಿಯಿಂದ ಮೊದಲ ದನಿ ಹೊರಟಂತೆ
ಸಾವಿರದ ಮೃದು ಪಾದಗಳ ಮಧುರ ನಕಾಶೆ
ಮರುಳು ಕಾಮನಬಿಲ್ಲು ಕಿನ್ನರಿಯ ಕೆಳಗೆ
ಬಿಸಿಲು ಬೆವರ ಜೊತೆ ನೆಲಕಿಳಿವ ಅರಮನೆ ಗಂಡ||

ಕೇರಿಕೇರಿಯ ಕೊರಳ ತುಂಬಾ ದೈವದಾಟಕೆಸೋತ
ಕುರಿ, ಕೋಳಿ, ಹಸುಗಳ ತರಾವರಿ ತೋರಣ!
ಸಾವ ಕೆಡುವ ಗಂಡರ ಒಲೆಯೊಳಗಟ್ಟ ಅಕ್ಕನ ಜೊತೆ
ಕಿರಗೂರ ಗಯ್ಯಾಳಿ ಹಾಡು ಕಂಪ್ಯೂಟರ್ ಪಾಲಾದವು||



ಮುಗಿಲೆಲ್ಲಾ ಹರಿಹರಿದು ನೆಲಕೆಲ್ಲಾ ಮಳೆಯಾಗಿ
ಯಲ್ಲಮ್ಮ, ಮರುಗಮ್ಮರ ಪವಾಡ ನಿಂತಂತೆಲ್ಲಾS
ಗಾಳಿ ಸೆರಗಿಡಿದ ಮನೆಮನೆಯ ಹುಡುಗಿಯರು
ಸಾಲು ಸಾಲ ಸವಾಲಿಗೆ ಎದುರಾಗೇ ಕೂಗಿದರು
'ಸಾವು ಮಾತ್ರ ಸಾಯಲಾರೆವು!
ಬದುಕು ಇರುವನಕ ಬದುಕೇ ತೀರುತ್ತೇವೆ
ಸಾಯಬೇಕೆಂದವರ ಸಾಯಿಸೇ ತೀರುತ್ತೇವೆ!

■ ಶಿವಕುಮಾರ್ ಕರಿಷ್ಮಿ

ಪತ್ರಕರ್ತರ ನಿಧಿಯೆಂಬ ನೈತಿಕ ಹೊಣೆ



ಮೊನ್ನಿನ ಬಜೆಟ್‌ನಲ್ಲಿ ಪತ್ರಕರ್ತರ ಕ್ಷೇಮಕ್ಕೆಂದು ಒಂದು ಕೋಟಿ ಹಾಗೂ ನಿವೃತ್ತ ಪತ್ರಕರ್ತರಿಗೆ ರೂ. 50 ಲಕ್ಷವನ್ನು ಯಡಿಯೂರಪ್ಪ ಘೋಷಿಸಿದ್ದಾರೆ. ಜೊತೆಗೆ ಮಾನ್ಯತೆ ಪಡೆದ ಪತ್ರಕರ್ತರಿಗೆ ಉಚಿತ ಬಸ್‌ಪಾಸ್‌ನ ಮೊತ್ತ ಹೆಚ್ಚಿಸಲಾಗಿದೆ. ಇಷ್ಟಲ್ಲದೆ ಸೈಟು ಕಾರುಗಳ ಅವಕಾಶ-ಆಮಿಷ ಹೇಗೂ ಮೊದಲಿನಿಂದಲೂ ಇದ್ದೇ ಇದೆ.

ಇಲ್ಲಿ ಪತ್ರಕರ್ತರಾದ ನಾವುಗಳು ಯೋಚಿಸಬೇಕಾದ ಕೆಲ ಸಂಗತಿಗಳಿವೆ. ನಮ್ಮ ಡೆಮಾಕ್ರಸಿಯಲ್ಲಿ ಶಾಸಕಾಂಗ ಕಾರ್ಯಾಂಗ ಹಾಗೂ ನ್ಯಾಯಾಂಗಗಳೆಂಬ ಅಧಿಕೃತ ವ್ಯವಸ್ಥೆಗಳಿವೆ. ಇದರೊಂದಿಗೆ ಪತ್ರಿಕಾ ಅಥವಾ ಮಾಧ್ಯಮವೆಂಬ ನಾಲ್ಕನೇ ಆಧಾರ ಸ್ತಂಭವೂ ಇನ್ನೊಂದಿದೆ. ಮೊದಲ ಮೂರು ಸಂಸ್ಥೆಗಳಲ್ಲಿ ಲೋಪದೋಷ ಕಂಡು ಬಂದರೆ ಅದನ್ನು ಪತ್ತೆ ಹಚ್ಚಿ ತಿದ್ದಿ ಜನರ ಹಿತಾಸಕ್ತಿ ರಕ್ಷಿಸುವುದು. ಆ ಮೂಲಕ ನಮ್ಮ ಪ್ರಜಾಪ್ರಭುತ್ವದ ಗುಣಮಟ್ಟ ಹೆಚ್ಚಿಸಿ ಕಾಪಾಡುವುದು ನಮ್ಮ ವೃತ್ತಿಯ ನಿಯಮ. ಅಂದರೆ ಈ ವೃತ್ತಿನಿರತರು ಸರ್ಕಾರದೊಂದಿಗೆ ಸದಾ ಒಂದು ನಿಷ್ಠೂರ ಅಂತರದಲ್ಲೇ ಇರುತ್ತಾ ತಮ್ಮ ಕೆಲಸ ಮಾಡಬೇಕು. ಆದರೆ ಕಳೆದ ಎಲೆಕ್ಷನ್‌ನಲ್ಲಿ ಏನಾಯಿತು ನೆನಪಿದೆಯಾ?

ಬಿಜೆಪಿಯ ಒಳವರ್ತುಲದ ಜನರೇ ಅಲ್ಲಲ್ಲಿ ಹೇಳಿಕೊಂಡಿರುವಂತೆ ಕೇವಲ ಪತ್ರಕರ್ತರನ್ನು (ಪತ್ರಿಕೆಗಳನ್ನು) ಬುಟ್ಟಿಗೆ ಹಾಕಿಕೊಳ್ಳಲೆಂದೇ ಹತ್ತಿರತ್ತಿರ 30 ಕೋಟಿ ರೂ. ಖರ್ಚು ಮಾಡಿದರಂತೆ!

ಇದು ಪತ್ರಿಕೆ, ಟಿವಿ ಜಾಹೀರಾತು ಖರ್ಚಿನ ಆಚೆಗಿನ ಖರ್ಚು...!

ಯಾರಿಗೂ ಗೊತ್ತಾಗಲಿಲ್ಲ ಬಿಡು ಅಂದುಕೊಂಡು ಬಿಜೆಪಿ ವಟುಗಳಿಂದ ಬೆಳ್ಳಿ ಚೆಂಬು, ಚಿನ್ನದ ಉಂಗುರ, ಸಾವಿರ ಲಕ್ಷದ ಲೆಕ್ಕದಲ್ಲಿ ಹಣ ವಸೂಲಿ ಮಾಡಿಕೊಂಡ ಕೆಲ ಪತ್ರಕರ್ತರ ಸಾಧನೆ ಇದು.

ಈ ಲದ್ದಿ ತಿಂದ ಮೇಲೆ ಅವರಿಗೆ ನ್ಯಾಯಾನ್ಯಾಯ, ಸತ್ಯ-ಸುಳ್ಳು, ಜನರ ಬೇಕು-ಬೇಡಗಳೇ ಮರೆತುಹೋಗುತ್ತವೆ. ಒಂದು ಬಜೆಟ್ ವಿಚಾರವಿರಲಿ, ಉಗ್ರಗಾಮಿ ಕೃತ್ಯವಾಗಲಿ, ಪೊಲೀಸ್ ದೌರ್ಜನ್ಯ, ಪಕ್ಷಾಂತರ ಇಂತಹವೆಲ್ಲಾ ಸರ್ಕಾರಿ ಪರಿಭಾಷೆಯ ವರದಿಗಳಿಗಷ್ಟೇ ಪ್ರಕಟಗೊಳ್ಳುತ್ತವೆ. ಪೊಲೀಸರ ನಂಬಿಕೆಗಳೇ ಪತ್ರಕರ್ತರ ತನಿಖಾ ವರದಿಗಳೂ ಆಗಿಬಿಡುತ್ತವೆ.

ಇಲ್ಲಿ ನಮಗಿರಬೇಕಾದ ಗ್ರಹಿಕೆ ಇಷ್ಟೆ.

ಈಗಿನ ಸರ್ಕಾರ ಪತ್ರಕರ್ತರ ಹಿತರಕ್ಷಣೆ ಬಗ್ಗೆ ಯೋಚಿಸಿ ಬಜೆಟ್‌ನಲ್ಲಿ ಒಂದಷ್ಟು ಹಣ ನಿಗದಿ ಮಾಡಿದೆ. ಅದಕ್ಕಾಗಿ ಯಾವುದೇ ಪೂರ್ವಗ್ರಹವಿಟ್ಟುಕೊಳ್ಳದೇ ಅಭಿನಂದಿಸೋಣ. ಆದರೆ ಈ ಹಣ ಯಡಿಯೂರಪ್ಪನ ಸ್ವಂತದ್ದೂ ಅಲ್ಲ, ಕಟ್ಟಾ, ನಾಯ್ಡು ಅಥವಾ ಗಣಿ ಧಣಿಗಳು ನಡೆಸುತ್ತಿರುವ ಕಳ್ಳತನದ ಲಾಭದಿಂದ ನೀಡಿರುವ ಪಾಲೂ ಅಲ್ಲ.

ಅದು ಜನರ ಹಣ.

ನೂರೆಂಟು ರೀತಿ ತೆರಿಗೆ ಹಾಕಿ ಜನರನ್ನು ಹಿಂಸಿಸಿ ವಸೂಲಿ ಮಾಡಿಕೊಂಡಿರುವ ಹಣ. ಈ ಹಣವನ್ನು ಬಳಸುವ ಸಂದರ್ಭ ಯಾರೇ ಪತ್ರಕರ್ತರಿಗೆ ಬರಬಹುದು. ಆಗ ನಾವು ನೆನಪಿಸಿಕೊಳ್ಳಬೇಕಾದ್ದು ಯಡಿಯೂರಪ್ಪನವರನ್ನಲ್ಲ. ಬದಲಾಗಿ ಕರ್ನಾಟಕದ ಜನಸಾಮಾನ್ಯರನ್ನು. ಪತ್ರಕರ್ತರ ನಿಧಿ ನಮ್ಮಲ್ಲಿ ಆ ನೈತಿಕ ಎಚ್ಚರ ಮೂಡಿಸಲಿ.

■ ಪಾರ್ವತೀಶ

ಬಿಡಿ ಚಿತ್ರಗಳು

ಬಾಲಕರ ದೇಶಭಕ್ತಿ ಗೀತ



ಒಬ್ಬರು ತಮ್ಮ ದೇಶಭಕ್ತಿ ತೋರಲು ಏನೇನು ಮಾಡಬಹುದು?

ಸೇನೆ ಸೇರಿ ಗಡಿ ಕಾಯುವುದು. ಶತ್ರು ಸೇನೆಯೊಂದಿಗೆ ಸೆಣ ಪ್ರಾಣದ ಹಂಗು ತೊರೆದು ಕಾದಾಡುವುದು. ಇದೆಲ್ಲಾ ಒಂದು ಸಿದ್ಧ ಮಾದರಿ ಉತ್ತರಗಳು. ಜೊತೆಗೆ ಪ್ರಾಮಾಣಿಕವಾಗಿ ಬದುಕುವುದು ಹಾಗೆ ಬದುಕುವ ಸ್ಪೇಸ್ ಕಡಿಮೆಯಾದಂತೆ ಈ ದೇಶ ಹಾಳಾಗಿ ಹೋಗ್ತಾಯಿದೆ ಅಂತಾ ವ್ಯಥೆಪಟ್ಟುಕೊಳ್ಳುವುದು. ಭ್ರಷ್ಟ ಸರ್ಕಾರ, ಖದೀಮ ನಾಯಕರುಗಳ ಬಗ್ಗೆ ಜಿಗುಪ್ಸೆ ಪಟ್ಟುಕೊಳ್ಳುವುದು ಸಹ ದೇಶಭಕ್ತರ ಹಣೆಪಾಡು ಬಿಡಿ.

ಇದೆಲ್ಲದಕ್ಕಿಂತ ಹೊರತಾದ ನವನವೀನ ದೇಶಭಕ್ತಿಯ ವಿಧಾನವೊಂದನ್ನು ಮಹಾರಾಷ್ಟ್ರದ ಶಿವಸೇನೆ ಕಂಡುಕೊಂಡಿದೆ.

ಅದು ಕಲ್ಲು ಹೊಡೆದು ದೇಶಭಕ್ತ ಎನಿಸಿಕೊಳ್ಳುವ ವಿಧಾನ!

ಮುಂಬೈ, ಪೂನಾ, ನಾಗಪುರ ಇನ್ನಿತರ ಪಟ್ಟಣಗಳಲ್ಲಿ ಸಂಜೆ ಕತ್ತಲಾವರಿಸುತ್ತಿದ್ದಂತೆ ಶಿವಸೈನಿಕರಿಂದ ಪ್ರಚೋದನೆ ಪಡೆದ ಹಿಂದೂ ಬಾಲಕರು ಹತ್ತಿರದ ಮುಸ್ಲಿಮರ ಮನೆಗಳ ಮೇಲೆ ಕಲ್ಲು ಎಸೆದು ಪರಾರಿಯಾಗುತ್ತಿದ್ದಾರಂತೆ.

ಇದು ತಪ್ಪಲ್ಲವಾ ಎಂದು ಕೆಲವರು ಆ ಬಾಲಕರ ತಾಯಂದಿರನ್ನು ಕೇಳಿದಾಗ "ಪಾಪ ನಮ್ಮ ಹುಡುಗರದೇನೂ ತಪ್ಪಿಲ್ಲ ಅವರು ತಮ್ಮ ದೇಶಭಕ್ತಿ ತೋರಿಸುತ್ತಿದ್ದಾರೆ ಅಷ್ಟೆ" ಅಂತನ್ನುತ್ತಿದ್ದಾರಂತೆ.

ಯಾರಿಂದಲೋ ಈ ದೇಶಕ್ಕೆ, ನಮಗೆ ಅನ್ಯಾಯವಾಗುತ್ತಿದೆ ಎಂಬ ಅಸಹನೆಯ ಭಾವನೆಗಳನ್ನು ಆ ಪುಟ್ಟ ಬಾಲಕರ ಮನಸ್ಸಿನೊಳಗೆ ತುರುಕುತ್ತಿರುವ ಹಿಂದೂ ಕೋಮುವಾದಿಗಳ ನೀಚ ಪ್ರಚೋದನೆ ಇದು. ನಾಳೆ ಇದೇ ಭಾವನೆ ಸಿಟ್ಟಿನೊಂದಿಗೆ ಹಿಂದೂ ಧರ್ಮದೊಳಗಿನ ದಲಿತರು-ದಮನಿತರು ಕೈಗೆ ಕಲ್ಲು ಎತ್ತಿಕೊಂಡರೆ ಅವು ಪ್ರತಿ ಊರು ಪಟ್ಟಣಗಳಲ್ಲಿ ಯಾರ ಮನೆಗಳ ಮೇಲೆ ಬೀಳಬೇಕು ಹೇಳಿ?

ಅತ್ರೆಯ ಸೇನ ಎಂಬುವರ 'Shiva Sena Women' ಎಂಬ ಪುಸ್ತಕ ಈ ವಿಚಾರಗಳನ್ನು ತಿಳಿಸಿದೆ. ■

ಸಬೂಬು

ಜೀನಿಬಿ ಕತೆ

ಒಂದು ದಿನ ಮಠಕ್ಕೆ ಭೇಟಿ ನೀಡಿದ ವ್ಯಕ್ತಿಯೊಬ್ಬರು ಸಂತನೊಬ್ಬನ ಕತೆಯನ್ನು ಹೇಳಿದರು. "ಸಂತರ ಮಿತ್ರರೊಬ್ಬರು ಮರಣಶಯ್ಯೆಯಲ್ಲಿರುವ ಸುದ್ದಿ ಬಂತು. ಆದರೆ ರಾತ್ರಿಯ ಕತ್ತಲೆಯಲ್ಲಿ ಪ್ರಯಾಣ ಮಾಡಲು ಹೆದರಿದ ಸಂತರು ಸೂರ್ಯನಿಗೆ 'ದೂರದ ಹಳ್ಳಿಯಲ್ಲಿರುವ ನನ್ನ ಮಿತ್ರ ಸಾಯುವ ಮುನ್ನ ನಾನು ಆತನನ್ನು ನೋಡಬೇಕಿದೆ. ಆದ್ದರಿಂದ ನಾನು ಆ ಹಳ್ಳಿಯನ್ನು ತಲುಪುವವರೆಗೆ ದೇವರಾಣೆಗೂ ನೀನು ಆಕಾಶದಲ್ಲಿ ಪ್ರಕಾಶಿಸುತ್ತಲೇ ಇರಬೇಕು' ಎಂದು ಆದೇಶಿಸಿದರು. ಅದನ್ನು ಕೇಳಿದ ಕೂಡಲೇ ತಟಸ್ಥವಾಗಿ ನಿಂತ ಸೂರ್ಯ ಸಂತರು ತಮ್ಮ ಮಿತ್ರನ ಹಳ್ಳಿ ತಲುಪುವವರಿಗೆ ಇದ್ದಲ್ಲಿಯೇ ಪ್ರಕಾಶಿಸುತ್ತಿತ್ತು."

ಈ ಕತೆಯನ್ನು ಕೇಳಿದ ಗುರುಗಳು ."ಅದಕ್ಕಿಂತಲೂ ರಾತ್ರಿಯ ಹೊತ್ತು ಪ್ರಯಾಣಿಸುವ ಬಗೆಗಿನ ಅವರ ಭಯವನ್ನು ನಿವಾರಿಸಿಕೊಳ್ಳುವುದು ಸುಲಭವಾಗಿತ್ತಲ್ಲ?" ಎಂದು ಮುಗುಳ್ನಕ್ಕರು.



ವಿ.ಕ.ದಲ್ಲಿ ಸ್ಪಾನ್ಸರ್ಡ್ ಲೇಖನಗಳು

ಅಂತೂ-ಇಂತೂ ಪೀಠ ಬಂತು - ಎಂಬ ವಿಜಯ ಕರ್ನಾಟಕದ ಪುರವಣಿ ಹಾಸ್ಯಾಸ್ಪದವಾಗಿದ್ದು ನಿಜ. ವಿ.ಕ.ದ ದೊಡ್ಡ ವೀಕ್‌ನೆಸ್ ಎಂದರೆ ವಾಣಿಜ್ಯ ವಿಷಯಗಳ ಬಗ್ಗೆ ಲೇಖನದ ರೂಪದಲ್ಲಿ ಬರುವ **surrogate** ಜಾಹೀರಾತುಗಳು. ಎಲ್ಲರಿಗೂ ಗೊತ್ತಿರುವಂತೆ ನೇರ ಜಾಹೀರಾತುಗಳಿಗಿಂತ ಲೇಖನ ರೂಪದಲ್ಲಿ ಕೊಡಲಾಗುವ ಈ ಪರೋಕ್ಷ ಜಾಹೀರಾತುಗಳು ನೂರು ಪಟ್ಟು ಹೆಚ್ಚು ಪರಿಣಾಮಕಾರಿ.

ಇಂತಹ "ಸ್ಪಾನ್ಸರ್ಡ್ ಲೇಖನಗಳು" ಸತ್ಯವನ್ನು ಎಷ್ಟೊಂದು ತಿರುಚಿ ಜನಸಾಮಾನ್ಯರನ್ನು ಹೇಗೆ ದಾರಿ ತಪ್ಪಿಸುತ್ತವೆ ಎಂಬುದಕ್ಕೆ ತಾಜಾ ಉದಾಹರಣೆ- ವಿ.ಕ.ದ 2-7-2008ರ ವಾಣಿಜ್ಯ ವಿಜಯ ಪುರವಣಿಯಲ್ಲಿ ಪ್ರಕಟವಾಗಿದ್ದ "ಶುಲ್ಕಗಳ ವಿಷಯದಲ್ಲಿ ಖಾಸಗಿ ಬ್ಯಾಂಕ್‌ಗಳೇ ರಾಷ್ಟ್ರೀಕೃತ ಬ್ಯಾಂಕ್‌ಗಳಿಗಿಂತ ಹೆಚ್ಚು ಪಾರದರ್ಶಕವಾಗಿವೆ ಎಂದು ರಿಜರ್ವ್ ಬ್ಯಾಂಕ್ ತನ್ನ ಇತ್ತೀಚಿನ ವರದಿಯಲ್ಲಿ ತಿಳಿಸಿದೆ" ಎಂಬ ಶುದ್ಧ ಹಸಿ ಸುಳ್ಳು ತುಂಬಿದ ಲೇಖನ. ಈ ಲೇಖನಕ್ಕೆ ಉತ್ತರವಾಗಿ, "ರಾಷ್ಟ್ರೀಕೃತ ಬ್ಯಾಂಕ್‌ಗಳು ಎಲ್ಲಾ ತರಹದ ಶುಲ್ಕಗಳ ವಿವರಗಳುಳ್ಳ ದೊಡ್ಡ ಬೋರ್ಡನ್ನು 3 ಭಾಷೆಗಳಲ್ಲಿ ಬರೆದು ಗ್ರಾಹಕರ ಲಾಂಜ್‌ನಲ್ಲಿ ತೂಗು ಹಾಕುತ್ತವೆ. ಈ ಶುಲ್ಕಗಳಿಗಿಂತ ಒಂದು ಪೈಸೆ ಹೆಚ್ಚು ಸಹಾ ರಾಷ್ಟ್ರೀಕೃತ ಬ್ಯಾಂಕ್‌ಗಳು ಚಾರ್ಜ್ ಮಾಡುವುದಿಲ್ಲ, ಇದಕ್ಕಿಂತ ಹೆಚ್ಚಿನ ಪಾರದರ್ಶಕತೆ ಹೇಗೇ ಸಾಧ್ಯ? ಖಾಸಗಿ ಬ್ಯಾಂಕ್‌ಗಳಲ್ಲಿ ಇಂತಹ ಶುಲ್ಕಗಳ ಬೋರ್ಡ್ ಹಾಕುವುದಿಲ್ಲ, ಮೇಲಾಗಿ ಆರ್‌ಬಿಐ ಖಾಸಗಿ ಬ್ಯಾಂಕ್‌ಗಳ ಪರವಾಗಿರುವ ಯಾವುದೇ ವರದಿಯನ್ನು ಪ್ರಕಟಿಸಿಯೇ ಇಲ್ಲ"- ಎಂಬುದಾಗಿ ನಮ್ಮ ಕೆಲವು ಸಹೋದ್ಯೋಗಿಗಳು ವಿ.ಕ.ಕ್ಕೆ ಬರೆದ ಪ್ರತಿಕ್ರಿಯೆಗಳನ್ನು ಅವರು ಪ್ರಕಟಿಸುವ ಗೋಜಿಗೆ ಹೋಗಲಿಲ್ಲ. ಕಾರಣ ಈ ಪರೋಕ್ಷ ಜಾಹೀರಾತು ಅರ್ಥಾತ್ ಸ್ಪಾನ್ಸರ್ಡ್ ಲೇಖನಕ್ಕೆ ಖಾಸಗಿ ಬ್ಯಾಂಕ್‌ಗಳಿಂದ ಹಣ ಪಡೆದಾಗಿತ್ತು ತಾನೇ!

ಗೋವಾದಲ್ಲಿ ನಾಜಿ ಕರ್ನಲ್‌ನ ಬಂಧನದ ಬಗ್ಗೆ ಮಿಡಿಯಾಗಳಿಗೆ ಮಕ್ಮಲ್ ಟೋಪಿ ಹಾಕಿದ ಗೋವಾದ ಬ್ಲಾಗರ್‌ಗಳು ಉತ್ತಮ ಕೆಲಸವನ್ನೆ ಮಾಡಿದ್ದಾರೆ. ಮೀಡಿಯಾಗಳು ಯಾವಾಗಲೂ ಇತರರ ಹುಳುಕನ್ನೆ ಕೆದಕುತ್ತಿರುವಾಗ, ಅವರ ಹುಳುಕನ್ನೂ ಯಾರಾದ್ರೂ ಕೆದಕಬೇಕು ತಾನೆ! ಹಿಂದೊಮ್ಮೆ ತಮಿಳುನಾಡಿನ ರಾಮಾರ್ ಪಿಳ್ಳೆ ಎಂಬಾತ ವನಸ್ಪತಿಗಳಿಂದ ಪೆಟ್ರೋಲ್ ತಯಾರಿಸುವುದಾಗಿ ಮೀಡಿಯಾಗಳಿಗೆಲ್ಲ ಟೋಪಿ ಹಾಕಿದ್ದ. ಇವೆಲ್ಲವನ್ನೂ ಮೀರಿ ಕೇವಲ 3 ವರ್ಷಗಳ ಹಿಂದೆ ಉತ್ತರಪ್ರದೇಶದ ಒಂದು ಸಣ್ಣ ಊರಿನ 15 ವರ್ಷದ ಬಾಲಕನೊಬ್ಬ ಅಮೆರಿಕದ ನಾಸಾದವರು ನಡೆಸಿದ ಅಂತರರಾಷ್ಟ್ರೀಯ ಪರೀಕ್ಷೆಯಲ್ಲಿ ಪಾಸಾದವರಲ್ಲಿ ತಾನೇ ಏಕೈಕ ಭಾರತೀಯ ಎಂದು ತನ್ನ ಗೆಳೆಯರೆದುರು ಹೇಳಿಕೊಂಡ ಸುಳ್ಳನ್ನು ಜಿಲ್ಲಾಮಟ್ಟದ ಸಣ್ಣ ಪತ್ರಿಕೆಯೊಂದು ಪ್ರಕಟಿಸಿ, ನಂತರ ಅದು ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗುವಂತಾಗಿ, ಮೂರು ಕೋಟಿಗೂ ಹೆಚ್ಚು ಓದುಗರನ್ನು ಹೊಂದಿರುವ ಹಿಂದಿಯ ಬೃಹತ್ ಪತ್ರಿಕೆಗಳಾದ ದೈನಿಕ್ ಜಾಗರಣ್ ಹಾಗೂ ದೈನಿಕ್ ಭಾಸ್ಕರ್ ಇವುಗಳೂ ಆ ಹುಡುಗನ ಸಂದರ್ಶನ ಪ್ರಕಟಿಸಿದ ನಂತರ, ದೇಶದ ಎಲ್ಲಾ ಸಣ್ಣ-ದೊಡ್ಡ ಇಂಗ್ಲಿಷ್ ಪತ್ರಿಕೆಗಳೂ ಅದನ್ನೇ ಉದ್ಧರಿಸಿದ್ದರಿಂದ ಪ್ರಭಾವಿತರಾಗಿ ಆಗಿನ ಘನ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಆ ಬಾಲಕನನ್ನು ತಮ್ಮಲ್ಲಿಗೆ ಆಹ್ವಾನಿಸುವಂತಾಗಿತ್ತು. ಆಗ ತಕ್ಷಣ ಎಚ್ಚೆತ್ತ ಅಮೆರಿಕದ ಧೂತವಾಸವೂ ನಾಸಾ ಇಂತಹ ಯಾವುದೇ ಅಂತರರಾಷ್ಟ್ರೀಯ ಪರೀಕ್ಷೆ ಎಂದೂ ನಡೆಸಿಲ್ಲ ಎಂಬ ಸ್ಪಷ್ಟೀಕರಣ ನೀಡಿದ ನಂತರವೇ ದೇಶಕ್ಕೆಲ್ಲಾ ಗೊತ್ತಾಗಿದ್ದು, ಒಬ್ಬ ಯಃಕಶ್ಚಿತ ಹೈಸ್ಕೂಲು ಬಾಲಕನಿಂದ ಇಡೀ ದೇಶದ ಮೀಡಿಯಾಗಳು ಮೋಸ ಹೋಗಿವೆಯೆಂಬುದು.

ತೆ
ಹೊಗಳಿಕೆ
ಳಿ
ಕೆ

ಯಾವುದೇ ವರದಿಯ ಸತ್ಯಾಸತ್ಯತೆಯನ್ನು ಪರೀಕ್ಷಿಸದೇ ಪ್ರಕಟಿಸುವುದರಿಂದ ಎಂತೆಂತಹ ಪ್ರಮಾದಗಳು ಜರುಗುತ್ತವೆಯೆಂಬುದನ್ನು ಈ ಘಟನೆಗಳಿಂದ ಮೀಡಿಯಾಗಳು ಅರಿಯಬೇಕಿದೆ. ನಿನ್ನೆ ತಾನೇ ದೂರದ ಉತ್ತರಪ್ರದೇಶದ 'ಮಂಗಲೌರ್' ಎಂಬ ಊರಿನಲ್ಲಿ ನಡೆದ ಭೀಕರ ಟೆಂಪೊ ಅಪಘಾತವನ್ನು ನಮ್ಮ ಕರ್ನಾಟಕದ 'ಮಂಗಳೂರಿನಲ್ಲಿ' ನಡೆದದ್ದು ಎಂದು 'ಬ್ರೇಕಿಂಗ್ ನ್ಯೂಸ್' ಕೊಟ್ಟಿದ್ದು ನಮ್ಮ ಕನ್ನಡದ ಟಿ.ವಿ.9. ತಾವು ಮಾಡಿದ ಪ್ರಮಾದಕ್ಕೆ ಕೊನೆಗೊಂದು ಸಣ್ಣ ಕ್ಷಮಾಯಾಚನೆಯೂ ಇಲ್ಲ, ಕೆಲವು ಮೀಡಿಯಾಗಳಿಂದ....

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಚಿತ್ರನಟ ಜಗ್ಗೇಶ್ ಬಿಜೆಪಿಗೆ ತಮ್ಮನ್ನು ಮಾರಿಕೊಂಡಿರುವುದು ಬಹಿರಂಗ ಸತ್ಯವೇ ಆದರೂ ತಾವು ಹಣ ತೆಗೆದುಕೊಂಡಿಲ್ಲ ಎಂದು ಅವರು ಹೇಗೆ ತಾನೆ ಸಮರ್ಥಿಸಿಕೊಂಡರು? ಇಂಥ ಶಾಸಕರನ್ನು ಪಡೆದ ತುರುವೇಕೆರೆಯೇ ಧನ್ಯ. ತಮ್ಮನ್ನು ತಾವೇ ಹರಾಜು ಮಾಡಿಕೊಳ್ಳುವುದರ ಮೂಲಕ ಇತರ ಶಾಸಕರಿಗೂ ಅವಮಾನ ಮಾಡಿದ ಜಗ್ಗೇಶ್‌ರನ್ನು ಯಾವುದರಲ್ಲಿ ಹೊಡೆಯಬೇಕು?! ಲಂಕೇಶ್ ಹೇಳಿದಂತೆ ಜಗ್ಗೇಶ್ ಕಾಸು ಇದ್ದೋನೆ ಬಾಸು ಮತ್ತು ಅವರನ್ನು ಆಯ್ಕೆಮಾಡಿದ ಮತದಾರರೇ ನಿಜಕ್ಕೂ ಬಕ್ರಗಳೇ. ಚಿತ್ರರಂಗದಲ್ಲಿ ಯಾವುದೇ ಗಾಡ್‌ಫಾದರ್‌ಗಳಿಲ್ಲದೆ ಮೇಲೇರಿದ ಜಗ್ಗೇಶ್, ರಾಜಕಾರಣದಲ್ಲಿ ಯಶಸ್ವಿಯಾಗಿ ಶಾಸಕರಾದ ಕೇವಲ ನಲವತ್ತು ದಿನಗಳಲ್ಲೇ ತಮ್ಮನ್ನು ರೆಡ್ಡಿ ಪಾಲಾಗಿಸಿಕೊಂಡಿರುವುದು ಅವರ ಬಗ್ಗೆ ವಾಕರಿಕೆ ತರಿಸುತ್ತದೆ. ಚಲನಚಿತ್ರಗಳಲ್ಲಿ ಮಾತ್ರ ತಾನು ವಿದೂಷಕ ಅಲ್ಲ, ರಾಜಕಾರಣದಲ್ಲೂ ವಿದೂಷಕ ಎಂಬುದನ್ನು ಜಗ್ಗೇಶ್ ಸಾಬೀತುಪಡಿಸಿದ್ದಾರೆ. ಜೀವನ ಪೂರಾ ಆರಾಮವಾಗಿರಲು ಏನು ಬೇಕೋ ಎಲ್ಲವನ್ನೂ ಮಾಡಿಕೊಂಡ ಜಗ್ಗೇಶ್‌ಗೆ ಇನ್ನೇನೂ ಆಗಬೇಕಿಲ್ಲ. ಇಂತವರನ್ನು ಪಡೆದುಕೊಂಡ ಕರ್ನಾಟಕದ ಸೌಭಾಗ್ಯವೊ, ದುರಂತವೋ ತಿಳಿಯದು.

-ಎಸ್.ಲಕ್ಷ್ಮೀನರಸಿಂಹಚಾರ್, ಚಾಮರಾಜನಗರ

ಸಾಹಸ ಪ್ರಧಾನ ಚಿತ್ರಗಳನ್ನು ಮತ್ತು ವನ್ಯ ಜೀವಿಗಳನ್ನು ಹಾಕಿಕೊಂಡು ಚಿತ್ರ ಮಾಡುವ ವಿಧಾನವನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ್ದ ಎಂ.ಪಿ.ಶಂಕರ್‌ರವರ ಸಾವು ತುಂಬಲಾಗದ ನಷ್ಟ ಮತ್ತು ಮತ್ತೆಂದೂ ಕಾಣಲಾಗದಂತಹ ಪ್ರತಿಭೆ.



ನಟನಾಗಿಯೂ ಶಂಕರ್‌ರವರು ಪ್ರೇಕ್ಷಕರ ಮೇಲೆ ತಮ್ಮ ಛಾಪನ್ನು ಬೀರಿದ್ದರು. ಅವರ ಆಜಾನುಬಾಹು ದೇಹ ಮತ್ತು ಎಲ್ಲ ತರಹದ ಪಾತ್ರಗಳೊಂದಿಗೆ ಲೀನವಾಗುತ್ತಿದ್ದ ಕಲೆಯನ್ನು ಕನ್ನಡ ಪ್ರೇಕ್ಷಕರು ಮರೆಯುವುದಾದರೂ ಹೇಗೆ?

'ವೀರಬಾಹು'ವಿನ ಆ ಗಂಭೀರ ನೃತ್ಯದಿಂದ ಹಿಡಿದು 'ಹನಿ ಹನಿಗೂಡುದ್ರೆ ಹಳ್ಳ' ಹಾಡಿಗಾಗಿ ತಮಟೆ ಬಾರಿಸಿಕೊಂಡು ತನ್ನ ದೊಡ್ಡ ದೇಹವನ್ನು ಕುಣಿಸುವ ಶಂಕರ್‌ರ ನೃತ್ಯ ಮಜಬೂತಾಗಿತ್ತು. ಹಾಗೆಯೇ 'ಭೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ಉದ್ದದ ಜಡೆಯನ್ನು ನೀವಿ ಕಟ್ಟಿ ಹಳ್ಳಿಯ ಜನರನ್ನು ಯಮನಂತೆ ಕಾಡುವ ಕ್ಷುದ್ರ ಸಾಹುಕಾರನ ಪಾತ್ರ, 'ಗಂಧದ ಗುಡಿ'ಯ ವಿಲನ್, 'ನಾಗರಹಾವು' ಚಿತ್ರದ ಜಗಜಟ್ಟಿಯಾಗಿ ಯುವಕರನ್ನು ಹುರಿದುಂಬಿಸುವ ಪೈಲ್ವಾನ, 'ನಾರದ ವಿಜಯ' ಎಂಬ ಫ್ಯಾಂಟಸಿ ಚಿತ್ರದಲ್ಲಿ 'ಮಾಂಸ ಪರ್ವತ' ಗುರುಪಾದನಾಗಿ ಅನಂತ್‌ರ ಬೆನ್ನು ಹತ್ತುವ ಸಿಐಡಿ ಅಧಿಕಾರಿ, ಕಾಶೀನಾಥ್ ಅಭಿನಯದ 'ಅವಳೇ ನನ್ನ ಹೆಂಡ್ತಿ' ಚಿತ್ರದಲ್ಲಿ ತನ್ನ ಮಗನಿಂದಲೇ ಮಾತಿಗೊಮ್ಮೆ ಪಿಶಾಚಿ (ಪಿತಾಜಿ) ಎಂದು ಕರೆಸಿಕೊಳ್ಳುವ ತಂದೆಯಾಗಿ, ಎಲ್ಲಕ್ಕಿಂತ ಮುಖ್ಯವಾಗಿ 'ಸಿಪಾಯಿ ರಾಮು' ಚಿತ್ರದಲ್ಲಿ ವಿಚಿತ್ರ ಧಿರಿಸನ್ನು ಧರಿಸಿ ಧರೋಡೆಕೋರನನ್ನೇ ಆವಾಹಿಸಿಕೊಂಡು ನಟಿಸಿದ್ದು... ಅಬ್ಬಬ್ಬಾ! ಎಂಥಾ ಅದ್ಭುತ ನಟನೆ, ಅದೆಂಥಾ ಗಾಂಭೀರ್ಯ. 'ವಿಲನ್ ಅಂದ್ರೆ ಎಂ.ಪಿ ಶಂಕರ್ರಂಗಿರಬೇಕು' ಎಂದು ಪ್ರೇಕ್ಷಕರು ಹೇಳುತ್ತಿದ್ದದ್ದು ಸುಮ್ಮನಲ್ಲ.


ಮಿಂಚಿ ಮರೆಯಾದ ಗಂಧದ ಗುಡಿಯ ಗಾರುಡಿಗ

ಮೊನ್ನೆ ಮೊನ್ನೆ ಅವರಿಗೆ ಅಪಾರ ಕೀರ್ತಿ ಮತ್ತು ಗೌರವವನ್ನು ತಂದುಕೊಟ್ಟ 'ಸತ್ಯಹರಿಶ್ಚಂದ್ರ' ಚಿತ್ರ ವರ್ಣದಲ್ಲಿ ಬಂದಾಗ ಅದನ್ನು ನೋಡಬೇಕೆಂದು ಆಸೆಪಟ್ಟಿದ್ದರು. ಆದರೆ ಅವರ ಅನಾರೋಗ್ಯದಿಂದ ಅದು ಸಾಧ್ಯವಾಗಲಿಲ್ಲ. ವರ್ಣದ 'ಸತ್ಯಹರಿಶ್ಚಂದ್ರ' ನೋಡುವ ಮೊದಲೇ ಕಪ್ಪು ಬಿಳುಪು ಕಾಲದ ಈ ಮಹಾನ್ ವ್ಯಕ್ತಿಯ ವರ್ಣರಂಜಿತ ಜೀವನ ಮುಗಿದೇ ಹೋಗಿದೆ.

ಎಂ.ಪಿ.ಶಂಕರ್‌ರಂಥ ದೈತ್ಯ ವ್ಯಕ್ತಿ ಮತ್ತು ಶಕ್ತಿ ಕನ್ನಡ ಚಿತ್ರರಂಗದಲ್ಲಿ ಮತ್ತೆ ಕಂಡುಬರುವುದು ಅಸಾಧ್ಯ. ಶಂಕರ್‌ರನ್ನು ಕಳೆದುಕೊಂಡ ಚಿತ್ರರಂಗ ವಷ್ಟೇ ಅಲ್ಲ, ಅರಣ್ಯಗಳು ಮತ್ತದರಲ್ಲಿನ ಜೀವಿಗಳೂ ಓರ್ವ ಮಿತ್ರನನ್ನು ಕಳೆದುಕೊಂಡು ಅನಾಥವಾಗಿವೆ.

ದಟ್ಟಡವಿಯ ಮಧ್ಯೆ ಕುಳಿತು ಪ್ರಕೃತಿಯನ್ನು ಆರಾಧಿಸುತ್ತಿದ್ದ ಆ ಒಂಟಿ ಸಿಂಹದ ಗುಟುರು ಶಾಶ್ವತವಾಗಿ ನಿಂತಿದೆ. ಆಜಾನುಬಾಹು ಕಾಡಿನ ರಾಜನ ಗಾಂಭೀರ್ಯದ ಹೆಜ್ಜೆ ತನ್ನ ದಿಕ್ಕು ಬದಲಿಸಿದೆ.....

ಇಂಥ ನಿಸರ್ಗಪ್ರಿಯನಿಗೆ, ದೈತ್ಯ ಪ್ರತಿಭೆಗೆ ನಮ್ಮ ಶ್ರದ್ಧಾಂಜಲಿ. ■



70ರ ಗಡಿ ದಾಟಿದ ಶಿವರಾಮಣ್ಣ

ಇತ್ತೀಚೆಗೆ ಹಾಸ್ಯನಟ 'ಶರಪಂಜರ' ಶಿವರಾಮ್ ಅವರ ಎಪ್ಪತ್ತನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಗೌರಿ ಸುಂದರ್ ತಮ್ಮ ಸುಂದರ ಪ್ರಕಾಶನದಿಂದ ಅಭಿನಂದನಾ ಗ್ರಂಥವನ್ನು ಹೊರತಂದರು.

ಈ ಗ್ರಂಥದಲ್ಲಿ ಶಿವರಾಮಣ್ಣನ ವ್ಯಕ್ತಿತ್ವದ ಹಲವಾರು ಆಯಾಮಗಳನ್ನು ಬೇರೆ ಬೇರೆ ಲೇಖಕರು ಮತ್ತು ಅವರ ಪರಿಚಿತರು ಬರೆದಿದ್ದಾರೆ. ಆ ಮೂಲಕ ಶಿವರಾಮಣ್ಣರಿಗೆ ಗೌರವ ಸೂಚಿಸಿದ್ದಾರೆ.

ಶಿವರಾಮಣ್ಣನ ತರಹ ಎಪ್ಪತ್ತರ ಗಡಿಯನ್ನು ದಾಟಿದ ಹಾಗೂ ಚಿತ್ರರಂಗದಲ್ಲಿ ಬೆಟ್ಟದಷ್ಟು ಸಾಹಸವನ್ನು ಮಾಡಿದ ಅನೇಕ ಕಲಾವಿದರು ನಮ್ಮ ನಡುವೆ ಇನ್ನೂ ಇದ್ದಾರೆ. ಆದರೆ ಕನ್ನಡ ಚಿತ್ರರಂಗದ ದುರಂತ ಎಂತಹದ್ದೆಂದರೆ ಅಂತಹ ಕಲಾವಿದರ ಬಗ್ಗೆ ಅವರ ಕೊಡುಗೆಯ ಬಗ್ಗೆ ಯಾವುದೇ ಪುಸ್ತಕವಾಗಲಿ, ಗ್ರಂಥವಾಗಲಿ ಪ್ರಕಟಿಸಲು ಚಿತ್ರೋದ್ಯಮದ ಯಾರಿಗೂ ಪುರುಸೊತ್ತೇ ಇಲ್ಲ. ಪರಿಣಾಮವಾಗಿ ಕನ್ನಡ ಚಿತ್ರರಂಗ ಬಾಲ್ಯಾವಸ್ಥೆಯಲ್ಲಿದ್ದಾಗ ಈ ಮಹನೀಯರುಗಳು ನೀಡಿದ ಕೊಡುಗೆಗಳೆಲ್ಲಾ ಯಾರ ಗಮನಕ್ಕೂ ಬಾರದೆ ಅವರೆಲ್ಲರೊಂದಿಗೆ ಮಣ್ಣಲ್ಲಿ ಮಣ್ಣಾಗಿಹೋಗುತ್ತಿದೆ.

ಇಂತಹ ಹಿರಿಯ ಕಲಾವಿದರ ಬಗ್ಗೆ ಅವರ ವ್ಯಕ್ತಿಚಿತ್ರವನ್ನು ಪ್ರಕಟಿಸುವಂತಹ ಕೆಲಸವನ್ನು ಚಲನಚಿತ್ರ ವಾಣಿಜ್ಯ ಮಂಡಳಿ ಅಥವಾ ಕಲಾವಿದರ ಸಂಘ ಕೈಗೆತ್ತಿಕೊಳ್ಳಬೇಕು. ಇದರತ್ತ ಈಗ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಪದವಿಯನ್ನು ಅಲಂಕರಿಸಿರುವ ಡಾ. ಜಯಮಾಲಾ ಗಮನಹರಿಸುತ್ತಾರೆ ಎಂದು ಭಾವಿಸೋಣ.

ಆದರೆ ಸದ್ಯಕ್ಕೆ ಛೇಂಬರ್‌ನವರು ಮಾಡದ ಕೆಲಸವನ್ನು ಸುಂದರ ಪ್ರಕಾಶನ ಮಾಡಿದೆ ಎಂದು ಹೇಳಬಹುದು. ಶಿವರಾಂ ನಿರ್ಮಾಪಕರಾಗಿ, ಸಹಾಯಕ ನಿರ್ದೇಶಕನಾಗಿ, ಕಲಾವಿದರಾಗಿ ಸಾಕಷ್ಟು ಕೆಲಸ ಮಾಡಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಅದಕ್ಕಿಂತಲೂ ಮುಖ್ಯವಾಗಿ ಕನ್ನಡ ಚಿತ್ರರಂಗದ ಹಲವಾರು ವಿವಾದಗಳು ಸ್ಫೋಟಿಸುವ ಮುನ್ನ ಅದನ್ನು ತಿಳಿಗೊಳಿಸಿದ್ದೂ ಇವರೇ. ಹಾಗೆಯೇ ಅನೇಕ ಕಲಾವಿದರ 'ಲವ್' ಅಫೇರುಗಳಿಗೂ ಇವರು ಸಾಕ್ಷಿಯಾಗಿದ್ದ ಉದಾಹರಣೆಗಳೂ ಇವೆ. ಹಾಗೆಯೇ ಕಲಾವಿದರ್ಯಾರೇ ನಿಧನ ಹೊಂದಿದರೂ ಅವರ ಮನೆಗೆ ಮೊದಲು ಧಾವಿಸಿ ಅಂತ್ಯಸಂಸ್ಕಾರದ ಎಲ್ಲ ಜವಾಬ್ದಾರಿಯನ್ನು ಕೂಡ ಹೆಗಲಿಗೇರಿಸಿಕೊಳ್ಳುವುದು ಇದೇ ಶಿವರಾಮಣ್ಣ.

ಆದರೆ ಇಂತಹ ಶಿವರಾಮಣ್ಣ ಕಳೆದ ಏಳೆಂಟು ವರ್ಷಗಳಿಂದ ಒಂದೆರಡು ಚಿತ್ರಗಳಿಗಾಗಿ ಮುಖಕ್ಕೆ ಬಣ್ಣ ಹಚ್ಚಿದ್ದು ಬಿಟ್ಟರೆ ನಟನೆ ಮಾಡಿದ್ದೇ ಇಲ್ಲ. ಟೀವಿ ಧಾರಾವಾಹಿಯಲ್ಲೂ ಒಮ್ಮೆ ಅರ್ಧಕ್ಕೆ ಇವರನ್ನು ಕೈಬಿಟ್ಟರು. ಈ ಬಗ್ಗೆ ನಾಲ್ಕೈದು ವರ್ಷದ ಹಿಂದೆ ಶಿವರಾಮಣ್ಣ ನೊಂದು ಪತ್ರಕರ್ತರೊಂದಿಗೆ ಮನಬಿಚ್ಚಿ ಮಾತನಾಡಿದ್ದರು. ಆ ಸುದ್ದಿ ಪ್ರಕಟವಾದ ನಂತರ ಟಿವಿಯಲ್ಲಿ ದೊರೆಯುತ್ತಿದ್ದ ಅವಕಾಶಗಳೂ ಕೈಬಿಟ್ಟವು.

ಶಿವರಾಮಣ್ಣ ಎಂದೇ ಇವರನ್ನು ಉದ್ಯಮದ ಬಹುತೇಕ ಜನ ಪ್ರೀತಿಯಿಂದ ಸಂಬೋಧಿಸುತ್ತಾರೆ. ಆದರೆ ಆ ಪ್ರೀತಿಗೆ ಪೂರಕವಾದ ಆರ್ಥಿಕ ಸ್ಪಂದನೆಯಂತೂ ಅವರಿಗೆ ದೊರಕಲೇ ಇಲ್ಲ. ನಿನ್ನೆ ಮೊನ್ನೆ ಬಂದ ಟಿವಿ ಕಲಾವಿದರೇ ಇಂದು ಐಶಾರಾಮಿ ಕಾರುಗಳಲ್ಲಿ ತಿರುಗಾಡುತ್ತಿರುವಾಗ ಶಿವರಾಮಣ್ಣನಂತ ಅನುಭವೀ ನಟ ಇಂದಿಗೂ ತಮ್ಮ ಹಳೆಯ ಫಿಯೆಟ್ ಕಾರಲ್ಲೋ ಅಥವಾ ಬಜಾಜ್ ಸ್ಕೂಟರ್‌ನಲ್ಲೋ ಬೆಂಗಳೂರಿನಲ್ಲಿ ಸುತ್ತಾಡುತ್ತಿರುತ್ತಾರೆ.

ಕನ್ನಡ ಚಿತ್ರರಂಗದಲ್ಲಿರುವ ಕೆಲವೇ ಕೆಲವು ಅಜಾತಶತ್ರುಗಳಲ್ಲಿ ಶಿವರಾಮಣ್ಣ ಕೂಡ ಒಬ್ಬರು. ಎಲ್ಲರಿಗೂ ಗೊತ್ತಿರುವಂತೆ ಕನ್ನಡ ಚಿತ್ರರಂಗದಲ್ಲಿರುವ ಗುಂಪುಗಾರಿಕೆ, ರಾಜಕೀಯಗಳ ಮಧ್ಯೆಯೂ ಈ ವ್ಯಕ್ತಿ ಸದಾಶಿವನಗರ, ಜಯನಗರ, ರಾಜಾಜಿನಗರ.... ಹೀಗೆ ಎಲ್ಲ 'ನಗರ'ಗಳಿಗೂ ಸಲ್ಲುವ ವ್ಯಕ್ತಿಯಾಗಿ ಉಳಿದಿದ್ದಾರೆ.


ಸಿನಿಮಾ ಬಿಟ್ಟು ಇವರಿಗೆ ಅನೇಕ ಹವ್ಯಾಸಗಳಿವೆ. ಅದರಲ್ಲಿ ಮುಖ್ಯವಾಗಿ ಪುಸ್ತಕ ಸಂಗ್ರಹ. ಇವರ ಮನೆಯಲ್ಲಿ ದೊಡ್ಡ ವಾಚನಾಲಯವೇ ಇದೆ. ಫೋಟೋಗ್ರಫಿ ಮತ್ತೊಂದು ಹವ್ಯಾಸ. ಅದಲ್ಲದೆ ವರ್ಷಕ್ಕೊಮ್ಮೆ ಅಯ್ಯಪ್ಪಸ್ವಾಮಿ, ರಾಘವೇಂದ್ರ ಸ್ವಾಮಿಗಳ ದರ್ಶನ ಪಡೆಯುವುದು ಇವರ ಅಭ್ಯಾಸ. ಚಾಮರಾಜಪೇಟೆಯಲ್ಲಿರುವ ಕೋಟೆ ರಾಮಸೇವಾಮಂಡಳಿಯ ಆಶ್ರಯದಲ್ಲಿ ಪ್ರತೀವರ್ಷ ನಡೆಯುವ ಒಂದು ತಿಂಗಳ ಕಾಲಾವಧಿಯ ರಾಷ್ಟ್ರಮಟ್ಟದ ಸಂಗೀತ ಕಾರ್ಯಕ್ರಮದಲ್ಲಿ ನಿತ್ಯವೂ ಮೊದಲ ಸಾಲಿನಲ್ಲಿ ಕುಳಿತು ಸಂಗೀತವನ್ನು ಆಲಿಸುತ್ತಾರೆ.

ಪ್ರತೀ ಎರಡನೇ ಭಾನುವಾರ ಜಯನಗರದ ನ್ಯಾಷನಲ್ ಕಾಲೇಜು ಆವರಣದಲ್ಲಿ ವಿಷ್ಣುವರ್ಧನ್ ನೇತೃತ್ವದ ಸ್ನೇಹಲೋಕ ತಂಡದಲ್ಲಿನ ಎಪ್ಪತ್ತರ ಹರೆಯದ ಈ ಸಕ್ರಿಯ ಆಟಗಾರ ಕ್ರಿಕೆಟ್ ಆಡುವುದನ್ನು ನೀವೊಮ್ಮೆ ನೋಡಲೇಬೇಕು! ಆದರೆ ಇವರ ಆಪ್ತರೇ ಹೇಳುವುದೇನೆಂದರೆ ಮೈಕು ಮಾತ್ರ ಇವರ ಕೈಗೆ ನೀಡಬಾರದು ಎಂದು. ಯಾಕೆಂದರೆ ನಿರೂಪಕನಾಗಿ ಶಿವರಾಮಣ್ಣ ಮೈಕು ಹಿಡಿದು ನಿಂತರೆ ಗಂಟೆಗಟ್ಟಲೆ ಕೊರೆತ ಖಚಿತ.

ಇಂತಹ ಶಿವರಾಮಣ್ಣ ಎಪ್ಪತ್ತರ ಗಡಿ ದಾಟಿ ಇನ್ನೂ ಆಟವಾಡುತ್ತಿದ್ದಾರೆ, ಮಾತಾಡುತ್ತಿದ್ದಾರೆ, ಓಡಾಡುತ್ತಿದ್ದಾರೆ ಆದರೆ ಅವರ ಉಸಿರಾಗಿರುವ ನಟನೆಗೆ ಮಾತ್ರ ಅವಕಾಶ ದೊರೆಯುತ್ತಿಲ್ಲ. ಅದೇನೇ ಇರಲಿ ಲವಲವಿಕೆಯ, ಜೀವನೋತ್ಸಾಹದ ಈ ಶಿವರಾಂ ಮುಖದಲ್ಲಿ ಮಾತ್ರ ನಗು ಎಂದೂ ಮಾಸಿಲ್ಲ, ಅದು ಎಂದೆಂದಿಗೂ ಮಾಸದಿರಲಿ ಎಂಬುದು ನಮ್ಮ ಹಾರೈಕೆ.

■ ರೇಣ್ಕ

ಎಂ.ಪಿ. ಶಂಕರ್ ಮತ್ತು ಚಿತ್ರರಂಗ



ಆಗ ದೊಡ್ಡ ಸಿನಿಮಾ ವಿತರಕರಾಗಿದ್ದ ವೀರಾಸ್ವಾಮಿಯವರ ಮಾರ್ಗದರ್ಶನ ಮತ್ತು ಸಹಕಾರದೊಂದಿಗೆ ನಿರ್ಮಾಪಕರಾದ ಎಂ.ಪಿ. ಶಂಕರ್, 'ನಾನೇ ರಾಜ' ಎಂಬ ಚಿತ್ರವನ್ನು ನಿರ್ಮಿಸಿ ಅದರಲ್ಲಿ ತಮ್ಮ ಗುರು ವೀರಾಸ್ವಾಮಿಯವರ ಪುತ್ರ ರವಿಚಂದ್ರನ್‌ರನ್ನು ಹೀರೋ ಮಾಡುವ ಮೂಲಕ ಕ್ರೇಜಿ ಸ್ಟಾರ್‌ಅನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ್ದರು. ಆದರೆ ಶಂಕರ್ ಅವರ ದುರಾದೃಷ್ಟವೋ, ಹಣೆಬರಹವೋ... ಅವರಿಂದ ಉಪಕಾರ ಪಡೆದವರಲ್ಲಿ ಬಹಳಷ್ಟು ಜನ ಅವರ ಮನನೋಯಿಸಿದ್ದೇ ಹೆಚ್ಚು.

ರವಿಚಂದ್ರನ್ ಕೂಡಾ ಇದಕ್ಕೆ ಹೊರತಲ್ಲ.

'ಚಿನ್ನ' ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿ ದುಬಾರೆ ಕಾಡಿನಲ್ಲಿ ರವಿಚಂದ್ರನ್‌ರ ಅಚಾತುರ್ಯದಿಂದ ಅಲ್ಲಿನ ಹೊಳೆಯಲ್ಲಿದ್ದ ಜಲಚರಗಳೆಲ್ಲಾ ಸತ್ತು ಬಿದ್ದಿದ್ದವು. ಈ ಕಾರಣಕ್ಕಾಗಿ ರವಿಚಂದ್ರನ್‌ರನ್ನು ಪೊಲೀಸರು ಬಂಧಿಸಿದ್ದರಲ್ಲದೆ ಅವರ ವಿರುದ್ಧ ಕೇಸನ್ನೂ ಜಡಿದಿದ್ದರು. ಅರಣ್ಯ ಇಲಾಖೆಯೊಂದಿಗೆ ಸೌಹಾರ್ದ ಸಂಬಂಧವಿಟ್ಟುಕೊಂಡಿದ್ದ ಶಂಕರ್ ಆ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿ ರವಿಚಂದ್ರನ್‌ರನ್ನು ಬೀಸುವ ದೊಣ್ಣೆಯಿಂದ ಪಾರು ಮಾಡಿದ್ದರು.

ಇದಾದ ಹಲವು ವರ್ಷಗಳ ನಂತರ ರವಿಚಂದ್ರನ್ ತನ್ನ ಸಹೋದರ ಬಾಲಾಜಿಯ ಮದುವೆ ಕರೆಯೋಲೆಯನ್ನು ಶಂಕರ್‌ರವರ ಮನೆಗೆ ಬಂದು ನೀಡುವ ಬದಲಾಗಿ ರಸ್ತೆಯಲ್ಲೇ ನಿಂತು ನೀಡಿದ್ದರಿಂದಲೂ ಶಂಕರ್ ತುಂಬಾ ಅವಮಾನಿತರಾಗಿದ್ದರು. ಆದರೆ ತಮ್ಮ ಮನಸ್ಸಿಗೆ ರವಿಚಂದ್ರನ್ ಎಷ್ಟೇ ನೋವುಂಟುಮಾಡಿದ್ದರೂ ಶಂಕರ್ ಎಂದೂ ಆತನ ಮೇಲೆ ಹಗೆ ಸಾಧಿಸಲಿಲ್ಲ.

'ಗಂಧದ ಗುಡಿ'ಯಂಥ ಐತಿಹಾಸಿಕ ಚಿತ್ರವನ್ನು ನಿರ್ಮಿಸಿದ ನಂತರ ರಾಜ್‌ಕುಮಾರ್‌ರನ್ನು ಹಾಕಿಕೊಂಡು ಮೊದಲ ಬಾರಿಗೆ ಅಮೆರಿಕದಲ್ಲಿ ಚಿತ್ರವೊಂದನ್ನು ಮಾಡುವ ಮಹದಾಸೆ ಶಂಕರ್ ಅವರದ್ದಾಗಿತ್ತು, ಅದನ್ನು ಏಕಕಾಲದಲ್ಲಿ ಕನ್ನಡ ಮತ್ತು ತಮಿಳಿನಲ್ಲಿ ನಿರ್ಮಿಸುವ ಯೋಜನೆಯನ್ನು ಹೊಂದಿದ್ದ ಶಂಕರ್ ತಮಿಳು ಚಿತ್ರದ ಪಾತ್ರಕ್ಕೆ ಕಮಲ್‌ಹಾಸನ್‌ರ ಡೇಟ್ಸ್ ಪಡೆದು ಅವರಿಗೆ ಅಡ್ವಾನ್ಸ್‌ಅನ್ನೂ ನೀಡಿದ್ದರು. ಇತ್ತ ರಾಜ್ ಕೂಡ ತಮ್ಮ ಕಾಲ್‌ಶೀಟನ್ನು ನೀಡಿದ್ದರು.

ಎಲ್ಲಾ ತಯಾರಿಗಳು ನಡೆದು ಇನ್ನೇನು ಅಮೆರಿಕಕ್ಕೆ ಹಾರಿಹೋಗಬೇಕೆಂದಿದ್ದಾಗ ಒಂದು ಸಮಸ್ಯೆ ಎದುರಾಯಿತು. ಆಗತಾನೇ ವಿತರಣಾ ಸಂಸ್ಥೆಯನ್ನು ತೆರೆದಿದ್ದ ಪಾರ್ವತಮ್ಮ ರಾಜಕುಮಾರ್ "ನಮಗೇ ಈ ಚಿತ್ರದ ವಿತರಣಾ ಹಕ್ಕು ಕೊಡುವುದಿದ್ದರೆ ಮಾತ್ರ ನಮ್ಮ ಯಜಮಾನ್ರು ಕಾಲ್‌ಶೀಟ್ ನೀಡುತ್ತೇವೆ" ಎಂದು ಹಠ ಹಿಡಿದರು. ಆದರೆ ವೀರಾಸ್ವಾಮಿಯವರ ಅನ್ನದ ಋಣವನ್ನು ಮರೆತು ಹೇಗೆ ತಾನೆ ಪಾರ್ವತಮ್ಮನವರಿಗೆ ವಿತರಣೆ ಹಕ್ಕನ್ನು ಕೊಡಲು ಸಾಧ್ಯ? ಪಾರ್ವತಮ್ಮನವರ ಈ ಅತಿರೇಕತನದಿಂದಾಗಿ ಅಮೆರಿಕದಲ್ಲಿ ರಾಜ್ ಚಿತ್ರವನ್ನು ಚಿತ್ರೀಕರಿಸುವ ಶಂಕರ್ ಕನಸಿಗೆ ತಣ್ಣೀರೆರಚಿದಂತಾಯಿತು. ಸಿನಿಮಾ ಕೂಡಾ ಡ್ರಾಪ್ ಆಯಿತು.

ಹಲವಾರು ವರ್ಷಗಳ ನಂತರ ಶಂಕರ್‌ಗೆ ಇನ್ನೊಂದು ಆಘಾತ ಕಾದಿತ್ತು, ಅವರು ನಿರ್ಮಿಸಿದ 'ಗಿಡ್ಡೂ ದಾದ' ಎಂಬ ಚಿತ್ರಕ್ಕೆ ತಮ್ಮ ಪರಮಾಪ್ತ ಗೆಳೆಯ ದ್ವಾರಕೀಶ್‌ರನ್ನೇ ನಿರ್ದೇಶಕರನ್ನಾಗಿಸಿದ್ದರು. ಆದರೆ ದ್ವಾರಕೀಶ್‌ಗೆ ಅದ್ಯಾವ ಮಂಕು ಬಡಿದಿತ್ತೋ ಅಥವಾ ಅವರ ಉಡಾಫೆಯೋ ಚಿತ್ರವಂತೂ ಹದಗೆಟ್ಟಿತ್ತು, ಶಂಕರ್ ತಮ್ಮ ವೃತ್ತಿ ಬದುಕಿನಲ್ಲಿ ಗಳಿಸಿದ್ದ ಅಷ್ಟಿಷ್ಟು ಹಣ ಈ ಚಿತ್ರದ ಮುಖಾಂತರ ನೀರು ಪಾಲಾಯಿತು. ಸಾಲ, ಬಡತನ ಅವರ ಹೆಗಲೇರಿತು. ಇದಾದನಂತರ 'ಗಂಧದಗುಡಿ ಭಾಗ-2' ಕೂಡ ಶಂಕರ್‌ರನ್ನು ಬರಿಗೈ ಮಾಡಿತ್ತು.

ಆದರೆ ಶಂಕರ್‌ರವರ ದೊಡ್ಡತನ ಎಂತಹದ್ದಾಗಿತ್ತೆಂದರೆ ತನಗೆ ಎಂಥಾ ಅನ್ಯಾಯ ಮಾಡಿದವರನ್ನೂ ಒಂದು ದಿನಕ್ಕೂ, ಅವರು ಶಪಿಸುತ್ತಿರಲಿಲ್ಲ, ಬದಲಾಗಿ ಅನ್ಯಾಯ ಮಾಡಿದವರ ವಿರುದ್ಧದ ತಮ್ಮ ಅನಿಸಿಕೆಯನ್ನು ನೇರವಾಗಿಯೇ ಹೇಳುತ್ತಿದ್ದ ಶಂಕರ್ ಕಡೆಗೆ "ಅವರಿಗೆ ಆ ದೇವ್ರು ಒಳ್ಳೇದು ಮಾಡಲಿ" ಎಂದೇ ಆಶಿಸುತ್ತಿದ್ದರು.

■ ಅರುಣ್.ಜಿ

ಮಗನ ಸಾವು ನಿರಂತರ ನೋವು



ಶಂಕರ್ ತಮ್ಮ ವೃತ್ತಿ ಜೀವನದಲ್ಲಿ ಹಲವಾರು ನೋವುಗಳನ್ನು ಕಂಡಿದ್ದರೂ ಅವರನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಕುಗ್ಗಿಸಿದ್ದು ಅವರ ಮಗನ ಸಾವು. ತೋಳೆತ್ತರಕ್ಕೆ ಬೆಳೆದು ನಿಂತಿದ್ದ ಅವರ ಮಗ ವಿರೂಪಾಕ್ಷ ತನ್ನ ತಂದೆಯ ಬಗ್ಗೆ ಅಸಮಾಧಾನಗೊಂಡಿದ್ದ. ಬೇರೆಲ್ಲರನ್ನು ಸಿನಿಮಾದಲ್ಲಿ ಬೆಳೆಸುವ ತನ್ನ ತಂದೆ ತನ್ನನ್ನು ಮಾತ್ರ ಹೀರೋ ಮಾಡಲಿಲ್ಲ ಎಂಬ ಕೊರಗಿಗೆ ಬಿದ್ದ. ಬರುಬರುತ್ತಾ ಮಾನಸಿಕವಾಗಿ ಮಂಕಾದ. ಜನ ಸಂಪರ್ಕದಿಂದ ದೂರ ಉಳಿದು ಖಿನ್ನನಾಗಿದ್ದ ಆ ಹುಡುಗ ಒಂದು ದಿನ ತನ್ನ ತಂದೆಯ ರಿವಾಲ್ವರ್‌ನಿಂದಲೇ ಗುಂಡಿಕ್ಕಿಕೊಂಡು ಪ್ರಾಣವನ್ನೇ ಬಿಟ್ಟ.

ಮಗನ ಮೇಲೆ ಅಪಾರ ಮಮತೆ ಹೊಂದಿದ್ದ ಶಂಕರ್ ಅಂದಿನಿಂದ ಕೊನೆಯವರೆಗೂ ಮಗನ ಅಗಲಿಕೆಯ ಕೊರಗಿನಲ್ಲೇ ಕಾಲ ಕಳೆದರು.



ಪ್ರಾಣಿ ಪ್ರೀತಿಯ ಪರಾಕಾಷ್ಠೆ

ಸದಾ ಕಾಡು ಮತ್ತು ಪ್ರಾಣಿಗಳ ಬಗ್ಗೆಯೇ ಧ್ಯಾನಿಸುತ್ತಿದ್ದ ಶಂಕರ್ ಅವರಲ್ಲಿ ಪ್ರಾಣಿ ಪ್ರೀತಿ ಎಷ್ಟಿತ್ತೆಂದರೆ ಅವರು ಎಲ್ಲೇ ಹೋದರೂ ಅವರ ಸುತ್ತ ಹತ್ತಾರು ನಾಯಿಗಳು ನೆರೆದಿರುತ್ತಿದ್ದವು. ಎಲ್ಲೋ ನಡೆದ ಹುಲಿ, ಆನೆಯಂಥ ಕಾಡು ಪ್ರಾಣಿಗಳ ಹತ್ಯೆಗೆ ಶಂಕರ್ ಮಮ್ಮಲ ಮರುಗುತ್ತಿದ್ದರು. ಅದರ ವಿರುದ್ಧ ತಮ್ಮ ದನಿಯೆತ್ತುತ್ತಿದ್ದರು.

R B P LANKESH, Kannada Weekly Price Rs. 12/- 30-7-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.



ಮಾನಸಿ
ರಾಧಿಕಾ ಪಂಡಿತ್
ಶುಭಾ ಪೂಂಜ
ಸಂಗೀತಾ ಶೆಟ್ಟಿ

ಮೊಗ್ಗರಳಿ ಹೂವಾಗಿ...

■ಅರುಣ್ ಕುಮಾರ್.ಜೆ

'ಮೊಗ್ಗಿನ ಮನಸ್ಸು' ಚಿತ್ರ ರಿಲೀಸಾಗಬೇಕಿದ್ದ ದಿನದಂದೇ ಅದು ರದ್ದಾಗಿ, ಚಿತ್ರದ ನಿರ್ಮಾಪಕ ಮತ್ತು ನಿರ್ದೇಶಕ ದೆಹಲಿಯ ಟ್ರಿಬ್ಯೂನಲ್‌ಗೆ ಹೊರಟುನಿಂತಿದ್ದಾಗ ನಿರ್ದೇಶಕ ಶಶಾಂಕ್ 'ಲಂಕೇಶ್' ವಾರ ಪತ್ರಿಕೆಗೆ ನೀಡಿದ್ದ ಸಂದರ್ಶನದಲ್ಲಿ ಒಂದು ಮಾತು ಹೇಳಿದ್ದರು: "ನಾನು ಯಾರಿಗಾಗಿ ಸಿನಿಮಾ ಮಾಡಿದ್ದೆನೋ ಅವರೇ ಸಿನಿಮಾ ನೋಡಲಾಗುವುದಿಲ್ಲ ಎಂದಮೇಲೆ ನಾನು ಸಿನಿಮಾ ಮಾಡಿ ಪ್ರಯೋಜನವಾದರೂ ಏನು?" ಎಂದು.

ಶಶಾಂಕ್‌ರವರ ಈ ಪ್ರಶ್ನೆಗೆ 'ಮೊಗ್ಗಿನ ಮನಸು' ಚಿತ್ರವೇ ಉತ್ತರ ನಿಡುತ್ತದೆ. ಹದಿಹರೆಯದವರಿಗೆಂದೇ ಮಾಡಲಾಗಿರುವ ಈ ಚಿತ್ರದಲ್ಲಿ ಆ ವಯಸ್ಸಿನ ಹುಡುಗಿಯರು ಹೇಗೆ ಪ್ರೀತಿ, ಪ್ರೇಮಗಳ ಬಲೆಗೆ ಸಿಲುಕುತ್ತಾರೆ, ಅಸಲಿಗೆ ಅವರ ಮನಸ್ಸಿನಲ್ಲಿ ಹುಟ್ಟಿರುವುದು ನಿಜವಾದ ಪ್ರೀತಿಯೋ ಅಥವಾ ಬರೀ ಆಕರ್ಷಣೆಯೋ? ಎಂಬ ಪ್ರಶ್ನೆಗಳಿಗೆ ನಾಲ್ವರು ಹೆಣ್ಣುಮಕ್ಕಳ ಉದಾಹರಣೆಯ ಮೂಲಕ ಬಿಡಿಸುತ್ತಾ ಹೋಗುತ್ತಾರೆ.



ಆಗತಾನೆ ಕಾಲೇಜಿಗೆ ಸೇರಿದ ಹುಡುಗಹುಡುಗಿಯರಿಗೆ ಪ್ರೀತಿ ಪ್ರೇಮದ ಅರ್ಥವೇ ಗೊತ್ತಿರುವುದಿಲ್ಲ, ಆದರೆ ಅವರಲ್ಲಿ ಬಹಳಷ್ಟು ಜನ ಅದೆಂಥದೋ ಮೋಹಕ್ಕೆ ಬೀಳುತ್ತಾರೆ. ಆ ಕ್ಷಣಕ್ಕೆ ಅವರಿಗೆ ಬೇಕಿರುವುದು ಒಬ್ಬ ಜೊತೆಗಾರ ಮಾತ್ರ. ತನ್ನತ್ತ ಆಕರ್ಷಿತನಾಗಿರುವ ಆ ಹುಡುಗ ಒಳ್ಳೆಯವನಾ? ಆತನ ಗುಣ ಎಂಥದ್ದು? ಮುಂದಾಗುವ ಅನಾಹುತಗಳು...? ಈ ಯಾವುದನ್ನೂ ತಲೆಗೇ ಹಾಕಿಕೊಳ್ಳದ, ಹಾಕಿಕೊಳ್ಳಲಾಗದ ವಯಸ್ಸದು. ಇದರೊಂದಿಗೆ ಬೆಳೆದುನಿಂತ ಮಕ್ಕಳೊಂದಿಗೆ ಸದಾ ಜಗಳಕ್ಕೆ ನಿಲ್ಲುವ, ಅವರ ಮನನೋಯಿಸುವ ಪೋಷಕರೂ ಇರುತ್ತಾರೆ.

ಇನ್ನು ತಮ್ಮ ಮಕ್ಕಳು ಓದಿ ವಿದ್ಯಾವಂತರಾಗಲಿ ಎಂದು ತಮ್ಮ ಮನೆ ಮಠ, ಆಸ್ತಿಗಳನ್ನೆಲ್ಲಾ ಮಾರಿ ದುಬಾರಿ ಶುಲ್ಕಗಳನ್ನು ನೀಡಿ ಎಂಜಿನಿಯರಿಂಗ್, ವೈದ್ಯಕೀಯ ಕೋರ್ಸುಗಳಿಗಾಗಿ ಸೇರಿಸುವ ತಂದೆತಾಯಂದಿರೂ ಇರುತ್ತಾರೆ. ಆದರೆ ನಗರಕ್ಕೆ ಅಂಟಿಕೊಂಡ ಯುವಕ-ಯುವತಿಯರು ಓದುವ ವಯಸ್ಸಲ್ಲಿ ತಮಗಿರುವ ಮಿತಿಗಿಂತ ಮುಂದೆ ಸಾಗಿ ಬೇಲಿ ದಾಟುತ್ತಾರೆ. ಇದರಿಂದ ಮಾನಸಿಕವಾಗಿ ಖಿನ್ನರಾಗಿ ಬದುಕಿ ಬಾಳಬೇಕಾದ ಅಮೆಚ್ಯೂರ್ ವಯಸ್ಸಿನಲ್ಲಿ ಇಲ್ಲದ ಲವ್ವು, ಅಫೇರ್‌ಗಳಿಗೆ ಮತ್ತು ಅಫೆಕ್ಷನ್ನುಗಳೊಂದಿಗೆ ತಮ್ಮ ಜೀವನವನ್ನು ತಳುಕುಹಾಕಿಕೊಳ್ಳುತ್ತಾರೆ. ಅವರ ಲೆಕ್ಕಾಚಾರಗಳು ತಪ್ಪಿದಾಗ ಹತಾಶೆಯ ಹೊಂಡಕ್ಕೆ ಬಿದ್ದು ಆತ್ಮಹತ್ಯೆಯ ದಾರಿ ಹಿಡಿದು ತಮ್ಮ ಬಂಗಾರದಂಥ ಬಾಳನ್ನು ನಾಶಮಾಡಿಕೊಳ್ಳುತ್ತಾರೆ. ಇದರಿಂದ ಹೆತ್ತ ಕರುಳಿಗಾಗುವ ನೋವು, ಹಿಂಸೆ, ಆಕ್ರಂದನ....

ಈ ಎಲ್ಲ ಸಮಸ್ಯೆಗಳನ್ನು ಒಂದು ಚಿತ್ರದಲ್ಲಿ ಹಿಡಿದಿಡುವುದು ಸುಲಭವಲ್ಲ, ಆದರೂ ಇಂಥ ಸೂಕ್ಷ್ಮ ವಿಚಾರವನ್ನು ಕೈಗೆತ್ತಿಕೊಂಡು ಸಂದರ್ಭಕ್ಕೆ ತಕ್ಕ ತಿರುವುಗಳನ್ನು ನೀಡುತ್ತಾ ಹೋಗಿರುವುದು 'ಮೊಗ್ಗಿನ ಮನಸ್ಸಿ'ನ ನಿರ್ದೇಶಕ ಶಶಾಂಕ್‌ರ ಜಾಣ್ಮೆಯನ್ನು ತೋರುತ್ತದೆ.

ಬೆಳೆದ ಮಕ್ಕಳ ಬಳಿ ತಂದೆತಾಯಂದಿರು ಹೇಗೆ ವರ್ತಿಸಬೇಕು? ಆ ವಯಸ್ಸಿನವರ ದೇಹದಲ್ಲಾಗುತ್ತಿರುವ ಬದಲಾವಣೆಗಳೇನು? ಆ ವಯಸ್ಸಿನಲ್ಲಿ ಅವರು ಹಾದಿ ತಪ್ಪದಹಾಗೆ ಯಾವ ರೀತಿ ಎಚ್ಚರ ವಹಿಸಬೇಕು? ಎಂದು ಈ ಚಿತ್ರ ಸೂಕ್ಷ್ಮವಾಗಿ ತಿಳಿಸುತ್ತದೆ. ಹಾಗೆಯೇ ಇನ್ನೊಂದು ಕಡೆ ಕೇವಲ ಮೋಜಿಗಾಗಿ ಹುಡುಗಿಯರ ಸಂಗ ಬಯಸುವ ಹರೆಯದ ಹುಡುಗರ ದಾಹ, ತನ್ನ ವಾಂಛೆ ತೀರಿದ ಮೇಲೆ ಹುಡುಗರು ಬದಲಾಗುವ ರೀತಿ, ಹುಡುಗಿಯರು ಸಂಗಾತಿಗಾಗಿ ಹಂಬಲಿಸುವ ಪರಿ, ಒಂದು ಹೆಜ್ಜೆ ಮುಂದೆ ಹೋಗಿ ತಮಗೆ ವಿದ್ಯಾರ್ಜನೆ ಮಾಡುವ ಶಿಕ್ಷಕರಿಗೇ ಮರುಳಾಗುವ ಸೋಜಿಗ.... ಇದೆಲ್ಲವನ್ನು ಶಶಾಂಕ್ ಚೆನ್ನಾಗಿ ಸೆರೆಹಿಡಿದಿದ್ದಾರೆ.

ಈ ಚಿತ್ರ ಕೇವಲ ಮನರಂಜನೆಯನ್ನು ಮಾತ್ರ ನೀಡುವುದಿಲ್ಲ, ಅದರೊಂದಿಗೆ ಮಕ್ಕಳನ್ನು ಹೆತ್ತವರ ಮನಸ್ಸಿನಲ್ಲಿ ತಮ್ಮ ಮಕ್ಕಳನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುವಂಥ ವೈದ್ಯಕೀಯ ಮನೋಭಾವನೆಯನ್ನು ಬಿತ್ತುತ್ತದೆ. ಒಂದು ವೇಳೆ ಈ ಚಿತ್ರ ಸೆನ್ಸಾರ್‌ನವರು ಬೀಸಿದ ಏಟಿಗೆ ಸಿಕ್ಕಿದ್ದರೆ ಒಂದೊ ಒಳ್ಳೆಯ ಸಿನಿಮಾದ ಕತ್ತಿಗೆ ಹಿಸುಕಿದಂತಾಗುತ್ತಿದ್ದುದು ನಿಜ. ■

ಅದ್ಭುತ ಛಾಯಾಗ್ರಹಣ



'ಮುಂಗಾರು ಮಳೆ'ಯ ಕೃಷ್ಣ 'ದುನಿಯಾ'ದ ಸತ್ಯಾ ಹೆಗಡೆಯ ನಂತರ ಕ್ಯಾಮೆರಾ ಕೈಚಳಕದಲ್ಲಿ ಮೋಡಿಮಾಡಿರುವ ಮತ್ತೊಬ್ಬ ಯುವಕನೆಂದರೆ 'ಮೊಗ್ಗಿನ ಮನಸ್ಸು' ಚಿತ್ರದ ಛಾಯಾಗ್ರಾಹಕ ಚಂದ್ರಶೇಖರ್. ಪ್ರತಿಯೊಂದು ಫ್ರೇಂಅನ್ನೂ ಅದ್ಭುತವಾಗಿ ಈತ ಸೆರೆಹಿಡಿದಿದ್ದಾನೆ. ನೆರಳು-ಬೆಳಕುಗಳ ವೇರಿಯೇಷನ್, ಗ್ರೇಡಿಯೇಷನ್ ನೋಡುಗರನ್ನು ಉಲ್ಲಸಿತಗೊಳಿಸುತ್ತದೆ.

ಗೌರಿಬಿದನೂರಿನಂಥ ಸಣ್ಣ ಊರಿನಿಂದ ಬಂದಿರುವ, ಇನ್ನೂ ಮೂವತ್ತೂ ದಾಟದ ಈ ಹುಡುಗನಲ್ಲಿ ಎಷ್ಟು ಪ್ರತಿಭೆ ಇದೆಯೆಂದರೆ ತನ್ನ ಮೊದಲ ಚಿತ್ರ 'ಸವಿಸವಿ ನೆನಪು' ಮೂಲಕವೇ ಭರವಸೆ ಮೂಡಿಸಿದ್ದ ಮುಂದಿನ ವಾರ ಬಿಡುಗಡೆಯಾಗುತ್ತಿರುವ 'ತಾಜ್‌ಮಹಲ್' ಚಿತ್ರಕ್ಕೂ ಈತನದ್ದೇ ಕ್ಯಾಮೆರಾ ಕೆಲಸ.



ಬಿರಿದ ಮೊಗ್ಗು ಅರಳಿದ ಹೂಗಳು

'ಮೊಗ್ಗಿನ ಮನಸ್ಸು' ಚಿತ್ರದ ಮುಖಾಂತರ ಅಪ್ಪಟ ಕನ್ನಡದ ನಾಲ್ಕು ಮುದ್ದಾದ ನಟಿಯರು ಕನ್ನಡ ಚಿತ್ರಕ್ಕೆ ಸಿಕ್ಕಂತಾಗಿದೆ. ರಾಧಿಕಾ ಪಂಡಿತ್ ಸಖತ್ ಇನೊಸೆಂಟಾಗಿ ಕಾಣಿಸಿದರೆ, ಶುಭಾ ಪೂಂಜಾ ಮನೋಜ್ಞವಾಗಿ ನಟಿಸಿದ್ದಾಳೆ. ಇನ್ನುಳಿದಂತೆ ಸಂಗೀತಾ ಶೆಟ್ಟಿ ಮತ್ತು ಮಾನಸಿ ಸಹ ಸುಂದರವಾಗಿ ನಟಿಸಿ ಸೈ ಎನಿಸಿಕೊಂಡಿದ್ದಾರೆ. 'ಮೊಗ್ಗಿನ ಮನಸ್ಸು' ಚಿತ್ರ ಅರಳುವುದರೊಂದಿಗೆ ಕನ್ನಡದ ನೆಲದಲ್ಲೇ ಬೆಳೆದ ಮೊಗ್ಗಿನಂತಹ ಈ ನಾಲ್ಕು ಯುವತಿಯರೂ ಅರಳಿ ನಿಂತಿದ್ದಾರೆ.

ಯಶ್‌ಗೆ ಯಶಸ್ಸು?



ಈ. ಕೃಷ್ಣಪ್ಪ ನಿರ್ಮಾಣದ 'ಮುಂಗಾರು ಮಳೆ' ಮುಖಾಂತರ ಸೂಪರ್ ಸ್ಟಾರ್ ಆದ ಕಾಮಿಡಿ ಟೈಮ್ ಗಣೇಶ್‌ನಂತೆಯೇ 'ಮೊಗ್ಗಿನ ಮನಸ್ಸು' ಚಿತ್ರದ ಪ್ರಮುಖ ಪಾತ್ರಧಾರಿ ಯಶ್‌ಗೆ ಈ ಸಿನಿಮಾ ಸ್ಟಾರ್ ವ್ಯಾಲ್ಯೂ ತಂದುಕೊಡುವುದರಲ್ಲಿ ಸಂದೇಹವಿಲ್ಲ, ಯಾಕೆಂದರೆ ಈತ ಪ್ರತೀ ದೃಶ್ಯ ಮತ್ತು ಹಾಡುಗಳಲ್ಲಿ ತುಂಬಾ ಕ್ಯೂಟ್ ಎನಿಸುವಷ್ಟು ಚೆನ್ನಾಗಿ ಕಾಣಿಸುತ್ತಾನೆ. ನಟನೆಯಲ್ಲೂ ಅಷ್ಟೆ. ಈಗಾಗಲೇ ಹಲವಾರು ಧಾರಾವಾಹಿಗಳಲ್ಲಿ ನಟಿಸಿರುವ ಈತ ನಾಗೇಂದ್ರ ಅರಸ್ ನಿರ್ದೇಶನದ 'ರಾಕಿ' ಚಿತ್ರದಲ್ಲಿ ಪೂರ್ಣ ಪ್ರಮಾಣದ ನಾಯಕನೂ ಹೌದು. ಈತ ಆಯ್ಕೆಯಲ್ಲಿ ಎಡವದಿದ್ದರೆ ಚಿತ್ರರಂಗದಲ್ಲಿ ಮಿಂಚುವುದರಲ್ಲಿ ಸಂದೇಹವಿಲ್ಲ. ಈ ಚಿತ್ರದಲ್ಲಿರುವ ಮಿಕ್ಕ ಹುಡುಗರೂ ಅಷ್ಟೇ, ತೀರ ಹೀರೋ ಮೆಟೀರಿಯಲ್ ಅಲ್ಲವಾದರೂ ತಮ್ಮ ಪಾತ್ರಗಳಿಗೆ ಮೋಸ ಮಾಡಿಲ್ಲ, ಇವರಿಂದ ಅಭಿನಯ ತೆಗೆದಿರುವ ಶಶಾಂಕ್‌ಗೇ ಈ ಕ್ರೆಡಿಟ್ಟೂ ಸಲ್ಲಬೇಕು.

ಸೆನ್ಸಾರ್ ಎಷ್ಟು ಸರಿ?

ನಾಲ್ಕು ಫೈಟು, ಒಂದು ಐಟಂ ಸಾಂಗು, ಜೊತೆಗೊಂದು ರೇಪ್ ಸೀನು ಮತ್ತು ಹಲವು ದ್ವಂದ್ವಾರ್ಥದ ಡೈಲಾಗುಗಳು... ಇವೆಲ್ಲ ಇರುವ ಮಾಮೂಲಿ ಮಸಾಲಾ ಸಿನಿಮಾಗಳ ಮೇಲೆ ಸೆನ್ಸಾರ್ ಮಂಡಳಿಯವರು ಬೇಕಿದ್ದರೆ ಕತ್ತರಿ ಪ್ರಯೋಗಿಸಲಿ, ಅಥವಾ ಅವುಗಳಿಗೆಂದೇ 'A++' ಎಂಬ ಹೊಸ ಸರ್ಟಿಫಿಕೇಟನ್ನೂ ಸಿದ್ಧಪಡಿಸಿಕೊಳ್ಳಲಿ. ಅದನ್ನು ಯಾರೂ ಪ್ರಶ್ನಿಸುವುದಿಲ್ಲ.

ಆದರೆ ಇಂದಿನ ಸಾಮಾಜಿಕ ಸಮಸ್ಯೆಗಳ, ಅದರಲ್ಲೂ ಹದಿಹರೆಯದವರ ಬದುಕಿನಲ್ಲಿನ ಆತಂಕಗಳನ್ನೇ ಕಥಾವಸ್ತುವನ್ನಾಗಿಸಿಕೊಂಡು ಒಂದು ಸದಭಿರುಚಿಯ ಸಿನಿಮಾವನ್ನು ಮಾಡವವರಿಗೂ 'ಎ' ಸರ್ಟಿಫಿಕೇಟ್ ನೀಡಿದರೆ ಅದು ಸರಿಯೇ?

ಸೆನ್ಸಾರ್ ಮಂಡಳಿಯವರೂ ಕಾಲಕಾಲಕ್ಕೆ ಸಮಾಜದೊಂದಿಗೆ ಬದಲಾಗುತ್ತಾ ಅದರ ಹೊಸ ಟ್ರೆಂಡ್‌ಗಳನ್ನು ಅರ್ಥಮಾಡಿಕೊಳ್ಳಬೇಕಲ್ಲವೇ? 'ಮೊಗ್ಗಿನ ಮನಸ್ಸು' ಚಿತ್ರವನ್ನು ನೋಡಿದನಂತರ ಈ ಪ್ರಶ್ನೆಗಳು ವೀಕ್ಷಕರಲ್ಲಿ ಮೂಡಿದರೆ ಅಚ್ಚರಿ ಇಲ್ಲ. ■

ನೋಡುಗರ ಹೃದಯಕ್ಕೆ ಹತ್ತಿರವಾದ ಚಿತ್ರ

ಬೆಂಗಳೂರಿನಲ್ಲಿರುವ ಸೆನ್ಸಾರ್ ಆಫೀಸರ್ ಚಂದ್ರಶೇಖರ್ ಅವರು 'ಮೊಗ್ಗಿನ ಮನಸು' ಚಿತ್ರವನ್ನು "ಸೆಕ್ಸ್ ಚಿತ್ರ" ಎಂದಿದ್ದರು. ಅದರಿಂದ ಕುಪಿತರಾಗಿದ್ದ ಈ ಚಿತ್ರದ ನಿರ್ಮಾಪಕ ಈ. ಕೃಷ್ಣಪ್ಪ "ಸೆಕ್ಸ್ ಚಿತ್ರ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವ ಅಗತ್ಯ ನನಗಿಲ್ಲ" ಎಂದು ಆರ್ಭಟಿಸಿದ್ದರು.

ಈ ಜಗಳದಿಂದಾಗಿ 'ಮೊಗ್ಗಿನ ಮನಸ್ಸು' ಸೆನ್ಸಾರ್ ಆಫೀಸರ್ ಹೇಳಿದಂತೆ ಸೆಕ್ಸ್ ಚಿತ್ರವೋ? ಅಥವಾ ಮಾಮೂಲಿ ಹುಡುಗಹುಡುಗಿಯರ ಪ್ರೇಮದ ಕಥೆಯೋ? ಎಂಬ ಕುತೂಹಲ ಪ್ರೇಕ್ಷಕನಿಗೆ ಮಾತ್ರವಲ್ಲ, ಗಾಂಧಿನಗರದವರಿಗೂ ಇತ್ತು. ಈಗ ಈ ಕುತೂಹಲಕ್ಕೆಲ್ಲಾ ತಿಲಾಂಜಲಿ ಹಾಕುವ ಸಮಯ ಬಂದಿದೆ.

ಟೀನೇಜ್ ಹುಡುಗಹುಡುಗಿಯರ ಹೃದಯ ದಲ್ಲಿ ಉಂಟಾಗುವ ಪ್ರೀತಿ, ಪ್ರೇಮ, ತಳಮಳ ಮತ್ತು ಹೆತ್ತವರ ಹೃದಯದಲ್ಲಿ ಉಂಟಾಗುವ ಕೋಲಾಹಲವೇ ಈ ಚಿತ್ರದ ಕಥಾವಸ್ತು. ಕನ್ನಡ ಚಿತ್ರರಂಗದ ಮಟ್ಟಿಗೆ ಇಲ್ಲಿಯವರೆಗೂ ಯಾರೂ ಮುಟ್ಟದಿರದಿದ್ದ ಕಥಾವಸ್ತು ಇದು. ಆದರೆ ಅಂತಹ ಒಂದು ಕತೆಯ ಎಳೆಗೆ ಕೈಹಾಕಿರುವ ನಿರ್ದೇಶಕ ಶಶಾಂಕ್ ಅತ್ಯಂತ ಜಾಣ್ಮೆಯಿಂದ ಮತ್ತು ಬಿಗಿಯಾದ ನಿರೂಪಣಾ ಶೈಲಿಯಿಂದ ತರುಣ ತರುಣಿಯರಿಗೆ ಪ್ರೀತಿ ಪ್ರೇಮದ ಬಗ್ಗೆ ಒಳ್ಳೆಯ ಸಂದೇಶ ನೀಡುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಚಿತ್ರದಲ್ಲಿ ಪ್ರೀತಿಯ ಹೆಸರಲ್ಲಿ ಅಶ್ಲೀಲತೆ ಯಿಲ್ಲ ಅಥವಾ ಯುವತಿಯರನ್ನು ಕಾಮದ ಪ್ರತೀಕಗಳಾಗಿ ತೋರಿಸಿಲ್ಲ, ಬದಲಿಗೆ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಆ ವಯಸ್ಸಿನಲ್ಲಿ ಹುಟ್ಟುವ ಪ್ರೀತಿಯ ಬಗ್ಗೆಗಿನ ಆಸಕ್ತಿ, ಅದರಿಂದಾಗುವ ಅನಾಹುತಗಳು, ಎಲ್ಲವನ್ನೂ ಮನಮುಟ್ಟುವಂತೆ ತೋರಿಸಲಾಗಿದೆ.



'ಮೊಗ್ಗಿನ ಮನಸ್ಸು' ಎಂಬ ಚಿತ್ರ ಮಾಮೂಲಿ ಕಳ್ಳ ಪೊಲೀಸ್, ಹೊಡೆದಾಟದ, ಲಾಂಗು ಮಚ್ಚುಗಳ ಆರ್ಭಟವಿಲ್ಲದ ಒಂದು ಅಪರೂಪದ ಚಿತ್ರ. ಇದರೊಂದಿಗೆ ಹೊಸ ಕಥಾವಸ್ತು ವಿರುವ ಚಿತ್ರವಾಗಿರುವುದರಿಂದ ಮನಸ್ಸಿಗೆ ಹಿತವಾದ ಅನುಭವ ನೀಡುತ್ತದೆ. ಅಷ್ಟೇ ಅಲ್ಲ, ಇಡೀ ಚಿತ್ರ ವಾಸ್ತವಿಕತೆಯ ತಳಹದಿಯಲ್ಲಿ ಸಾಗುವುದರಿಂದ ನೋಡುಗರ ಹೃದಯಕ್ಕೆ ಬೆಚ್ಚನೆಯ ಅನುಭವವನ್ನು ನೀಡುತ್ತದೆ.

ಇಲ್ಲಿ ಒಂದು ಮಾತನ್ನು ಹೇಳಬೇಕಿದೆ. ಇಂತಹ ಕಥಾವಸ್ತುವನ್ನು ಹೊಂದಿರುವ ಚಿತ್ರಗಳನ್ನು ಸೆನ್ಸಾರ್ ಮಂಡಳಿ ಸ್ವಲ್ಪ ಉನ್ನತ ಕ್ರೀಡಾ ಮನೋಭಾವದಿಂದ ನೋಡಿ ಸಹಕರಿಸಬೇಕಿದೆ. ಇಲ್ಲದಿದ್ದರೆ ಕನ್ನಡಿಗರಿಗೆ ಅದೇ ಲಾಂಗು ಮಚ್ಚುಗಳ ಚಿತ್ರಗಳೆ ಗತಿಯಾಗುತ್ತದೆ.

■ ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th M...